ಕೇಂದ್ರ ಲಲಿತಕಲಾ ಅಕಾಡೆಮಿಯು

ಪ್ರಾದೇಶಿಕ ಕಲಾ ಕೇಂದ್ರ : ಚೆನ್ನೈ

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ ಪ್ರಬಂಧ)



ಸಂಶೋಧಕರು

ನೋಂದಣಿ ಸಂಖ್ಯೆ : ೧೮೦೧೧೫೦೩೦೦೨೬

ಲಲಿತಕಲಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೯

ಕೇಂದ್ರ ಲಲಿತಕಲಾ ಅಕಾಡೆಮಿಯ

ಪ್ರಾದೇಶಿಕ ಕಲಾ ಕೇಂದ್ರ : ಚೆನ್ನೈ

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ ಸಂಪ್ರಬಂಧ)

ಸಂಶೋಧಕರು
ನೋಂದಣಿ ಸಂಖ್ಯೆ : ೧೮೦೧೧೫೦೩೦೦೨೬

ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೧೯

ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಾದೇಶಿಕ ಕಲಾ ಕೇಂದ್ರ : ಚೆನ್ನೈ

ಪರಿವಿಡಿ

ಅಧ್ಯಾಯ-ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಪ್ರಸ್ತಾವನೆ

ಪ್ರಾಚೀನ ಕಾಲದಿಂದಲೂ ಮಾನವನು ತನ್ನ ಕಲಾ ಚಟುವಟಿಕೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡ ನೆಲೆಗಳು ನಮಗೆ ನೋಡಲುಸಿಗುತ್ತವೆ. ಹಾಗೆಯೇ ಭಾರತದಲ್ಲಿ ನಾಗರಿಕತೆಯು ಬೆಳೆದಂತೆ ಕಲಾ ಚಟುವಟಿಕೆಗಳು ಹೇರಳವಾಗಿ ಮುಂದುವರೆಯುತ್ತಾ ಬಂದವು.ಮುಂದೆ ಹಲವು ಸಾಮ್ರಾಟರು ಆಳ್ವಿಕೆಯ ಕಾಲದಲ್ಲಿ ಕಲಾವಿದರಿಗೆ ರಾಜ-ಮಹಾರಾಜರ ಪ್ರೋತ್ಸಾಹದಿಂದ ಕಲಾವಿದರು ಕಲಾ ಚಟುವಟಿಕೆಗಳಲ್ಲಿ ತೊಡಗಿದ್ದರು. ಹೀಗೆ ರಾಜಾಶ್ರಯದ ಮೇರೆಗೆ ಕಲಾವಿದರು ಕಲಾಕೃತಿಗಳು ರಚಿಸಲು ಅವರ ರಾಜ್ಯದಲ್ಲಿಯೇ ಆಶ್ರಯಪಡೆದು ಪ್ರಾದೇಶಿಕವಾಗಿ ರಾಜರ ಹೇಳಿಕೆಯ ಮೇರೆಗೆ ಕಲಾಕೃತಿಗಳನ್ನು ರಚಿಸುತ್ತಿದ್ದರು ಎಂದು ನಾವು ದೃಶ್ಯಕಲಾ ಇತಿಹಾಸ ತೆಗೆದುನೋಡಿದರೆ ತಿಳಿಯುತ್ತದೆ. "ಚಿತ್ರಕಲೆ ಮಾನವನ ಸಂಸ್ಕೃತಿಯ ಒಂದು ಭಾಗವಾಗಿದ್ದು, ಇದು ಮನುಷ್ಯನ ಆಂತರಿಕ ಮತ್ತು ಬಾಹ್ಯ ಗುಣಲಕ್ಷಣಗಳನ್ನು ಪರಿವರ್ತನೆ ಮಾಡುವ ಶಕ್ತಿಯನ್ನು ಪಡೆದುಕೊಂಡಿದೆ.ಕಲಾಕೃತಿಗಳಿಂದ ಬಾಹ್ಯಬದುಕು ಸೌಂದರ್ಯಗೊಂಡರೆ ಅದರ ಆಸ್ವಾದನೆಯಿಂದ ಆಂತರಿಕ ಮನಸ್ಸು ಕಲೆಯಿಂದ ಪರಿಶುದ್ಧಗೊಳ್ಳುತ್ತದೆ.ಈ ಹಿನ್ನೆಲೆಯಲ್ಲಿ ನೋಡಿದಾಗ ಮನುಷ್ಯನ ಬದುಕುಗಳನ್ನುರೂಪಿಸುವ ಕೆಲಸವನ್ನು ಚಿತ್ರಕಲೆ ಆರಂಭಿಕ ಕಾಲದಿಂದಲೂ ಮಾಡಿಕೊಂಡು

ಬಂದಿರುವುದನ್ನು ಗಮನಿಸಬಹುದಾಗಿದೆ."[೧] ಎಂದು ಈ ಅಧ್ಯಯನದ ಸಂಶೋಧನೆಯಿಂದ ತಿಳಿದು ಬರುತ್ತದೆ.

ಇಲ್ಲಿ "ಭಾರತೀಯ ಚಿತ್ರಕಲೆಯ ಇತಿಹಾಸವನ್ನು ಅವಲೋಕಿಸಿದರೆ ಉತ್ತರ ಭಾರತದ ಮೊಘಲ್ ಮತ್ತು ರಜಪೂತ ಚಿತ್ರಕಲೆಗಳಿಗೆ ಅಗ್ರ ಸ್ಥಾನವಿತ್ತು. ದಖನ್‌ನಲ್ಲಿ ವಿಜಯನಗರ ಸಾಮ್ರಾಜ್ಯದ ಚಿತ್ರಕಲೆ, ಶಿಲ್ಪ, ವಾಸ್ತುಶಿಲ್ಪ ಕಲೆಗೆ ಅಗ್ರಸ್ಥಾನವಿದೆ. ದಖನಿ ಚಿತ್ರಕಲೆಯು ಮೊಘಲ್ ಚಿತ್ರಕಲೆಯ ಒಂದು ಪ್ರಾದೇಶಿಕ ಶೈಲಿ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆದರೇ ದಖನಿ ಚಿತ್ರಕಲೆ ಒಂದು ಸ್ವತಂತ್ರ ಕಲೆಯಾಗಿದೆ.ಇದು ಪರ್ಷಿಯಾ, ಟರ್ಕಿ ಹಾಗೂ ಸ್ಥಳೀಯ ಸಂಪ್ರದಾಯಗಳೊಂದಿಗೆ ಬೆಳೆದು ಬಂದಿರುವುದು ಸ್ಪಷ್ಟಉತ್ತರ ಭಾರತದ ಮೊಘಲ್ ಅಥವಾ ರಜಪೂತ ಚಿತ್ರಗಳಂತೆ ವಾಸ್ತವಿಕ ಘಟನೆಗಳನ್ನು ಯಥಾವತ್ತಾಗಿ ಚಿತ್ರಿಸುವ ಸಂಪ್ರದಾಯದಿಂದ ಕೂಡಿದೆ.ಕವಿ ಕಲ್ಪನೆಯಂತೆ ಭಾವನಾತ್ಮಕ ವಿಷಯಗಳನ್ನು ಆಧರಿಸಿ ಕೃತಿಗಳನ್ನು ರಚಿಸುವ ಸಂಪ್ರದಾಯವನ್ನು ಈ ಕಲೆಯಲ್ಲಿ ಕಾಣುತ್ತೇವೆ. ಆದರೆ ದಖನ್ ಸುಲ್ತಾನ ರಾಜ್ಯಗಳ ಪತನದ ನಂತರ ೧೮ನೆಯ ಶತಮಾನದಲ್ಲಿ ಕೇಂದ್ರೀಕೃತ ಆಡಳಿತ ಕೊನೆಗೊಂಡು ಸ್ಥಳೀಯ ಸಾಮಂತರು ತಲೆಯೆತ್ತಿದರು.ಈ ಸ್ಥಳೀಯ ಸಾಮಂತರಿಂದ ಸ್ಥಾಪನೆಯಾಗಿದ್ದ ಚಿತ್ರಶಾಲೆಗಳು ರಾಜಾಶ್ರಯವಿಲ್ಲದೆ ಮುಚ್ಚತೊಡಗಿದವು"[೨]ನಂತರ ಅಲ್ಲಿದ್ದ ಕಲಾವಿದರುಗಳು ಚಿಕ್ಕಪುಟ್ಟ ಶ್ರೀಮಂತರು ಮತ್ತು ಆಗತಾನೆ ಅಧಿಕಾರಕ್ಕೆ ಬರತೊಡಗಿದ ಬ್ರಿಟೀಷರ ಆಶ್ರಯ ಪಡೆದರು.

ಬ್ರಿಟೀಷರು ವ್ಯಾಪಾರಕ್ಕಾಗಿ ಬಂದು ಇಲ್ಲಿಯೇ ನೆಲೆಸಿ ಭಾರತದಲ್ಲಿ ಅವರ ಪ್ರಾಬಲ್ಯ ಮತ್ತು ಆಡಳಿತವನ್ನು ಭಾರತದಾದ್ಯಂತ ವಿಸ್ತರಿಸಿದರು. "ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ಮತ್ತು ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳ ಮೇಲೆ ತಮ್ಮ ಹಿಡಿತವನ್ನು ಸ್ಥಾಪಿಸುವ ಉದ್ದೇಶದಿಂದ ಬ್ರಿಟೀಷರು ಶಿಕ್ಷಣದಂತಹ ಅವಶ್ಯಕವಾದ ವಾತಾವರಣವನ್ನು ಸೃಷ್ಟಿಸಿದರು."[೩] ಬ್ರಿಟೀಷರು ನಮ್ಮಲ್ಲಿ ಕೇವಲ ಭೌಗೋಳಿಕ ಮತ್ತು ಭೂಪ್ರದೇಶಗಳ ಆಕ್ರಮಣ ಮಾತ್ರವಲ್ಲದೆ ಅಲ್ಲಿಯ ಜನರ ಭಾವನೆಗಳಮೇಲೆ ತಮ್ಮ ಪ್ರಭಾವ ಬೀರಿ ತಮ್ಮ ಹಿಡಿತವನ್ನು ಸಾಧಿಸಿದರು.

ಭಾರತದಲ್ಲಿ "ಸಾಮಾಜಿಕ-ಸಾಂಸ್ಕೃತಿಕ ಕ್ಷೇತ್ರಗಳನ್ನು ಪರಿವರ್ತಿಸತೊಡಗಿದ್ದ ಬ್ರಿಟೀಷರು ಅದಕ್ಕಾಗಿ ಕಲಾಶಿಕ್ಷಣದಂತಹ ಸಮರ್ಪಕ ಯೋಜನೆಗಳನ್ನು ಅನ್ವಯಗೊಳಿಸಲು ಆರಂಭಿಸಿದರು.ಈ ಮೂಲಕ ಭಾರತೀಯ ಕಲಾವಿದರ ಮನೋಭಾವಗಳನ್ನು ಪರಿವರ್ತಿಸಿ ಅದರ ಲಾಭ ಪಡೆಯುವ ಉದ್ದೇಶವಿತ್ತು.ಆದರೂ ಭಾರತೀಯ ಕಲಾಕ್ಷೇತ್ರದಲ್ಲಿ ಹೊಸಭಾಷೆ, ಶೈಲಿ, ಮಾಧ್ಯಮ ಹಾಗೂ ಸಮಕಾಲೀನ ಅಥವಾ ಆಧುನಿಕ ಕಲಾಶೈಲಿಯ ಉಗಮಕ್ಕೆ ಕಾರಣವಾದವು."[೪] ಈ ಮೇಲಿನ ಬದಲಾವಣೆಯಿಂದಭಾರತೀಯ ಸಂಪ್ರದಾಯಿಕ ಪದ್ಧತಿಯ ಚಿತ್ರಕಲೆಯ ಮೇಲೆ ಆಗಿರುವಅಪಾರವಾದ ಬದಲಾವಣೆಯನ್ನು ನಾವು ನೋಡಬಹುದು.

---

೧. ಪ್ರಕಾಶ ಬಿ. ಬಂಡಿ : ಚಿತ್ರಕಲಾ ಕ್ಷೇತ್ರಕ್ಕೆ ಗದುಗಿನ ವಿಜಯ ಕಲಾ ಮಂದಿರದ ಕೊಡುಗೆ. (ಅ.ಪ್ರ.ಕಿ.ಪ್ರ) ಕ.ಪಿ.ಪಿ. ಪುಟ ಸಂ:೧

೨. ಡಾ. ಸತೀಶ ಪಿ. ವಲ್ಲೇಪೂರೆ : ಮುಂಬಯಿ ಸರ್. ಜೆ.ಜೆ. ಕಲಾ ಶಾಲೆಯ ಪ್ರಾತಿನಿಧಿಕ ಕರ್ನಾಟಕದ ಕಲಾವಿದರು ಒಂದು ಅಧ್ಯಯನ. (ಅ.ಪ್ರಮ.ಪ್ರ) ಗು.ವಿ.ವಿ.ಗು. ಪುಟ ಸಂ:೧

೩. ಅದೇ. ಪುಟ ಸಂ:೨

೪. ಅದೇ ಪುಟ.

"ಬ್ರಿಟೀಷರ ದೃಷ್ಟಿಕೋನದಲ್ಲಿ ೧೯ನೇಶತಮಾನದ ಉತ್ತರಾರ್ಧದಲ್ಲಿ ಪಾಶ್ಚಿಮಾತ್ಯ ಕಲಾಶೈಲಿಯಲ್ಲಿ ಸ್ಥಳೀಯ ಕಲಾವಿದರಿಗೆ ತರಬೇತಿ ನೀಡಲು ೧೮೫೦ರಲ್ಲಿ ಮದ್ರಾಸ್, ೧೮೫೪ರಲ್ಲಿ ಕಲ್ಕತ್ತಾ, ೧೮೫೭ರಲ್ಲಿ ಮುಂಬೈ, ೧೮೭೫ರಲ್ಲಿ ಲಾಹೋರ್ ಅಂತಹ ನಗರಗಳಲ್ಲಿ ಬ್ರಿಟೀಷ್ ಸರಕಾರವು ಕಲಾಶಾಲೆಗಳನ್ನು ಸ್ಥಾಪನೆಮಾಡಿ ನಾಡಿನಲ್ಲಿ ಪಾಶ್ಚಿಮಾತ್ಯ ಕಲೆಗಳು ಬೆಳೆಯುವುದಕ್ಕೆ ನಾಂದಿಹಾಡಿತು."[೫] ಹೀಗೆ ಅನೇಕ ಭಾಗಗಳಲ್ಲಿ ಕಲಾ ಶಾಲೆಗಳು ಪ್ರಾರಂಭಗೊಂಡ ನಂತರ ಕಲಾ ಶಾಲೆಗಳಲ್ಲಿ ಭಾರತೀಯ ಹಾಗೂ ಪಾಶ್ಚಾತ್ಯ ಮಿಶ್ರ ಕಲಾ ಸಂಪ್ರದಾಯದ ಚಿತ್ರ ಮತ್ತು ಕಲೆ ಬೆಳೆಯತೊಡಗಿತು. ಹಾಗೆಯೇ ೧೯೪೭ರಲ್ಲಿ ಭಾರತ ಸ್ವತಂತ್ರಗೊಂಡ ನಂತರ ನಾಡಿನ ಕಲೆ, ಸಂಸ್ಕೃತಿಯನ್ನು ಬೆಳೆಸಲು ಮತ್ತು ಕಲಾವಿದರಿಗೆ ಪ್ರೋತ್ಸಾಹಿಸಲು "೧೯೫೪ ರಲ್ಲಿ ದೆಹಲಿಯಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿಯನ್ನು ಸ್ಥಾಪಿಸಲಾಯಿತು."[೬] ಇನ್ನೂ ಪ್ರಾದೇಶಿಕವಾಗಿ ಕಲಾವಿದರಿಗೆ ಅನುಕೂಲವಾಗಲೆಂದು ಚೆನ್ನೈ, ಕಲ್ಕತ್ತಾ, ಭುವನೇಶ್ವರ್, ಲಖನೌ, ದೆಹಲಿ ನಗರಗಳಲ್ಲಿ ಭಾರತದ ಎಲ್ಲಾ ಪ್ರದೇಶಗಳಿಗೆ ಅನುಕೂಲವಾಗುವಂತೆ ಅನೇಕಕಡೆಗಳಲ್ಲಿ ಪ್ರಾದೇಶಿಕ ಕಲಾ ಕೇಂದ್ರಗಳನ್ನು ಸ್ಥಾಪಿಸಿ ಅಲ್ಲಿ ವಿವಿಧ ಮಾಧ್ಯಮದಲ್ಲಿ ಕಲಾಕೃತಿ ರಚಿಸುವ ಕಲಾವಿದರಿಗೆ ಪ್ರೋತ್ಸಾಹಿಸಿ, ಬೆಳೆಸುವ ನಿಟ್ಟಿನಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿ ಕೈಗೊಂಡ ಕಾರ್ಯ ಅರ್ಥಪೂರ್ಣವಾದದ್ದು. ಹೀಗೆ ಆರಂಭಿಸಿದ ಕಲಾಕೇಂದ್ರಗಳಲ್ಲಿ ಚೆನ್ನೈ ಕಲಾಕೇಂದ್ರ ಕೂಡ ಒಂದಾಗಿದೆ.

ಚೆನ್ನೈ ಪ್ರಾದೇಶಿಕ ಕಲಾಕೇಂದ್ರ ಯುವ ಕಲಾವಿದರಿಗೆ ಬೆಳೆಯಲು ಹಾಗೂ ಒಳ್ಳೆಯ ಗುಣಮಟ್ಟದ ಕಲಾಪರಿಸರ, ಮಾರ್ಗದರ್ಶನ ಹಾಗೂ ಅನೇಕ ಬಗೆಯ ಕಲಾ ಚಟುವಟಿಕೆಗಳು ಪ್ರಾತ್ಯಕ್ಷಿಕೆಗಳು ನೀಡಿ ಯುವ ಕಲಾವಿದರಲ್ಲಿ ಬೆಳೆಯಲು ಆತ್ಮಸ್ಥೈರ್ಯ ತುಂಬುವಂತಹ ಕಾರ್ಯ ನಿರಂತರವಾಗಿ ಮಾಡುತ್ತಲಿದೆ.ಈ ಕಲಾಕೇಂದ್ರವು ಗುಣಮಟ್ಟದ ಸೃಜನಾತ್ಮಕ ಕಲಾಕೃತಿರಚನೆ, ಸಂಶೋಧನೆಗೆ ಪ್ರೋತ್ಸಾಹಿಸುತ್ತಾ ಕಲಾ ಕೇಂದ್ರಗಳಲ್ಲಿ ಹಿರಿಯ ಕಲಾವಿದರಿಂದ ಯುವಕಲಾವಿದರಿಗೆ ಮಾರ್ಗದರ್ಶನ ನೀಡುವುದರ ಜೊತೆಗೆ ಆರ್ಥಿಕವಾಗಿಯೂ ಧನಸಹಾಯ ಮಾಡುತ್ತಲಿದೆ.ಕೇಂದ್ರಗಳಲ್ಲಿ ಚಿತ್ರಕಲೆ, ಶಿಲ್ಪಕಲೆ, ಮುದ್ರಣಕಲೆ ಇತ್ಯಾದಿ ಮಾಧ್ಯಮಗಳಲ್ಲಿ ಕಲಾಕೃತಿರಚಿಸುವ ಯುವಕಲಾವಿದರಿಗೆ ಇದೊಂದು ಉತ್ತಮವಾದ ವೇದಿಕೆ ಕಲ್ಪಿಸಿ ಕೊಡುತ್ತಿದೆ.

ಹಾಗೂ ವಿನೂತನವಾದ ದೃಶ್ಯಕಲಾ ಮಾಧ್ಯಮ, ಶೈಲಿ, ತಂತ್ರಗಳನ್ನು ಕಲಾವಿದರು ಅರಿತುಕೊಳ್ಳಲುಈ ಕಲಾಪರಿಸರದೊಂದಿಗೆ ತಿಳಿದುಕೊಳ್ಳಲು ಸಹಕಾರಿಯಾಗುತ್ತಿದೆ. ಈ ಕಲಾಕೇಂದ್ರದಲ್ಲಿ ಕಲಿತ ಕಲಾವಿದರು ತಮ್ಮನ್ನು ಕಲಾ ಕ್ಷೇತ್ರದಲ್ಲಿ ಸಕ್ರೀಯವಾಗಿ ತೊಡಗಿಕೊಂಡು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಕಲಾ ಸಾಧನೆ ಮೂಲಕ ಹೆಸರುವಾಸಿಯಾಗಿದ್ದಾರೆ.

೫.ಡಾ. ಸತೀಶ ಪಿ. ವಲ್ಲೇಪೂರೆ : ಮುಂಬಯಿ ಸರ್. ಜೆ.ಜೆ. ಕಲಾ ಶಾಲೆಯ ಪ್ರಾತಿನಿಧಿಕ ಕರ್ನಾಟಕದ ಕಲಾವಿದರು ಒಂದು ಅಧ್ಯಯನ. (ಅ.ಪ್ರ.ಮ.ಪ್ರ) ಗು.ವಿ.ವಿ.ಗು. ಪುಟ ಸಂ:೨

೬. ವಿಜಯ ಕುಮಾರ ಎಸ್. ಕೊಪ್ಪದ್ : ರಾಷ್ಟ್ರ ಪ್ರಶಸ್ತಿ ಪಡೆದ ಕರ್ನಾಟಕದ ಕಲಾವಿದರ ಕುರಿತು ಒಂದು ಅಧ್ಯಯನ.(ಅ.ಪ್ರ.ಸಂ.ಪ್ರ) ಗು.ವಿ.ವಿ.ಗು. ಪುಟ ಸಂ:೩

ಇದುವರೆಗೆ ಈ ಕಲಾಕೇಂದ್ರವು ಸಾವಿರಾರು ದೃಶ್ಯ ಕಲಾವಿದರನ್ನು ಬೆಳಕಿಗೆ ತಂದಿರುವ ಶ್ರೇಯಸ್ಸು ಈ ಕೇಂದ್ರಕ್ಕೆ ಸೇರುತ್ತದೆ.

ದೃಶ್ಯಕಲೆಗಳು ಒಂದುನಾಡಿನ, ಒಂದು ಜನಾಂಗದ ಇತಿಹಾಸವನ್ನು ತಿಳಿಸುವ ಮಾಧ್ಯಮವಾಗಿವೆ. ಅವು ಪ್ರಾಚೀನ ಸಂಸ್ಕೃತಿಯನ್ನು ಪ್ರತಿಬಿಂಬಿಸುವುದರ ಜೊತೆಗೆ ಸಹೃದಯನಿಗೆ ಆಂತರಿಕ ಮನಸ್ಸಿನ ಉಲ್ಲಾಸ, ಸಂತೋಷವನ್ನು ತಂದು ಕೊಡುವ ಮಾಧ್ಯಮಗಳಾಗಿವೆ. "ಒಂದುಚಿತ್ರ ಹಾಗೂ ಶಿಲ್ಪಕಲೆಗೆ ಸಾವಿರಾರು ವರ್ಷಗಳ ಇತಿಹಾಸವನ್ನು ತರಬಲ್ಲ ಶಕ್ತಿ ಇರುತ್ತದೆ. ಚಿತ್ರಕಲೆ, ಶಿಲ್ಪಕಲೆ, ಸಾಹಿತ್ಯ, ಸಂಗೀತ, ನೃತ್ಯ ಮತ್ತು ನಾಟಕದಂತಹ ಪ್ರತಿಯೊಂದು ಲಲಿತಕಲೆಗಳು ಆಯಾ ಕಾಲಮಾನಕ್ಕೆ ಅನುಸಾರವಾಗಿ ಬೆಳೆದುಬರುತ್ತವೆ. ಸಮಕಾಲೀನ ಸಾಹಿತ್ಯ ಅಥವಾ ಕಲೆ ಆಯಾಕಾಲದ ನಾಗರಿಕತೆ ಸಂಸ್ಕೃತಿಯ ಪ್ರಭಾವಕ್ಕೊಳಗಾಗುತ್ತವೆ. ಒಂದು ದೇಶದ ಸಂಸ್ಕೃತಿ ಪರಂಪರೆಯನ್ನು ಪ್ರತಿನಿಧಿಸುವ ಅಧಿಕಾರ ಬಹಳಮಟ್ಟಿಗೆ ಆ ದೇಶದ ಲಲಿತ ಕಲೆಗಳಿಗೆ ಉಂಟು."[೭] ಲಲಿತ ಕಲೆಗಳಲ್ಲಿ ದೃಶ್ಯಕಲೆಯು ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ.

ಆದಿಮಾನವನಿಗೆ ಭಾಷೆಬರುವ ಪೂರ್ವದಲ್ಲಿಯೇ ಈ ಚಿತ್ರಕಲೆಯನ್ನು ತನ್ನ ಭಾವನೆಗಳ ಸಂವಾಹ ಮಾಧ್ಯಮವನ್ನಾಗಿ ಬಳಸಿಕೊಂಡಿದ್ದ ಕುರುಹುಗಳು ಪ್ರಾಚೀನ ಶಿಲೆ ಹಾಗೂ ಬಂಡೆಗಲ್ಲುಗಳ ಮೇಲೆ, ಗವಿ-ಗುಹಾಲಯಗಳಲ್ಲಿ ಭಿತ್ತಿಚಿತ್ರಗಳ ರೂಪದಲ್ಲಿ ಚಿತ್ರಿಸಿರುವುದು ಕಂಡುಬರುತ್ತದೆ.ಕ್ರಿಸ್ತ ಪೂರ್ವದಲ್ಲಿಯೇ ಉತ್ಕೃಷ್ಟ ಮಟ್ಟದ ನಾಗರೀಕತೆಯನ್ನು ಹೊಂದಿದ ಸಿಂಧೂ ಸಂಸ್ಕೃತಿಯ ನಾಗರೀಕತೆಯಲ್ಲಿ ಕಲೆಯು ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿರುವುದು ನೋಡಬಹುದು. ಶಿಲ್ಪಗಳು, ಉಬ್ಬುಶಿಲ್ಪಗಳು, ಮುದ್ರೆಗಳು, ದಿನನಿತ್ಯಬಳಸುವ ವಸ್ತುಗಳು ಮತ್ತು ಮಡಿಕೆ-ಕುಡಿಕೆಗಳ ಮೇಲೆ ಅಲಂಕಾರಿಕ ಕಲಾತ್ಮಕ ಗಿಡ-ಮರಗಳು, ಪ್ರಾಣಿ-ಪಕ್ಷಿಗಳು, ಆಟಿಕೆಯ ಕೃತಿಗಳು, ಮಾನವ ಕೃತಿಗಳು ಹಾಗೂ ಮುದ್ರೆಗಳಲ್ಲಿ ಧಾರ್ಮಿಕ ಸಂಕೇತಗಳಾದ ವರ್ತುಲ, ಸ್ವಸ್ತಿಕ, ನಂದಿ ಹೀಗೆ ಇತ್ಯಾದಿ ಹಲವಾರು ಸಾಂಕೇತಿಕವಾಗಿ ವಸ್ತುಗಳಿರುವ ಚಿತ್ರಗಳನ್ನು ರಚಿಸಿದ್ದನ್ನು ಇತಿಹಾಸದ ಪುಟಗಳನ್ನು ತಿರುವಿದಾಗ ನಾವು ನೋಡಬಹುದಾಗಿದೆ.

ಅಲ್ಲದೇ ಮಧ್ಯಯುಗದಲ್ಲಿ ಚಿತ್ರಕಲೆಯು ಹೆಚ್ಚಾಗಿ ಧಾರ್ಮಿಕ ಪ್ರಭಾವದಿಂದ ಬೆಳೆಯುವ ಮೂಲಕ ಧರ್ಮಪ್ರಚಾರದ ಮೂಲತತ್ವಗಳನ್ನು ಅನಾವರಣಗೊಳಿಸಿವೆ. ಶಾತವಾಹನರು, ವಾಕಟಕರು, ಚಾಲುಕ್ಯರು, ವಿಜಯನಗರ, ಜೈನ ಚಿತ್ರಕಲೆ, ಮೊಗಲ್‌ಚಿತ್ರಕಲೆ, ದಖನಿಚಿತ್ರ, ರಜಪೂತಚಿತ್ರ, ಆ ಕಾಲದಿಂದಲೂ ಚಿತ್ರಕಲೆಯನ್ನು ರಚನೆಮಾಡುತ್ತ ಬಂದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಹಲವಾರು ಶಾಸನಗಳಲ್ಲಿ, ಸಾಹಿತ್ಯಕೃತಿಗಳಲ್ಲಿ, ಚಿತ್ರಕಲೆಯ ಬಗ್ಗೆ ಅನೇಕ ವಿವರಗಳು ದೊರೆಯುತ್ತವೆ. ಅವುಗಳ ಶಾಸ್ತ್ರೋಕ್ತ ಅಧ್ಯಯನಗಳು ಇನ್ನೂ ನಡೆಯಬೇಕಾಗಿದೆಯೆಂದು ತಿಳಿದುಬರುತ್ತದೆ.

೭. ಡಾ. ಸತೀಶ ಪಿ. ವಲ್ಲೇಪೂರೆ : ಮುಂಬಯಿ ಸರ್. ಜೆ.ಜೆ. ಕಲಾ ಶಾಲೆಯ ಪ್ರಾತಿನಿಧಿಕ ಕರ್ನಾಟಕದ ಕಲಾವಿದರು ಒಂದು ಅಧ್ಯಯನ.(ಅ.ಪ್ರ.ಮ.ಪ್ರ) ಗು.ಎ.ಎ.ಗು. ಪುಟ ಸಂ:೪

ಮುಂದಿನ ಹೆಜ್ಜೆಗೆ ಹಿಂದಿನಹೆಜ್ಜೆ ಆಧಾರವಾಗಿರುವಂತೆ "ಚಿತ್ರಕಲೆಗೆ ಪ್ರಾಚೀನರು ಕೊಟ್ಟಂತಹ ಸ್ಥಾನ ಅಭೂತಪೂರ್ವವಾದದ್ದು. ಅದು ಹರಡಿಕೊಂಡಿರುವ ರೀತಿಗಳು ಹಲವಾರುಶಿಲ್ಪಕಲೆಗಳಿಗೆ ಚಿತ್ರಕಲೆಯು ಬುನಾದಿಯಾಗಿದೆ.ಗವಿಗಳಲ್ಲಿ, ಶಿಲೆಗಳಲ್ಲಿ, ದೇವಾಲಯಗಳಲ್ಲಿ, ಹಸ್ತಪ್ರತಿಗಳಲ್ಲಿ, ಪ್ರಾಚೀನ ಗ್ರಂಥಗಳಲ್ಲಿ, ಶಾಸನಗಳಲ್ಲಿ, ಮಠಗಳಲ್ಲಿ ಚರ್ಚುಗಳಲ್ಲಿ, ಮಸೀದಿಗಳಲ್ಲಿ, ಅರಮನೆಗಳಲ್ಲಿ ಹೀಗೆ ವಿವಿಧ ಬಗೆಯಲ್ಲಿ ಚಿತ್ರಕಲೆಯು ಬೆಳೆದುಕೊಂಡು ಬಂದಿದೆ.ಅಜಂತ, ಮೊಗಲ್, ರಜಪೂತ, ಕಾಂಗ್ರಾ, ರಾಗಮಾಲ ಚಿತ್ರಗಳು"[೮] ಜಗತ್ಪ್ರಸಿದ್ಧವಾಗಿ ಇಂದಿಗೂ ಉಳಿದುಕೊಂಡು ಬಂದಿವೆ.

"ದೃಶ್ಯಕಲೆಯು ಒಂದುವೃಕ್ಷದಂತೆ ಅದರಮೌಲ್ಯವು ಅಲ್ಲಿನ ಜನಜೀವನದ ಅಂತರ್ಗತ ಸಾಂಸ್ಕೃತಿಕ ಶಕ್ತಿಯಲ್ಲಿದೆ. ಆ ನೆಲದ ಸತ್ವ ಆ ನಿರ್ದಿಷ್ಟಕಾಲದ ಧೋರಣೆಗಳನ್ನು ಸ್ಪಷ್ಟಗೊಳಿಸುತ್ತದೆ."[೯] "ದೃಶ್ಯಕಲೆ ಮನುಷ್ಯನ "ಬದುಕಿನ ಚಿದಂಬರ ರಹಸ್ಯವೇ ಅಂತರಾಳದಲ್ಲಿ ಅಡಗಿರುವ ಸೃಜನಶೀಲತೆ"[೧೦] ಎನ್ನಬಹುದು.ಈ ಕಲೆ ಮಾನವನ ಪ್ರಥಮಭಾಷೆ, ಈ ಭಾಷೆ ಇಂದಿನ ವಿಶ್ವದ ಪ್ರತಿಯೊಬ್ಬ ಮಾನವನಿಗೆ ತಿಳಿಯಬಲ್ಲದಾಗಿದೆ.

"ಮನುಷ್ಯನಲ್ಲಿ ಅಡಗಿರುವ ಸೃಜನಶೀಲತೆ ಕ್ರಿಯಾತ್ಮಕತೆಗೆ ಹಲವಾರು ಮುಖಗಳಿವೆ. ಅವು ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಕಾವ್ಯ, ಶಿಲ್ಪ, ಚಿತ್ರಕಲೆಗಳಲ್ಲಿ ಈ ಶಕ್ತಿಯ ಸಾಕ್ಷಾತ್ಕಾರಗಳಿವೆ."[೧೧] ಈ ಕಲೆಗಳೆಲ್ಲ ನಮ್ಮ ದೇಶದ ಗತವೈಭವದ ಸಾಂಸ್ಕೃತಿಕ ಬದುಕಿನ ಜೀವಂತ ಸಾಕ್ಷಿಯಾಗಿವೆ. ಕಲೆ, ಸಂಸ್ಕೃತಿಯ ಜೀವನದ ಪ್ರತಿನಿಧಿ. ಒಂದು ದೇಶದ ಕಲೆ ಹಾಗೂ ಆ ದೇಶದ ಸಂಸ್ಕೃತಿಯನ್ನು ಸಮೃದ್ಧಗೊಳಿಸುವಲ್ಲಿ ಕಲಾ ಕೇಂದ್ರಗಳು, ಶಿಕ್ಷಣ ಸಂಸ್ಥೆಗಳು, ಅಕಾಡೆಮಿಗಳು ದೃಶ್ಯಕಲಾ ಕ್ಷೇತ್ರಕ್ಕೆ ಮಹತ್ವದ ಹಂತವಾಗಿವೆ.ಯುವ ಕಲಾವಿದರಲ್ಲಿ ಅಡಗಿರುವ ದೃಶ್ಯಕಲಾ ಚೈತನ್ಯವನ್ನು ಅಭಿವೃದ್ಧಿಗೊಳಿಸಲು ಕೇಂದ್ರ ಲಲಿತಕಲಾ ಅಕಾಡೆಮಿಯು ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಿ ಅದರ ಮೂಲಕ ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಿರುವುದು ಬಹುದೊಡ್ಡ ಕೊಡುಗೆಯಾಗಿದೆ.

ದೇಶದಲ್ಲಿ ರಾಜರಆಳ್ವಿಕೆಗಳು ಕೊನೆಗೊಳ್ಳುವ ಹಂತದಲ್ಲಿ "ಬ್ರಿಟೀಷರು ಭಾರತಕ್ಕೆ ಆಗಮಿಸಿ ಇಲ್ಲಿಯ ಕಲಾ ಚಟುವಟಿಕೆಗಳನ್ನು ವಿಭಿನ್ನವಾದ ನೆಲೆಗೆ ಕೊಂಡೊಯ್ದಿರುವುದನ್ನು ನೋಡಬಹುದಾಗಿದೆ.ದೇಶದ ಕೆಲವು ಭಾಗಗಳಲ್ಲಿ ಸಾವಿರಾರು ವರ್ಷಗಳಿಂದ ಸಂಸ್ಕೃತಿಯ ಪ್ರತೀತಿಗಳಂತೆ ಹರಡಿಕೊಂಡಿರುವ ಲಲಿತಕಲೆಗಳ ವಾರಸುದಾರಿಕೆ ನಮ್ಮ ಯುವಕಲಾವಿದರಿಗೆ ಸೇರಬೇಕು. ಚಿತ್ರಕಲೆಯ ಕಲಿಕೆಯ ಹಿನ್ನೆಲೆಯಲ್ಲಿ ಪರಾಮರ್ಶಿಸಿದಾಗ ಪ್ರಾಚೀನ ಭಾರತದಲ್ಲಿ ಇದ್ದಂತಹ ಪದ್ಧತಿಗಳು ನಂತರದ ದಿನಗಳಲ್ಲಿ ಬದಲಾವಣೆ ಹೊಂದಿರುವುದನ್ನು ನಾವು

೮. ಪ್ರಕಾಶ ಬಿ. ಬಂಡಿ : ಚಿತ್ರಕಲಾ ಕ್ಷೇತ್ರಕ್ಕೆ ಗದುಗಿನ ವಿಜಯ ಕಲಾ ಮಂದಿರದ ಕೊಡುಗೆ. (ಅ.ಪ್ರ.ಕಿ.ಪ್ರ.) ಕ.ವಿ.ವಿ. ಪುಟ ಸಂ:೨
೯. ಕರ್ನಾಟಕ ಕಲಾ ವಾರ್ತೆ ಸಂಚಿಕೆ ೧೦೮ (ಮೇ-ಜುಲೈ೨೦೧೮) ಲೇ. ಕೆ.ವಿ. ಸುಬ್ರಮಣ್ಯಂ. ಪುಟ ಸಂ: ೪೫
೧೦. ಪ್ರಕಾಶ ಬಿ. ಬಂಡಿ : ಚಿತ್ರಕಲಾ ಕ್ಷೇತ್ರಕ್ಕೆ ಗದುಗಿನ ವಿಜಯ ಕಲಾ ಮಂದಿರದ ಕೊಡುಗೆ. (ಅ.ಪ್ರ.ಕಿ.ಪ್ರ.) ಕ.ವಿ.ವಿ. ಪುಟ ಸಂ:೨
೧೧. ಅದೇ. ಪುಟ ಸಂ:೩

ನೋಡಬಹುದು.ಬ್ರಿಟೀಷ್ ವಸಾಹತುಶಾಹಿ ಪ್ರಭುತ್ವವು ಸ್ಥಳೀಯ ಶಿಕ್ಷಣ ಪದ್ಧತಿಗಳನ್ನು ಅದಕ್ಕಿರುವ ಸಂಸ್ಕೃತಿಯ ಮಹತ್ವಗಳನ್ನು ಅಲ್ಲಗಳೆಯುವ ಮೂಲಕ ಹೊಸ-ಹೊಸಪದ್ಧತಿಗಳನ್ನು ಶಿಕ್ಷಣ ಕ್ಷೇತ್ರದಲ್ಲಿ ಪರಿಚಯಿಸಿ"[೧೨] ಚಿತ್ರಕಲಾ ಶಿಕ್ಷಣಕ್ಕಾಗಿಯೇ ಕಲಾಶಾಲೆಗಳನ್ನು ಆರಂಭಿಸಿದ್ದರು ಈ ಮಾತು ಕಲಾ ಶಿಕ್ಷಣಕ್ಕೂ ಅನ್ವಯಿಸುತ್ತದೆ.

ಅಕಾಡೆಮಿ ಕಲಾಶಾಲೆಗಳು ಆರಂಭದ ಪೂರ್ವದಲ್ಲಿ "ಭಾರತದಲ್ಲಿ ಲಲಿತಕಲೆಗಳು ಗುರುಕುಲ ಪದ್ಧತಿಯಲ್ಲಿ ಕಲಿಸಲ್ಪಡುತ್ತಿದ್ದವು.ನಂತರದ ದಿನಗಳಲ್ಲಿ ಗುರುವನ್ನು ಆಶ್ರಯಿಸಿದ ಕಲಾಶಿಕ್ಷಣವನ್ನು ಆಸಕ್ತರು ಪಡೆದುಕೊಳ್ಳುತ್ತಿದ್ದರು.ತದನಂತರ ಎಲ್ಲ ಕ್ಷೇತ್ರಗಳಲ್ಲೂ ವಂಶಪಾರಂಪರಿಕ ಶಿಕ್ಷಣ ಪ್ರಾರಂಭವಾಯಿತು. ಭಾರತಕ್ಕೆ ವ್ಯಾಪಾರಕ್ಕೆ ಬಂದ ಬ್ರಿಟೀಷರು ಅವರ ಸಂಸ್ಕೃತಿಯನ್ನು ಎಲ್ಲಾ ಕಡೆ ಪ್ರಚಾರಕ್ಕೆ ಬರತೊಡಗಿತು.ಆ ಸಂದರ್ಭದಲ್ಲಿ ಬ್ರಿಟೀಷರು ಕಲಾ ಶಾಲೆಗಳನ್ನು ಸ್ಥಾಪಿಸಿ ಪಾಶ್ಚಾತ್ಯ ಶಿಕ್ಷಣ ಪದ್ಧತಿಯ ಬೋಧಿಸುವ ಮೂಲಕ ಅವರ ಅಭಿಪ್ರಾಯಗಳನ್ನು ನಮ್ಮ ಜನರಮೇಲೆ ಹೇರತೊಡಗಿದರು."[೧೩] ಹೀಗೆ ಸುಮಾರು ವರ್ಷಗಳ ಈ ಪರಿಸ್ಥಿತಿ ಮುಂದುವರಿಯಿತು.

ಭಾರತ ಸ್ವಾತಂತ್ರ್ಯದ ನಂತರ ಕೆಲವು ಕಲಾಶಿಕ್ಷಣಗಳು ಆರಂಭಗೊಂಡು ಕಲೆ, ಕಲಾವಿದರಿಗೆ ಪ್ರೋತ್ಸಾಹಿಸಲು ಭಾರತ ಸರಕಾರದಿಂದ ಕೇಂದ್ರ ಲಲಿತಕಲಾ ಅಕಾಡೆಮಿಯನ್ನು ಸ್ಥಾಪಿಸಲಾಯಿತು. ದೇಶದ ಕಲೆ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸಲು ಕೇಂದ್ರ ಲಲಿತಕಲಾ ಅಕಾಡೆಮಿ ಮತ್ತು ಪ್ರಾದೇಶಿಕ ಕಲಾ ಕೇಂದ್ರಗಳನ್ನು ಚೆನ್ನೈ, ಕಲ್ಕತ್ತಾ, ಭುವನೇಶ್ವರ, ಲಖನೌ, ದೆಹಲಿಗಳಂತಹ ಮಹಾ ನಗರಗಳಲ್ಲಿ ಸ್ಥಾಪಿಸಿ, ಯುವ ಕಲಾವಿದರಿಗೆ ಪ್ರೋತ್ಸಾಹಿಸುವ ಮತ್ತು ದೃಶ್ಯಕಲಾ ಕ್ಷೇತ್ರದಲ್ಲಿ ಅಧ್ಯಯನ ಶೀಲರನ್ನಾಗಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಉದ್ದೇಶ :

"ಕಲಾಕೃತಿ ರಚನೆ ಮಾಡುವ ವ್ಯಕ್ತಿಗಳು ಅಂದರೆ ಕಲಾವಿದರು ದೇಶ, ಕಾಲದ ಸಮಕಾಲೀನ ಐತಿಹಾಸಿಕ ಅರಿವು ಮೂಡಿಸುತ್ತಾರೆ. ಪ್ರಚಲಿತ ದಿನಗಳಲ್ಲಿ ಮಾನವನು ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಯೊಂದಿಗೆ ಜೀವನ ಸಾಗಿಸುತ್ತಿದ್ದು, ಸಾಮಾಜಿಕ ಮೌಲ್ಯಗಳಾದ ಕಲೆಯು ಮಾನವನ ವಿಕಾಸಕ್ಕಾಗಿ ಹಲವಾರು ರೀತಿಯಿಂದ ಸಹಾಯಕವಾಗುತ್ತದೆ. ಹೀಗಾಗಿ ಲಲಿತಕಲೆಗಳ ಬೆಳವಣಿಗೆಯ ಹೊಣೆಯನ್ನು ಅಕಾಡೆಮಿಗಳು ನಿರ್ವಹಿಸುತ್ತಿವೆ."[೧೪]ಭಾರತ ಸರಕಾರದ ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರೋತ್ಸಾಹದಾಯಕವಾದ ಕಲಾ ಕೇಂದ್ರಗಳು ಅನೇಕ ರೀತಿಯಲ್ಲಿ ದೃಶ್ಯಕಲಾ ಬೆಳವಣಿಗೆಗೆ ಪಾತ್ರವಾಗಿವೆ. ಅದರಲ್ಲಿ ವಿಶೇಷಎಂದರೆ ದೇಶದ ಎಲ್ಲಾ ಭಾಗಗಳಲ್ಲಿ ಕಲೆ ಉಳಿಸಲು, ಗುರುತಿಸಲು ಮತ್ತು ಗ್ರಾಮೀಣ ಯುವಕರಿಗೆ ಅನುಕೂಲವಾಗುವಂತೆ ಕಲಾ ಕೇಂದ್ರಗಳನ್ನು ಸ್ಥಾಪಿಸಿದ್ದು ಸಂತಸದ ವಿಷಯ. ಇಂತಹ "ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಾದೇಶಿಕ ಕಲಾ

೧೨. ಪ್ರಕಾಶ ಬಿ. ಬಂಡಿ : ಚಿತ್ರಕಲಾ ಕ್ಷೇತ್ರಕ್ಕೆ ಗದುಗಿನ ವಿಜಯ ಕಲಾ ಮಂದಿರದ ಕೊಡುಗೆ. (ಅಪ್ರ.ಕಿ.ಪ್ರ.) ಕ.ವಿ.ವಿ. ಪುಟ ಸಂ:೩
೧೩. ಚಿತ್ರಕಲಾವಿದ ಡಾ. ವಿ.ಜಿ. ಅಂದಾನಿಯವರು ಸಂದರ್ಶನದ ವೇಳೆ ನುಡಿದರು. ಸ್ಥಳ ಗುಲಬರ್ಗಾ : ೧೪ ಜುನ್ ೨೦೧೯
೧೪. ಅದೇ.

ಕೇಂದ್ರ ಚೆನ್ನೈ."ಇದರ ಕುರಿತು ಪರಿಚಯಿಸುವುದರೊಂದಿಗೆ ಅವುಗಳ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ಕೊಡುಗೆ ಕುರಿತು ಇಲ್ಲಿ ಪರಿಚಯಿಸುವ ಸಣ್ಣ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಕರ್ನಾಟಕದಲ್ಲಿ ೮೦ರ ದಶಕದಿಂದ ಗಂಭೀರವಾಗಿ ಚಿತ್ರಕಲೆಯ ಕುರಿತು ಚಿಂತನೆಗಳು, ಆಲೋಚನೆಗಳು, ಸಂಶೋಧನೆಗಳು ಆರಂಭವಾಗಿವೆ. ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಇತಿಹಾಸದಲ್ಲಿ ಲಲಿತಕಲೆಗಳ ಪಾತ್ರ ತುಂಬಾ ಮೌಲಿಕವಾದದ್ದು. ಈ ನಾಡನ್ನು ಕಟ್ಟುವಲ್ಲಿ ಅನೇಕ ಜನರ ಪರಿಶ್ರಮದ ಬೆವರಿದೆ. ಅದರಲ್ಲಿ ಕಲಾವಿದರು, ಕಲಾ ಸಂಸ್ಥೆಗಳು, ಅಕಾಡೆಮಿಗಳು, ಮತ್ತು ಕಲಾಕೇಂದ್ರಗಳ ಪಾತ್ರವನ್ನು ನಿರ್ಲಕ್ಷಿಸುವಂತಿಲ್ಲ. ಚಿತ್ರ, ಶಿಲ್ಪ ಕಲೆಗಳು ನಾಡಿನ ಅಮೂಲ್ಯ ಆಸ್ತಿಗಳಾಗಿವೆ. ಅಲ್ಲದೇ ಅವುಗಳು ಸಾವಿರಾರು ವರ್ಷದ ಇತಿಹಾಸವನ್ನು ಇಂದಿಗೂ ಸಾರಿ ಹೇಳುತ್ತಿವೆ. ಅವುಗಳ ಸಂರಕ್ಷಣೆಯ ದೃಷ್ಟಿಯಿಂದ ಹೆಚ್ಚಿನ ಪ್ರಮಾಣದಲ್ಲಿ ಅಧ್ಯಯನಗಳು ನಡೆಯದೇ ಇರುವುದು ಕಂಡುಬರುತ್ತದೆ. ನಾಡಿನ ಸಾಂಸ್ಕೃತಿಕ ಪರಂಪರೆಯ ಪ್ರತೀಕವಾಗಿರುವ ಚಿತ್ರ, ಶಿಲ್ಪಕಲೆಗಳು ಸಾಂಸ್ಕೃತಿಕ ಪರಂಪರೆಗೆ ಕಾರಣವಾದ ಕಲಾಕೇಂದ್ರದ ಕುರಿತಾದ ಸಂಶೋಧನೆಗಳು ಗಮನಾರ್ಹವಾಗಿ ನಡೆಯಬೇಕಾಗಿರುವುದು ಅವಶ್ಯಕವಾಗಿದೆ.

ನಾನು ಸ್ನಾತಕೋತ್ತರ ಪದವಿ ಅಭ್ಯಾಸದ ಸಮಯದಲ್ಲಿ ದೃಶ್ಯಕಲೆಯ ಹೆಚ್ಚಿನ ತಿಳುವಳಿಕೆಗಾಗಿ ಚೆನ್ನೈ ರಿಜಿನಲ್ ಸೆಂಟರ್‌ಗೆ ಪ್ರವೇಶ ಪಡೆಯಲು ಅರ್ಜಿಹಾಕಿದ್ದೆ.ಆಯ್ಕೆಯಾಗದಿದ್ದಕ್ಕೆ ನಿರಾಸೆಮೂಡಿಸಿತ್ತು.ಸ್ನಾತಕೋತ್ತರ ಪದವಿಅಂತಿಮ ವರ್ಷಕ್ಕೆ ಕಿರು ಪ್ರಬಂಧ ಬರೆಯಬೇಕಾಗಿತ್ತು.ಆಗ ಕಲಾಕೇಂದ್ರ ಕುರಿತು ಆಸಕ್ತಿ ಇರುವುದರಿಂದ ಈ ವಿಷಯವನ್ನು ಪ್ರಬಂಧ ರಚನೆಗೆ ಆಯ್ಕೆ ಮಾಡಿಕೊಂಡು ಪ್ರಬಂಧ ಸಲ್ಲಿಸಿದೆ.ಅದೃಷ್ಟವಶನನಗೆ ಹಂಪಿ ಕನ್ನಡ ವಿಶ್ವವಿದ್ಯಾಲಯ, ದೃಶ್ಯಕಲಾ ವಿಭಾಗದಲ್ಲಿ ಎಂ.ಫಿಲ್ ಅಧ್ಯಯನ ಮಾಡಲು ಅವಕಾಶದೊರೆಯಿತು.ನನ್ನ ಎಂ.ಫಿಲ್ ಮಾರ್ಗದರ್ಶಕರಾದ ಡಾ.ಮೋಹನ್‌ರಾವ್ ಬಿ.ಪಂಚಾಳರೊಂದಿಗೆ ಸಂಶೋಧನಾ ವಿಷಯದ ಕುರಿತು ಚರ್ಚೆನಡೆಸುವಾಗ ಅವರು ಸ್ನಾತಕೊತ್ತರ ಪದವಿ ಹಂತದಲ್ಲಿ ಬರೆದ ಕಿರುಸಂಶೋಧನೆಯ ಕುರಿತು ಕೇಳಿದರು ಆಗ ಚೆನ್ನೈ ರಿಜಿನಲ್ ಸೆಂಟರ್ ಬಗ್ಗೆ ವಿವರಿಸಿದೆ.ಇದರ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಿ ನಂತರ ಇದನ್ನೆ ಮುಂದುವರೆಸಲು ಸೂಚಿಸಿದರು.

ಪ್ರಾದೇಶಿಕ ಕಲಾ ಕೇಂದ್ರಗಳು ಕಲಾವಿದರಿಗೆ ಹಾಗೂ ದೃಶ್ಯಕಲಾ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಳ ಕುರಿತು ಹಾಗೂ ಕ್ಷೇತ್ರದ ಬೆಳವಣಿಗೆಗೆ ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಾದೇಶಿಕ ಕಲಾ ಕೇಂದ್ರಗಳು ನಿರ್ವಹಿಸುವ ಕಾರ್ಯ ಮತ್ತು ಮಹತ್ವವನ್ನು ಪರಿಚಯಿಸುವ ಒಂದು ಸಣ್ಣ ಪ್ರಯತ್ನವಾಗಿದೆ.ನಾಡಿನ ಕಲಾವಿದರಿಗೆ ಹಾಗೂ ಯುವಪೀಳಿಗೆಗೆ ಈ ಲಿಖಿತ ಪ್ರಬಂಧದ ಮೂಲಕ ಪರಿಚಯಿಸುವ ಕಾರ್ಯ ಇದರ ಮಹತ್ವ ಉದ್ದೇಶವಾಗಿದೆ.ಈ ಸಂಶೋಧನೆಯಿಂದ ಚೆನ್ನೈಕೇಂದ್ರವು ನನಗೆ ಸಂಪರ್ಕ ಇನ್ನಷ್ಟು ಹತ್ತಿರವಾಗುವ ಉದ್ದೇಶವಾಗಿದೆ.ಈ ಸಂಶೋಧನಾ ಪ್ರಬಂಧವನ್ನು

ಹೊರತಂದು, ಇದರ ಕುರಿತು ಇನ್ನಷ್ಟು ಸಂಶೋಧನೆ ಮಾಡುವ ಮುಂದಿನ ಸಂಶೋಧಕರಿಗೆ ದಾರಿ ಮಾಡಿಕೊಡುವ ಸಣ್ಣಪ್ರಯತ್ನವಾಗಿದೆ.

ಸ್ವರೂಪ :

ಪ್ರಸ್ತುತ ಅಧ್ಯಯನವು ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಾದೇಶಿಕ ಕಲಾಕೇಂದ್ರ ಚೆನ್ನೈ ಕುರಿತಾಗಿದ್ದು.ಅಧ್ಯಯನಕ್ಕೆ ಅನುಕೂಲವಾಗುವ ಹಿನ್ನಲೆಯಲ್ಲಿ ಆರು ಅಧ್ಯಯನಗಳಲ್ಲಿ ಹಂತ ಹಂತವಾಗಿ ವಿಷಯವನ್ನು ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ ಒಂದು : ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಈ ಅಧ್ಯಾಯವು ಪ್ರಸ್ತುತ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಯ ಕುರಿತು ಹಾಗೂ ಒಟ್ಟಾರೆ ಅಧ್ಯಯನದ ಮಹತ್ವ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಎರಡು : ಚೆನ್ನೈನ ದೃಶ್ಯಕಲಾ ಪರಿಸರ

ಈ ಅಧ್ಯಾಯದಲ್ಲಿ ಚೆನ್ನೈನ ಇತಿಹಾಸಕಾಲದಿಂದ ಪ್ರಸ್ತುತ, ಅಲ್ಲಿನ ವಸ್ತುಸಂಗ್ರಹಾಲಯ, ಚೋಳಮಂಡಲ ಕಲಾಗ್ರಾಮ, ದಕ್ಷಿಣಚಿತ್ರ, ಕಲಾಶಾಲೆ, ಕಲಾ ಗ್ಯಾಲರಿಗಳ ಕುರಿತು ದೃಶ್ಯಕಲಾ ಸಂಸ್ಕೃತಿಕಪರಿಸರದ ಕುರಿತು ವಿವರಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ಮೂರು : ಚೆನ್ನೈನ ಪ್ರಾದೇಶಿಕ ಕಲಾಕೇಂದ್ರದಹುಟ್ಟು ಮತ್ತು ಬೆಳವಣಿಗೆ

ಈ ಅಧ್ಯಾಯದಲ್ಲಿ ಪ್ರಾದೇಶಿಕ ಕೇಂದ್ರದ ಹುಟ್ಟು ಬೆಳವಣಿಗೆ ಹಾಗೂ ಇದರ ಇತಿಹಾಸ, ಕೇಂದ್ರ ಲಲಿತಕಲಾ ಅಕಾಡೆಮಿಯ ಪರಿಚಯದ ಜೊತೆಗೆ ಪ್ರಾದೇಶಿಕ ಕೇಂದ್ರಗಳ ಮಹತ್ವದ ಕುರಿತು ವಿವರಿಸಲಾಗಿದೆ.

ಅಧ್ಯಾಯ ನಾಲ್ಕು :ಪ್ರಾದೇಶಿಕ ಕಲಾ ಕೇಂದ್ರದ ಚಟುವಟಿಕೆಗಳು

ಈ ಅಧ್ಯಾಯದಲ್ಲಿ ಕಲಾ ಕೇಂದ್ರದ ಚಟುವಟಿಕೆಗಳ ಕುರಿತು ಶಿಬಿರ, ಪ್ರದರ್ಶನ, ಕಲಾ ಪ್ರಾತ್ಯಕ್ಷಿಕೆ, ರೆಸಿಡೆನ್ಸಿ ಹೀಗೆ ಮುಂತಾದ ಚಟುವಟಿಕೆಗಳ ವರ್ಗೀಕರಣಮಾಡಿಕೊಂಡು ವಿವರಿಸಲಾಗಿದೆ.

ಅಧ್ಯಾಯ ಐದು : ಪ್ರಾದೇಶಿಕಕಲಾ ಕೇಂದ್ರದ ಪ್ರಸ್ತುತ ನೋಟ

ಈ ಅಧ್ಯಾಯದಲ್ಲಿ ಪ್ರಾದೇಶಿಕ ಕಲಾ ಕೇಂದ್ರದ ಪ್ರಸ್ತುತನೋಟ,ದೃಶ್ಯಕಲೆಸ್ಟುಡಿಯೋಗಳಾದಗ್ರಾಫಿಕ್, ಚಿತ್ರ, ಸೇರಾಮಿಕ್, ಶಿಲ್ಪಕಲೆ ಸ್ಟುಡಿಯೋಗಳು, ಗ್ಯಾಲರಿಗಳ ಕುರಿತು ಮತ್ತು ವಿನೂತನ ಯೋಜನೆಗಳ ಕುರಿತು ವಿವರಿಸಲು ಪ್ರಯತ್ನಿಸಿದ್ದೇನೆ.

ಅಧ್ಯಾಯ ಆರು : ಸಮಾರೋಪ

ಈ ಅಧ್ಯಾಯವು ಸಮಾರೂಪವಾಗಿದ್ದು, ಒಟ್ಟು ನನ್ನ ಈ ಸಂಶೋಧನೆಯಲ್ಲಿ ಕಂಡು ಬಂದಂತಹ ಫಲಿತಗಳನ್ನು ಒಂದೊಂದಾಗಿ ಹಂತ-ಹಂತವಾಗಿ ವಿವರಿಸಲಾಗುವುದು.

ವ್ಯಾಪ್ತಿ :

ಯಾವುದೇ ಒಂದು ಸಂಶೋಧನಾ ಪ್ರಬಂಧ ವಿಷಯಕ್ಕೆ ವ್ಯಾಪ್ತಿ ಅನಿವಾರ್ಯ ಮತ್ತು ಅಗತ್ಯವೂ ಹೌದು.ಈ ಕಾರಣಕ್ಕಾಗಿ ನನ್ನ ಅಧ್ಯಯನದ ವಿಷಯವಾದ 'ಕೇಂದ್ರ ಲಲಿತ ಕಲಾ ಅಕಾಡೆಮಿಯ ಪ್ರಾದೇಶಿಕ ಕಲಾ ಕೇಂದ್ರ ಚೆನ್ನೈ' ಆಗಿದ್ದು, ಕೇಂದ್ರ ಸರಕಾರವು ಈ ಕಲಾ ಕೇಂದ್ರಗಳು ೧೯೭೭ರಿಂದ ಒಂದೊಂದಾಗಿ ಚೆನ್ನೈ, ಕಲ್ಕತ್ತಾ, ಭುವನೇಶ್ವರ, ಲಖನೌ, ದೆಹಲಿ ನಗರಗಳಲ್ಲಿ ಸ್ಥಾಪಿಸಲ್ಪಟ್ಟಿತು. ಇವು ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರೋತ್ಸಾಹದಿಂದ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಾ ಭಾರತದ ನಾಲ್ಕು ಭಾಗಗಳಲ್ಲಿ ದೃಶ್ಯಕಲಾ ಕ್ಷೇತ್ರದ ಬೆಳವಣಿಗೆಗೆ ಅದರ ಕಾರ್ಯವೈಖರಿ ಹಾಗೂ ಕಲಾ ಚಟುವಟಿಕೆಗಳ ಬಗ್ಗೆ ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಾದೇಶಿಕ ಕಲಾಕೇಂದ್ರಗಳ ಪರಿಚಯಿಸುತ್ತಾ, ಕಲಾ ಕೇಂದ್ರಗಳು ಹಲವಾರು ಇದ್ದರೂ ನಾನು ನನ್ನ ಸಂಶೋಧನಾ ಪ್ರಬಂಧಕ್ಕೆ 'ಚೆನ್ನೈನ ಪ್ರಾದೇಶಿಕ ಕಲಾ ಕೇಂದ್ರ'ವನ್ನು ಆಯ್ಕೆಮಾಡಿದ್ದೇನೆ.

ಅಧ್ಯಯನದವಿಧಾನ :

ಈ ನನ್ನ ಸಂಶೋಧನಾ ಅಧ್ಯಯನಕ್ಕೆ ಸರಳವಾಗುವ ಹಿನ್ನಲೆಯಲ್ಲಿ ಈ ಮುಂದೆ ಸೂಚಿಸಿರುವ ಸಂಶೋಧನಾ ವಿಧಿ-ವಿಧಾನದ ಮೂಲಕ ಆಕರಸಾಮಗ್ರಿಗಳನ್ನು ಸಂಗ್ರಹಿಸಲಾಗಿದೆ.

೧) ಮೂಲ ಆಕರ ಸಾಮಗ್ರಿ

೨) ಅನುಷಂಗಿಕ ಆಕರ ಸಾಮಗ್ರಿ

ಮೂಲ ಆಕರ ಸಾಮಗ್ರಿ :

ಸಂಶೋಧನಾ ಅಧ್ಯಯನದಲ್ಲಿ ಮೂಲ ಆಕರ ಸಾಮಗ್ರಿಗಳಪಾತ್ರ ಮುಖ್ಯವಾದದ್ದು, ಚೆನ್ನೈಪ್ರಾದೇಶಿಕ ಕಲಾಕೇಂದ್ರದ ಉದ್ದೇಶ, ಸ್ವರೂಪ, ಅದರ ವ್ಯಾಪ್ತಿ ಹಾಗೂ ಇದರಲ್ಲಿ ಅಧ್ಯಯನ ಮಾಡಿದ ಕಲಾವಿದರು, ಕಲಾಕೇಂದ್ರದ ಪರಿಸರಹಾಗೂ ಅದರ ಕಾರ್ಯ ವ್ಯಾಪ್ತಿಯನ್ನ ಗಮನದಲ್ಲಿಟ್ಟುಕೊಂಡು ಕ್ಷೇತ್ರಕಾರ್ಯ ಕೈಗೊಳ್ಳಲಾಗಿದೆ.ಇದರಲ್ಲಿ ಸಂದರ್ಶನ, ಛಾಯಾಚಿತ್ರಣ ಹಾಗೂ ಕೆಲವು ಸಂಗ್ರಹಿತ ವಿಷಯಗಳಪಟ್ಟಿ ಸಿದ್ಧಪಡಿಸಿ ವಿವಿಧ ರೂಪಗಳಲ್ಲಿ ಅಧ್ಯಯನ ಮಾಡಲಾಗಿದೆ.

ಸಂದರ್ಶನ :

ಸಂಶೋಧನಾ ಅಧ್ಯಯನಕ್ಕೆ ಸಂದರ್ಶನವು ಒಂದು ಪ್ರಮುಖ ಅಂಶವಾಗಿದೆ.'ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಾದೇಶಿಕ ಕಲಾಕೇಂದ್ರ ಚೆನ್ನೈ' ಎಂಬ ವಿಷಯಕ್ಕೆ ಸಂಬಂಧಿಸಿದ ಚೆನ್ನೈ ಪ್ರಾದೇಶಿಕ ಕಲಾಕೇಂದ್ರ ಮತ್ತು ಚೋಳ ಮಂಡಲದಲ್ಲಿನ ಹಿರಿಯಕಲಾವಿದರು, ಕಲಾ ವಿದ್ವಾಂಸರು, ಮತ್ತು ಕರ್ನಾಟಕದ ಕಲಾವಿದರನ್ನು ಸಂದರ್ಶಿಸಲಾಗಿದೆ.ಹಾಗೂ ಚೆನ್ನೈ ಪ್ರಾದೇಶಿಕ ಕಲಾ ಕೇಂದ್ರದಲ್ಲಿ ಅಧ್ಯಯನ ಮಾಡಿದ ಕಲಾವಿದರು ಮತ್ತು ಕೇಂದ್ರದ ಸಿಬ್ಬಂದಿಗಳೊಂದಿಗೆ ಚರ್ಚೆಮಾಡಿ, ಧ್ವನಿಮುದ್ರಿಸಿಕೊಂಡು, ವಿಷಯ ಸಂಗ್ರಹಿಸಿಕೊಂಡು ವಿಷಯಕ್ಕೆ ಅನುಸಾರವಾಗಿ ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಛಾಯಾಚಿತ್ರಣ :

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಇನ್ನೊಂದು ಅಂಶವಾಗಿರುವುದು ಛಾಯಾಚಿತ್ರಗಳು.ನಿಜಸ್ಥಿತಿಯನ್ನು ಅರಿಯಲು ಮತ್ತು ದಾಖಲು ಮಾಡುವುದಕ್ಕಾಗಿ ಛಾಯಾಚಿತ್ರಗಳನ್ನು ಸಂಗ್ರಹಿಸಲಾಗಿದೆ. ವಿಷಯಕ್ಕೆ ಸಂಬಂಧಿಸಿದ ಪ್ರಮುಖ ಕಾರ್ಯಕ್ರಮಗಳು, ಚಿತ್ರಕಲಾಶಿಬಿರ, ಕಲಾಪ್ರಾತ್ಯಕ್ಷಿಕೆ, ವಿಚಾರಸಂಕಿರಣ, ಕಲಾಪ್ರದರ್ಶನಗಳು ಹೀಗೆ ಇತ್ಯಾದಿ ಸಂದರ್ಭದ ಛಾಯಾಚಿತ್ರಗಳು ಪ್ರಾದೇಶಿಕ ಕಲಾ ಕೇಂದ್ರಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳ ವಿವರ ಮತ್ತು ಛಾಯಾಚಿತ್ರಗಳನ್ನು ನೇರವಾಗಿ ಹಾಗೂ ಅಂತರ್‌ಜಾಲದ ಮೂಲಕ ಅವುಗಳನ್ನು ವಿಷಯವಾರು ವಿಂಗಡಿಸಿಕೊಂಡು ವಿಷಯ ಸಂಗ್ರಹಿಸಿ ಇಂಗ್ಲೀಷಿನಿಂದ ಕನ್ನಡಕ್ಕೆ ಅನುವಾದ ಮಾಡಿಕೊಂಡು ಅಧ್ಯಾಯಗಳಿಗೆ ಬಳಸಿಕೊಳ್ಳಲಾಗಿದೆ.

ಅನುಷಂಗಿಕ ಆಕರ ಸಾಮಗ್ರಿ :

ಈ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಸಣ್ಣ ಪ್ರಮಾಣದ ಪರಿಚಯ ನೀಡುವಂತಹ ಸಂಶೋಧನಾ ಕಿರುಪ್ರಬಂಧಗಳು, ಮಹಾಪ್ರಬಂಧಗಳು, ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳು, ಕೇಂದ್ರ ಲಲಿತಕಲಾ ಅಕಾಡೆಮಿ ಪ್ರಾದೇಶಿಕ ಕಲಾಕೇಂದ್ರಗಳ ಕುರಿತು ಪ್ರಕಟವಾದ ಕ್ಯಾಟಲಾಗ್, ಕಲಾ ಲೇಖನಗಳು ಮತ್ತು ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಾದೇಶಿಕ ಕಲಾ ಕೇಂದ್ರ ಚೆನ್ನೈನಲ್ಲಿ ಕಲಿತ ಹಲವಾರು ಯುವ-ಹಿರಿಯ ಕಲಾವಿದರಲ್ಲದೆ ಅನೇಕ ಕಲಾವಿದರ ಹತ್ತಿರ ಹೋಗಿ ವಿಷಯಗಳನ್ನು ಸಂಗ್ರಹಿಸಿಕೊಂಡು. ಕೆಲವು ಅಂತರ್‌ಜಾಲಗಳನ್ನು ಆಧಾರವಾಗಿಟ್ಟುಕೊಂಡು ಈ ಸಂಶೋಧನಾ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಧ್ಯಾಯ-ಎರಡು

ಚೆನ್ನೈನ ದೃಶ್ಯಕಲಾ ಪರಿಸರ

ಅಧ್ಯಾಯ-ಎರಡು

ಚೆನ್ನೈನ ದೃಶ್ಯಕಲಾ ಪರಿಸರ

ಮದ್ರಾಸ್ ಎಂದು ಕರೆಯಲಾಗುವಚೆನ್ನೈ ನಗರವು ತಮಿಳುನಾಡು"ರಾಜ್ಯದ ರಾಜಧಾನಿಯಾಗಿದ್ದು, ಭಾರತದ ನಾಲ್ಕನೇ ದೊಡ್ಡ ನಗರವಾಗಿದೆ.ಇದು ಬಂಗಾಳಕೊಲ್ಲಿಯ ಕೋರಮಂಡಲ ಕರಾವಳಿಯಲ್ಲಿದೆ.ಅಂದಾಜು ೪೦೦ ವರ್ಷಗಳಷ್ಟು ಹಳೆಯದಾದ ನಗರವಾಗಿದ್ದು ವಿಶ್ವದ ೩೧ ನೇ ಅತಿದೊಡ್ಡ ಮೆಟ್ರೋಪಾಲಿಟನ್ ಪ್ರದೇಶವೆನಿಸಿಕೊಂಡಿದೆ.ಚೆನ್ನೈ ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿಯಿಂದ, ಬ್ರಿಟೀಷ್ ಆಳ್ವಿಕೆಯ ಮೂಲಕ ೨೦ನೇ ಶತಮಾನದ ಉತ್ತರಾರ್ಧದಲ್ಲಿ ಭಾರತದ ಸೇವೆ ಮತ್ತು ಉತ್ಪಾದನಾ ಕೇಂದ್ರವಾಗಿ ಅದರ ವಿಕಾಸದವರೆಗೆ ಸುದೀರ್ಘ ಇತಿಹಾಸವನ್ನು ಹೊಂದಿದೆ. ಹೆಚ್ಚುವರಿಯಾಗಿ, ಚೆನ್ನೈನ ಪೂರ್ವ-ನಗರ ಪ್ರದೇಶವು ದಕ್ಷಿಣ ಭಾರತೀಯ ಸಾಮ್ರಾಜ್ಯಗಳ ದಾಖಲೆಗಳಲ್ಲಿ ದೀರ್ಘ ಇತಿಹಾಸವನ್ನು ಹೊಂದಿದೆ."[೧] ಈ ಪ್ರದೇಶದ ಕುರಿತು ಸವಿಸ್ತಾರವಾಗಿ ಈ ಕೆಳಗೆ ನೋಡಬಹುದು.

ದಕ್ಷಿಣ ಭಾರತದಲ್ಲಿ ಪ್ರಾಚೀನ ಪ್ರದೇಶ ಎಂದು ಕರೆಯಲ್ಪಡುವ ಚೆನ್ನೈ, ತೋಂಡೈಮಂಡಲಂ ಪ್ರಾಂತ್ಯದಲ್ಲಿದೆ, ಇದು ನೆಲ್ಲೂರಿನ ಪೆನ್ನಾ ನದಿ ಮತ್ತು ಕಡಲೂರಿನ ಪೊನ್ನೈಯರ್ ನದಿಯ ನಡುವೆ

೧. ಅಂತರಜಾಲ: https://en.m.wikipedia.org/wiki/History_of_Chennai ಇ. ನಿಂದ ಕ. ಅನುವಾದ

ಇದೆ.ಈ ಪ್ರಾಂತ್ಯದ ರಾಜಧಾನಿ ಕಾಂಚೀಪುರಂ ಆಗಿತ್ತು."೨ನೇ ಶತಮಾನದಲ್ಲಿ ಕಾಂಚೀಪುರಂನಲ್ಲಿ ಚೋಳ ಕುಟುಂಬದ ಪ್ರತಿನಿಧಿಯಾಗಿದ್ದ ತೋಂಡೈಮಾನ್ ಇಲಾಮ ತಿರೈಯಾನ ಅವರು ತೋಂಡೈಮಂಡಲವನ್ನು ಆಳಿದರು.ಇಲಾಮ್ ತಿರೈಯಾನ್ ಈ ಪ್ರದೇಶದ ಮೂಲ ನಿವಾಸಿಗಳಾದ ಮುಧೀರರನ್ನು ಅಧೀನಗೊಳಿಸಿ ತೋಂಡೈಮಂಡಲಂ ಮೇಲೆ ತನ್ನ ಆಡಳಿತವನ್ನು ಸ್ಥಾಪಿಸಿರಬೇಕು ಎಂದು ಕೆಲವು ವಿದ್ವಾಂಸರು ಹೇಳಲಾಗುತ್ತದೆ.

ಚೆನ್ನೈ ಎಂಬ ಆಧುನಿಕ ನಗರವು ಸೇಂಟ್ ಜಾರ್ಜ್ ಕೋಟೆಯ ಬ್ರಿಟೀಷ್ ವಸಾಹತು ಮತ್ತು ಅದರ ನಂತರದ ವಿಸ್ತರಣೆಯಿಂದ ಸೇಂಟ್ ಜಾರ್ಜ್ ಕೋಟೆಯ ಸುತ್ತ ಮುತ್ತಲಿನ ಹಲವಾರು ಸ್ಥಳೀಯ ಹಳ್ಳಿಗಳು ಮತ್ತು ಯುರೋಪಿಯನ್ ವಸಾಹತುಗಳನ್ನು ಮದ್ರಾಸ್ ನಗರಕ್ಕೆ ವಿಲೀನಗೊಳಿಸುವ ಮೂಲಕ ಹುಟ್ಟಿಕೊಂಡಿತು.ಮೂಲ ನಗರ ಮದ್ರಾಸ್‌ನ ಬಹುಪಾಲು ಭಾಗವನ್ನು ಯುರೋಪಿಯನ್ನರು ನಿರ್ಮಿಸಿ ನೆಲೆಸಿದರು. ಆದರೆ ನಂತರದಲ್ಲಿ ಸಂಯೋಜಿಸಲ್ಪಟ್ಟ ಸುತ್ತಮುತ್ತಲಿನ ಪ್ರದೇಶದಲ್ಲಿ ಸ್ಥಳೀಯ ದೇವಾಲಯಗಳಾದ ತಿರುವನಮಿಯೂರ್, ತಿರುವೊಟ್ರಿಯೂರ್, ತಿರುವಾಲ್ಲಿಕೆನಿ (ಟ್ರಿಪ್ಲಿಕೇನ್), ತಿರುಮಾಯಿಲೈ (ಮೈಲಾಪುರ) ಸೇರಿವೆ, ಇವು ಸಾವಿರಾರು ವರ್ಷಗಳಿಗಿಂತ ಹೆಚ್ಚು ಕಾಲ ಅಸ್ತಿತ್ವದಲ್ಲಿವೆ. ತಿರುವನಮಿಯೂರ್, ತಿರುವೊಟ್ರಿಯೂರ್ ಮತ್ತು ತಿರುಮೈಲೈಗಳನ್ನು (ನಯನ್ಮಾರ್‌ಗಳ) ತೇವರಂಗಳಲ್ಲಿ ಉಲ್ಲೇಖಿಸಿದರೆ, ನಳೈರಾ ದಿವ್ಯಾ ಪ್ರಬಂಧಂಗಳಲ್ಲಿ (ಅಲ್ವಾರ್ಗಳ) ತಿರುವಳ್ಳಿಕೆಣಿಯನ್ನು ಉಲ್ಲೇಖಿಸಲಾಗಿದೆ."[೨]

- **ಚೆನ್ನೈ ಇತಿಹಾಸ**

*** ಚೋಳ ಮತ್ತು ಪಲ್ಲವ ಯುಗಗಳು**

"ತಿರೈಯನ್ ನಂತರ ಈ ಪ್ರದೇಶವನ್ನು ಚೋಳ ರಾಜಕುಮಾರ ಇಲಾಮ್ ಕಿಲ್ಲಿ ಆಳಿದರು. ತಮ್ಮ ರಾಜ ಎರಡನೆ ಪುಲುಮಾಯಿ ಅಡಿಯಲ್ಲಿ ಉತ್ತರದಿಂದ ಆಂಧ್ರ ಶಾತವಾಹನ ಆಕ್ರಮಣದಿಂದ ತೋಂಡೈಮಂಡಲಂನ ಚೋಳ ಆಕ್ರಮಣವನ್ನು ಕೊನೆಗೊಳಿಸಲಾಯಿತು. ಕಾಂಚೀಪುರಂ ಪ್ರದೇಶವನ್ನು ನೋಡಿಕೊಳ್ಳಲು ಅವರು ಮುಖ್ಯಸ್ಥರನ್ನು ನೇಮಿಸಿದರು.ಕಾಂಚೀಪುರಂನಿಂದ ಆಳುವ ಆಡಳಿತಗಾರನೆಂದು ಪರಿಗಣಿಸಲ್ಪಟ್ಟ ಬಪ್ಪಸ್ವಾಮಿ ೩ನೇ ಶತಮಾನದ ಆರಂಭದಲ್ಲಿ ಶಾತವಾಹನ ಸಾಮ್ರಾಜ್ಯದ ಅಡಿಯಲ್ಲಿ ಕಾಂಚೀಪುರಂನಲ್ಲಿ ಸ್ವತಃ (ಸುತ್ತಲಿನ ಪ್ರದೇಶದ) ಮುಖ್ಯಸ್ಥರಾಗಿದ್ದರು.ಇಲ್ಲಿಯವರೆಗೆ ಕೇವಲ ವೈಸರಾಯ್‌ಗಳಾಗಿದ್ದ ಪಲ್ಲವರು ನಂತರ ಕಾಂಚಿಪುರಂ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳ ಸ್ವತಂತ್ರ ಆಡಳಿತಗಾರರಾದರು.

೨. ಅಂತರಜಾಲ: https://en.m.wikipedia.org/wiki/History_of_Chennai ಇ. ನಿಂದ ಕ. ಅನುವಾದ

೩ನೇ ಶತಮಾನದ ಆರಂಭದಿಂದ ೯ನೇ ಶತಮಾನದ ಮುಕ್ತಾಯದ ವರ್ಷಗಳವರೆಗೆ ಪಲ್ಲವರು ಈ ಪ್ರದೇಶದ ಮೇಲೆ ಪ್ರಭಾವ ಬೀರಿದರು.ಈ ಪ್ರದೇಶವು ಕೆಲವು ದಶಕಗಳ ಮಧ್ಯಂತರವನ್ನು ಹೊರತುಪಡಿಸಿ.ಪಲ್ಲವರನ್ನು ಒಂದನೇ ಆದಿತ್ಯನ ಅಡಿಯಲ್ಲಿ ಚೋಳರು ಸುಮಾರು ೮೭೯ ರಲ್ಲಿ ಸೋಲಿಸಿದರು.ನಂತರ ಈ ಪ್ರದೇಶವನ್ನು ಚೋಳರ ಆಳ್ವಿಕೆಯಲ್ಲಿ ತರಲಾಯಿತು.ಜಟವರ್ಮನ್‌ಸುಂದರ ಪಾಂಡ್ಯನ ನೇತೃತ್ವದ ಪಾಂಡ್ಯರು ಅಧಿಕಾರಕ್ಕೆ ಬಂದರು ಮತ್ತು ೧೨೬೪ರಲ್ಲಿ ಚೋಳ ಪ್ರಾಬಲ್ಯವನ್ನು ಕೊನೆಗೊಳಿಸುವ ಮೂಲಕ ಈ ಪ್ರದೇಶವನ್ನು ಪಾಂಡ್ಯರ ಆಳ್ವಿಕೆಯಲ್ಲಿ ತರಲಾಯಿತು.

- **ನಗರದ ಐತಿಹಾಸಿಕ ಸ್ಥಾಪನೆ**

***ವಿಜಯನಗರ ರಾಜವಂಶಸ್ಥ ನಾಯಕರ ಅಡಿಯಲ್ಲಿ**

ಇಂದಿನ ಚೆನ್ನೈ ನಗರವು 'ಸೇಂಟ್ ಜಾರ್ಜ್' ಎಂದು ಕರೆಯಲ್ಪಡುವ ಇಂಗ್ಲೀಷ್ ವಸಾಹತು ಎಂದು ಪ್ರಾರಂಭವಾಯಿತು.ಈ ಪ್ರದೇಶವು ಆಗ ವಿಜಯನಗರ ಸಾಮ್ರಾಜ್ಯದ ಒಂದು ಭಾಗವಾಗಿತ್ತು, ನಂತರ ಇದರ ಪ್ರಧಾನ ಕಛೇರಿ ಇಂದಿನ ಆಂಧ್ರಪ್ರದೇಶದ ಚಂದ್ರಗಿರಿಯಾಗಿತ್ತು.

ಈ ಪ್ರದೇಶವನ್ನು ನಿಯಂತ್ರಿಸಿದ ವಿಜಯನಗರ ಆಡಳಿತಗಾರರು ಪ್ರಾಂತ್ಯದ ವಿವಿಧ ಪ್ರದೇಶಗಳನ್ನು ಬಹುತೇಕ ಸ್ವತಂತ್ರವಾಗಿ ಆಳಿದ ನಾಯಕರು ಎಂದು ಕರೆಯಲ್ಪಡುವ ಮುಖ್ಯಸ್ಥರನ್ನು ನೇಮಿಸಿದರು.ಈ ಪ್ರದೇಶವು ಶ್ರೀಕಲಹಸ್ತಿ ಮತ್ತು ವಂದವಾಸಿಯ ಪದ್ಮವೆಲಮ ನಾಯಕ ಮುಖ್ಯಸ್ಥ ದಮೆರ್ಲಾ ವೆಂಕಟಾದ್ರಿ ನಾಯಕ ಅವರ ನಿಯಂತ್ರಣದಲ್ಲಿತ್ತು. ವಿಜಯನಗರ ರಾಜ ಪೆಡ ವೆಂಕಟರಾಯರ ಅಡಿಯಲ್ಲಿ ಅವರು ಪ್ರಭಾವಿ ನಾಯಕ ಆಡಳಿತಗಾರರಾಗಿದ್ದರು. ಆಗ ಚಂದ್ರಗಿರಿ-ವೆಲ್ಲೂರು ಕೋಟೆಯಲ್ಲಿ ನೆಲೆಸಿದ್ದರು, ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿ ಈ ಪ್ರದೇಶದಲ್ಲಿ ಕಾರ್ಖಾನೆಯನ್ನು ಸ್ಥಾಪಿಸಲು ಬಂದಾಗ ಪ್ರಸ್ತುತ ಚೆನ್ನೈ ನಗರದ ಪ್ರದೇಶದ ಉಸ್ತುವಾರಿಯನ್ನು ಇವರು ವಹಿಸಿದ್ದರು."[೩]

***ಭೂ ಅನುದಾನ ಪಡೆಯುವುದು**

"ಆಗಸ್ಟ್ ೨೦, ೧೬೩೯ ರಂದು ಈಸ್ಟ್ ಇಂಡಿಯಾ ಕಂಪನಿಯ ಫ್ರಾನ್ಸಿಸ್ ಡೇ ಮತ್ತು ದಮೆರ್ಲಾ ವೆಂಕಟಾದ್ರಿ ನಾಯಕ್ ಅವರೊಂದಿಗೆ ವಿಜಯನಗರ ರಾಜ ಪೆಡ ವೆಂಕಟರಾಯರನ್ನು ಭೇಟಿಯಾಗಲು ಚಂದ್ರಗಿರಿ ಅರಮನೆಗೆ ಪ್ರಯಾಣ ಬೆಳೆಸಿದರು ಮತ್ತು ಕೋರಮಂಡಲ್

೩ .S. Srinivasachari(1939) History of the City of Madras: ಪುಟ ಸಂ:೬೩-೬೯. ಇ. ನಿಂದ ಕ. ಅನುವಾದ

ಕರಾವಳಿಯಲ್ಲಿ ಒಂದು ಸಣ್ಣ ಪಟ್ಟಿಯ ಭೂಮಿಗೆ ಚಂದ್ರಗಿರಿಯಲ್ಲಿ ಒಂದು ಸ್ಥಳಕ್ಕೆ ಅನುದಾನವನ್ನು ಪಡೆದರು.ಅವರ ವ್ಯಾಪಾರ ಚಟುವಟಿಕೆಗಳಿಗಾಗಿ ಕಾರ್ಖಾನೆ ಮತ್ತು ಗೋದಾಮು ನಿರ್ಮಿಸಿದರು.ಇದು ೧೬೩೯ ರ ಆಗಸ್ಟ್ ೨೨ ರಂದು ದಮರ್ಲಾ ವೆಂಕಟಾದ್ರಿ ನಾಯಕ ಡೊಮೇನ್ ನಿಂದ ಬಂದಿದ್ದು, ಇದು ಕೂಮ್ ನದಿಯ ನಡುವೆ ಸಮುದ್ರಕ್ಕೆ ಪ್ರವೇಶಿಸುವ ಹಂತದಲ್ಲಿಯೇ ಇತ್ತು. ಮತ್ತು ಎಗ್ಮೋರ್ ನದಿ ಎಂದು ಕರೆಯಲ್ಪಡುವ ಮತ್ತೊಂದು ನದಿಯನ್ನು ವಿಜಯನಗರ ಚಕ್ರವರ್ತಿಯಿಂದ ಪತ್ರದ ನಂತರ ಈಸ್ಟ್ ಇಂಡಿಯಾ ಕಂಪನಿಗೆ ನೀಡಲಾಯಿತು."[೪]

ಈ "ತ್ಯಾಜ್ಯ ಭೂಮಿಯಲ್ಲಿ ಸೇಂಟ್ ಜಾರ್ಜ್ ಕೋಟೆಯನ್ನು ಸ್ಥಾಪಿಸಲಾಯಿತು.ಇದು ಬ್ರಿಟೀಷ ವ್ಯಾಪಾರಿಗಳು, ಕಾರ್ಖಾನೆ, ಕಾರ್ಮಿಕರು ಮತ್ತು ಇತರ ವಸಾಹತುಶಾಹಿ ವಸಾಹತುಗಾರರ ಭದ್ರವಾದ ಸ್ಥಳವಾಯಿತು.ಈ ವಸಾಹತಿನ ನಂತರ ಇಂಗ್ಲೀಷರು ತಮ್ಮ ವಸಾಹತು ಪ್ರದೇಶವನ್ನು ಹಲವಾರು ಯುರೋಪಿಯನ್ ಸಮುದಾಯಗಳು, ಹೊಸ ಬ್ರಿಟೀಷ್ ವಸಾಹತುಗಳು ಮತ್ತು ವಿವಿಧ ಸ್ಥಳೀಯ ಹಳ್ಳಿಗಳನ್ನು ಸೇರಿಸಲು ವಿಸ್ತರಿಸಿದರು, ಅವುಗಳಲ್ಲಿ ಒಂದನ್ನು 'ಮುಧಿರಾಸ ಪಟ್ಟಣಂ' ಎಂದುಹೆಸರಿಸಲಾಯಿತು.ಇದು ನಂತರದ ಹಳ್ಳಿಯ ಗೌರವಾರ್ಥವಾಗಿ ಬ್ರಿಟೀಷರು ಇಡೀ ವಸಾಹತು ಮತ್ತು ಸಂಯೋಜಿತ ನಗರ ಮದ್ರಾಸ್ ಎಂದು ಹೆಸರಿಸಿದರು.

ವಿವಾದಾತ್ಮಕವಾಗಿಇತಿಹಾಸವನ್ನು ಪರಿಷ್ಕರಿಸುವ ಮತ್ತು ನಗರವನ್ನು ಚೆನ್ನೈ ಎಂದು ಮರು ನಾಮಕರಣ ಮಾಡುವ ಪ್ರಯತ್ನದಲ್ಲಿ ಆಡಳಿತ ಪಕ್ಷವು ಆರಂಭಿಕ ಇಂಗ್ಲೀಷ್ ಮದ್ರಾಸ್ ವಸಹತುಗಳ ಇತಿಹಾಸವನ್ನು ಶುದ್ಧೀಕರಿಸಿ ಹೊಸ ಪಕ್ಷದ ಇತಿಹಾಸದ ಪ್ರಕಾರಮದ್ರಾಸ್ ಎಂದು ಹೆಸರಿಸುವ ಬದಲು ಚೆನ್ನಪಟ್ಟಣಂ ಎಂದುಕರೆದರು. ಉತ್ತರಕ್ಕೆ ಪುಲಿಕಾಟ್ ನಿಂದ ಇಡೀ ಕರಾವಳಿ ಪ್ರದೇಶವನ್ನು ನಿಯಂತ್ರಿಸಿದ ದಮೆರ್ಲಾ ವೆಂಕಟ ಮುದಿರಾಸ ನಾಯಕನ ತಂದೆ ದಮೆರ್ಲಾ ಚೆನ್ನಪ್ಪಮುದಿರಾಸ ನಾಯಕನ ಗೌರವಾರ್ಥವಾಗಿ ಚೆನ್ನಪಟ್ಟಣಂ ಎಂಬ ಹಳ್ಳಿಯ ಹೆಸರನ್ನು ಇಡಲಾಯಿತು.

ಪ್ರಸ್ತುತ ವಸಾಹತುಗಳ ಅಧಿಕೃತ ಕೇಂದ್ರವನ್ನು ಫೋರ್ಟ್ ಸೇಂಟ್ ಜಾರ್ಜ್ ಎಂದು ಹೆಸರಿಸಲಾಗಿದ್ದರೂ, ಬ್ರಿಟಿಷರು ಮದ್ರಾಸ್ ಎಂಬ ಹೆಸರನ್ನು ಅನೇಕ ಸ್ಥಳಗಳನ್ನು ಸೇರಿ ಹೊಸ ದೊಡ್ಡ ನಗರಕ್ಕೆ ಅನ್ವಯಿಸಿದರು."[೫]

•ಆರಂಭಿಕ ಯುರೋಪಿಯನ್ ವಸಾಹತುಗಾರರು

"ಆಧುನಿಕ ಚೆನ್ನೈ ವಸಾಹತುಶಾಹಿ ನಗರವಾಗಿ ಅದರ ಮೂಲವನ್ನು ಹೊಂದಿತ್ತು.ಅದರ ಆರಂಭಿಕ ಬೆಳವಣಿಗೆಯು ಕೃತಕ ಬಂದರು ಮತ್ತು ವ್ಯಾಪಾರ ಕೇಂದ್ರವಾಗಿ ಅದರ ಪ್ರಾಮುಖ್ಯತೆಗೆ ನಿಕಟ ಸಂಬಂಧ ಹೊಂದಿತ್ತು. ೧೫೨೨ ರಲ್ಲಿ ಪೋರ್ಚುಗೀಸರು ಬಂದಾಗ

೪. ಅಂತರಜಾಲ: https://en.m.wikipedia.org/wiki/History_of_Chennai ಇ. ನಿಂದ ಕ. ಅನುವಾದ
೫. ಅದೇ.

ಕ್ರಿಶ್ಚಿಯನ್ ಅಪೊಸ್ತಲ ಸೇಂಟ್ ಥಾಮಸ್ ಅವರ ಹೆಸರಿನವರು ಅದಕ್ಕೆ ಸಾವೊ ಟೋಮೆ ಎಂದು ಹೆಸರಿಟ್ಟರು.ನಂತರ ಈ ಪ್ರದೇಶವು ಡಚ್ಚರ ಕೈಗೆ ಸಿಕ್ಕಿತು.ಅವರು ೧೬೧೨ ರಲ್ಲಿ ನಗರದ ಉತ್ತರಕ್ಕೆ ಪುಲಿಕಾಟ್ ಬಳಿ ಎರಡು ಗುಂಪು ಸ್ಥಾಪಿಸಿಕೊಂಡರು.ಗುಂಪುಗಳು ತಮ್ಮ ವಸಾಹತುಶಾಹಿ ಜನಸಂಖ್ಯೆಯನ್ನು ಬೆಳೆಸಲು ಶ್ರಮಿಸಿದವು ಮತ್ತು ಬ್ರಿಟೀಷರು ಬಂದಾಗ ಅವರ ಜನಸಂಖ್ಯೆಯು ೧೦,೦೦೦ ಜನರನ್ನು ಹೊಂದಿದ್ದು.ಸ್ಥಳೀಯ ಭಾರತೀಯ ಜನಸಂಖ್ಯೆಯಿಂದ ಅವರು ಗಣನೀಯವಾಗಿ ಹೆಚ್ಚಿನ ಸಂಖ್ಯೆಯಲ್ಲಿದ್ದರು.

*** ಇಂಗ್ಲೀಷ್‌ರ ಆಗಮನ**

೧೬೧೨ ರ ಹೊತ್ತಿಗೆ ಡಚ್ಚರು ಉತ್ತರದ ಪುಲಿಕಾಟ್‌ನಲ್ಲಿ ತಮ್ಮನ್ನು ತಾವು ಸ್ಥಾಪಿಸಿಕೊಂಡರು.೧೭ ನೇ ಶತಮಾನದಲ್ಲಿ ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿ ಪೂರ್ವ ಕರಾವಳಿಯಲ್ಲಿ ಕಾರ್ಖಾನೆಯನ್ನು ನಿರ್ಮಿಸಲು ನಿರ್ಧರಿಸಿತು.೧೬೨೬ ರಲ್ಲಿ ತನ್ನ ತಾಣವನ್ನು ಪುಲಿಕಾಟ್‌ನ ಉತ್ತರಕ್ಕೆ ೩೫ ಮೈಲಿ ದೂರದಲ್ಲಿರುವ ಅರ್ಮಾಗನ್ (ಡುಗರಾಜ್ ಪಟ್ನಂ) ಎಂದು ಆಯ್ಕೆ ಮಾಡಿತು. ಹೆಚ್ಚಿನ ಬೇಡಿಕೆಯಿರುವ ಸ್ಥಳೀಯ ಪ್ರದೇಶದಿಂದ ಬಂದ ಕ್ಯಾಲಿಕೊ ಬಟ್ಟೆ ಕಳಪೆ ಗುಣಮಟ್ಟದ್ದಾಗಿತ್ತು.ಮತ್ತು ಇದನ್ನುಯುರೋಪಿಗೆ ರಫ್ತು ಮಾಡಲು ಮತ್ತು ಅರ್ಮಾಗನ್ ವ್ಯಾಪಾರ ಉದ್ದೇಶಗಳಿಗೆ ಸೂಕ್ತವಲ್ಲ ಎಂದು ಇಂಗ್ಲೀಷರು ಶೀಘ್ರದಲ್ಲೇ ಅರಿತುಕೊಂಡರು.ಆಗ ಅಧಿಕಾರಿಗಳಲ್ಲೊಬ್ಬರಾದ ಫ್ರಾನ್ಸಿಸ್ ಡೇಆಗ ಮಸೂಲಿಪಟಂ ಕೌನ್ಸಿಲ್ ಸದಸ್ಯರಾಗಿದ್ದರು ಮತ್ತು ಆರ್ಮಾಗನ್ ಫ್ಯಾಕ್ಟರಿಯ ಮುಖ್ಯಸ್ಥರಾಗಿದ್ದರು.೧೬೩೭ರಲ್ಲಿ ಕರಾವಳಿಯಲ್ಲಿ ಪಾಂಡಿಚೇರಿಯವರೆಗೆ ಅನ್ವೇಷಣೆಗಾಗಿ ಹೊಸ ವಸಾಹತು ಸಮುದ್ರಯಾನವನ್ನು ಮಾಡಿದರು.[೬] ಇದನೆಲ್ಲಾ ನೋಡಿದಾಗ ಬ್ರಿಟೀಷರು ಆ ಕಾಲದಲ್ಲಿ ಕರಕುಶಲ ಕಲೆ ಪ್ರಾರಂಭಿಸಿದರು ಎಂದು ತಿಳಿಯಬಹುದಾಗಿದೆ.

*** ವಿಜಯನಗರ ಆಡಳಿತಗಾರರ ಅನುಮತಿ**

ಆ ಸಮಯದಲ್ಲಿ ಕೋರಮಂಡಲ್ ಕರಾವಳಿಯನ್ನು ಪೆಡ ವೆಂಕಟ ರಾಯರು ಆಳಿದರು."ವಿಜಯನಗರ ಸಾಮ್ರಾಜ್ಯದ ಅರವೀಡು ರಾಜವಂಶದವರು ಚಂದ್ರಗಿರಿ–ವೆಲ್ಲೂರು ಮೂಲದವರು.ರಾಜರ ಅಡಿಯಲ್ಲಿ ಸ್ಥಳೀಯ ಮುಖ್ಯಸ್ಥರು ಅಥವಾ ನಾಯಕರು ಎಂದು ಕರೆಯಲ್ಪಡುವ ರಾಜ್ಯಪಾಲರು ಪ್ರತಿ ಜಿಲ್ಲೆಯನ್ನು ಆಳಿದರು.

ವಿಜಯನಗರ ಸಾಮ್ರಾಜ್ಯದ ಸ್ಥಳೀಯ ಗವರ್ನರ್ ದಮರ್ಲಾ ವೆಂಕಟಾದ್ರಿ ನಾಯಕ ಮತ್ತು ವಂಡಿವಾಶ್ (ವಂದವಾಸಿ) ನಾಯಕ ಈ ಪ್ರದೇಶದ ಕರಾವಳಿ ಭಾಗವನ್ನು ಆಳಿದರು.

---

೬. ಅಂತರಜಾಲ: https://en.m.wikipedia.org/wiki/History_of_Chennai ಇ. ನಿಂದ ಕ. ಅನುವಾದ

ಪುಲಿಕಾಟ್‌ನಿಂದ ಹಿಡಿದು ಸ್ಯಾನ್ ಥೋಮ್‌ನ ಪೋರ್ಚುಗೀಸ್ ವಸಾಹತು ಅವರು ವಾಂಡಿವಾಶ್‌ನಲ್ಲಿ ತಮ್ಮ ಪ್ರಧಾನ ಕಚೇರಿಯನ್ನು ಹೊಂದಿದ್ದರು.ಮತ್ತು ಅವರ ಸಹೋದರ ಅಯ್ಯಪ್ಪ ನಾಯಕುಡು ಮದ್ರಾಸ್‌ನ ಪಶ್ಚಿಮಕ್ಕೆ ಕೆಲವು ಮೈಲಿ ದೂರದಲ್ಲಿರುವ ಪೂನಮ ಎಂಬಲ್ಲಿ ನೆಲೆಸಿದ್ದರು.ಅಲ್ಲಿ ಅವರು ಕರಾವಳಿಯ ವ್ಯವಹಾರಗಳನ್ನು ನೋಡಿಕೊಂಡರು.ಬೇರಿ ತಿಮ್ಮಪ್ಪ, ಫ್ರಾನ್ಸಿಸ್ ಡೇ ದುಬಾಶ್ (ಇಂಟರ್ಪ್ರಿಟರ್), ಡಮರ್ಲಾ ಅಯ್ಯಪ್ಪ ನಾಯಕುಡು ಅವರ ಆಪ್ತರಾಗಿದ್ದರು.

೧೭ ನೇ ಶತಮಾನದ ಆರಂಭದಲ್ಲಿ ಪುರಗಿರಿ ಕ್ಷತ್ರಿಯ (ಪೆರಿಕೆ) ಜಾತಿಯ ಬೇರಿ ತಿಮ್ಮಪ್ಪ ಆಂಧ್ರಪ್ರದೇಶದ ಮಚಿಲಿಪಟ್ನಂ ಬಳಿಯ ಪಾಲಕೋಲ್ ನಿಂದ ಸ್ಥಳಕ್ಕೆ ವಲಸೆ ಬಂದರು.ಅಯ್ಯಪ್ಪ ನಾಯಕುಡು ತನ್ನ ಸಹೋದರನನ್ನು ಮರಳು ಪಟ್ಟಿಯನ್ನು ಫ್ರಾನ್ಸಿಸ್ ಡೇ ಅವರಿಗೆ ಗುತ್ತಿಗೆ ನೀಡುವಂತೆ ಮನವೊಲಿಸಿದನು ಮತ್ತು ಪ್ರತಿಯಾಗಿ ವ್ಯಾಪಾರ ಲಾಭಗಳು ಸೈನ್ಯದ ರಕ್ಷಣೆ ಮತ್ತು ಪರ್ಷಿಯನ್ ಕುದುರೆಗಳಿಗೆ ಭರವಸೆ ನೀಡಿದನು.ಮದ್ರಾಸ್‌ನಲ್ಲಿ ಉದ್ದೇಶಿತ ಸ್ಥಳವನ್ನು ಪರಿಶೀಲಿಸಲು ಮತ್ತು ಅಲ್ಲಿ ವ್ಯಾಪಾರದ ಸಾಧ್ಯತೆಗಳನ್ನು ಪರೀಕ್ಷಿಸಲು ಅನುಮತಿಗಾಗಿ ಫ್ರಾನ್ಸಿಸ್ ಡೇ ಮಸೂಲಿಪಟ್ನಂ ನಲ್ಲಿರುವ ತನ್ನ ಪ್ರಧಾನ ಕಚೇರಿಗೆ ಪತ್ರ ಬರೆದಿದ್ದರು.ತಪಾಸಣೆಯ ಸಮಯದಲ್ಲಿ ಮದ್ರಾಸ್ಪಟ್ನಂ ಅನುಕೂಲಕರವೆಂದು ತೋರಿತ್ತು. ಮತ್ತು ಅಲ್ಲಿ ನೇಯ್ದ ಕ್ಯಾಲಿಕೋಗಳು ಆರ್ಮಗನ್ (ದುರ್ಗರಾಜಪಟ್ನಂ) ಗಿಂತ ಅಗ್ಗವಾಗಿತ್ತು.

೨೨ ಆಗಸ್ಟ್ ೧೬೩೯ ರಂದು ಫ್ರಾನ್ಸಿಸ್ ಡೇ ವಂಡಿವಾಶ್‌ನ ನಾಯಕರಾದ ದಮರ್ಲಾ ವೆಂಕಟಾದ್ರಿ ನಾಯಕರಿಂದ ಈಸ್ಟ್ ಇಂಡಿಯಾ ಕಂಪನಿಗೆ ಮೂರು ಮೈಲಿ ಉದ್ದದ ಭೂಮಿಯನ್ನು ಮದ್ರಾಸ್ಪಟ್ನಂ ಎಂಬ ಮೀನುಗಾರಿಕಾ ಹಳ್ಳಿಯನ್ನು ನೀಡಿತು.ಅದರ ಪ್ರತಿಗಳನ್ನು ಆಂಡ್ರ್ಯೂ ಕೊಗನ್ ಅನುಮೋದಿಸಿದರು.ಮಸೂಲಿಪಟಂ ಕಾರ್ಖಾನೆಯನ್ನುಈಗಲೂ ಸಂರಕ್ಷಿಸಲಾಗಿದೆ.ಮಸೂಲಿಪಟ್ನಂನಲ್ಲಿನ ಇಂಗ್ಲೀಷ್ ಅಂಶಗಳು ಫ್ರಾನ್ಸಿಸ್ ಡೇ ರವರು ಕೆಲಸದಿಂದ ತೃಪ್ತಿ ಹೊಂದಿದ್ದರು.ಫೆಬ್ರವರಿ ೧೬೪೦ ರಲ್ಲಿ ಡೇ ಮತ್ತು ಕೊಗನ್ ಕೆಲವು ಅಂಶಗಳು ಮತ್ತು ಬರಹಗಾರರೊಂದಿಗೆ ಸುಮಾರು ಇಪ್ಪತ್ತೈದು ಯುರೋಪಿಯನ್ ಸೈನಿಕರು ಹಾಗೂ ಕೆಲವು ಇತರ ಯುರೋಪಿಯನ್ ಕುಶಲಕರ್ಮಿಗಳ ಗ್ಯಾರಿಸನ್ ಜೊತೆಗೆ ಹಿಂದಾ ಪುಡಿ ತಯಾರಕ ನಾಗ ಬಟ್ಟನ್ ಜೊತೆಗೆ ಮಂಜೂರು ಮಾಡಿದ ಭೂಮಿಗೆ ತೆರಳಿದರು.ಅಲ್ಲಿ ಹೊಸ ಇಂಗ್ಲಿಷ್ ಕಾರ್ಖಾನೆಯನ್ನು ಪ್ರಾರಂಭಿಸಿದರು.ಅವರು ಫೆಬ್ರವರಿ ೨೦.೧೬೪೦ ರಂದು ಮದ್ರಾಸ್‌ಪಟ್ನಂ ತಲುಪಿದರು ಮತ್ತು ಈ ದಿನಾಂಕವು ಮಹತ್ವದ್ದಾಗಿದೆ, ಏಕೆಂದರೆ ಅದು ಸ್ಥಳದಲ್ಲಿ ಇಂಗ್ಲೀಷ್‌ನ ಮೊದಲ ನಿಜವಾದ ವಸಾಹತು ಗುರುತಿಸುತ್ತದೆ."[೭]

೭. ಅಂತರಜಾಲ: https://en.m.wikipedia.org/wiki/History_of_Chennai ಇ. ನಿಂದ ಕ. ಅನುವಾದ

* ಸೇಂಟ್ ಜಾರ್ಜ್ ಕೋಟೆಯನ್ನು ಮದ್ರಾಸ್‌ಗೆ ವಿಸ್ತರಿಸುವುದು

"ಫ್ರಾನ್ಸಿಸ್ ಡೇ ಮತ್ತು ಅವರ ಉನ್ನತ ಅಧಿಕಾರಿ ಆಂಡ್ರ್ಯೂ ಕೊಗನ್ ಅವರನ್ನು ಮದ್ರಾಸ್ (ಈಗಿನ ಚೆನ್ನೈ) ಸ್ಥಾಪಕರು ಎಂದು ಪರಿಗಣಿಸಬಹುದು.ಅವರು ಏಪ್ರಿಲ್ ೨೩.೧೬೪೦ ರಂದು ಸೇಂಟ್ ಜಾರ್ಜ್ ಕೋಟೆ ಮತ್ತು ಅವರ ನಿವಾಸಕ್ಕಾಗಿ ಮನೆಗಳ ನಿರ್ಮಾಣವನ್ನು ಪ್ರಾರಂಭಿಸಿದರು.ಅವರ ಸಣ್ಣ ಭದ್ರವಾದ ವಸಾಹತು ಶೀಘ್ರವಾಗಿ ಇತರ ಪೂರ್ವ ಭಾರತೀಯ ವ್ಯಾಪಾರಿಗಳನ್ನು ಆಕರ್ಷಿಸಿತು ಮತ್ತು ಡಚ್ ಸ್ಥಾನವು ಪ್ರತಿಕೂಲ ಭಾರತೀಯ ಶಕ್ತಿಯ ಅಡಿಯಲ್ಲಿ ಕುಸಿಯುತ್ತಿದ್ದಂತೆ ಅವರು ಕೂಡ ನಿಧಾನವಾಗಿ ವಸಾಹತಿಗೆ ಸೇರಿದರು.

೧೬೪೬ ರ ಹೊತ್ತಿಗೆ ವಸಾಹತು ೧೯,೦೦೦ ಜನರನ್ನು ತಲುಪಿತು ಮತ್ತು ಪೋರ್ಚುಗೀಸ್ ಮತ್ತು ಡಚ್ ಜನಸಂಖ್ಯೆಯೊಂದಿಗೆ ಅವರ ಕೋಟೆಗಳಲ್ಲಿ ಗಣನೀಯವಾಗಿ ತಮ್ಮ ಸ್ಥಾನವನ್ನು ಮತ್ತಷ್ಟು ಗಟ್ಟಿಗೊಂಡಿತು.ಕಂಪನಿಯು ವಿಸ್ತರಿಸಿದ ಫೋರ್ಟ್ ಸೇಂಟ್ ಜಾರ್ಜ್ ಸುತ್ತಲೂ ವಿವಿಧ ವಸಾಹತುಗಳನ್ನು ಸಂಯೋಜಿಸಿತು. ಈ ಪ್ರದೇಶವು ಫೋರ್ಟ್ ಸೇಂಟ್ ಜಾರ್ಜ್ ವಸಾಹತು ಆಯಿತು. ನಾಯಕನ ಜೊತೆ ಸಹಿ ಹಾಕಿದ ಒಪ್ಪಂದದ ಪ್ರಕಾರ ಬ್ರಿಟೀಷ್ ಮತ್ತು ಇತರ ಕ್ರಿಶ್ಚಿಯನ್ ಯುರೋಪಿಯನ್ನರು ತಮ್ಮ ಕಟ್ಟಡಗಳ ಹೊರಭಾಗವನ್ನು ಬಿಳಿ ಬಣ್ಣವನ್ನು ಹೊರತುಪಡಿಸಿ ಬೇರೆ ಯಾವುದೇ ಬಣ್ಣದಲ್ಲಿ ಅಲಂಕರಿಸಲು ಅನುಮತಿಸಲಿಲ್ಲ. ಪರಿಣಾಮವಾಗಿಕಾಲಾಂತರದಲ್ಲಿ ಈ ಪ್ರದೇಶವನ್ನು 'ವೈಟ್ ಟೌನ್' ಎಂದು ಕರೆಯಲಾಯಿತು.

ಒಪ್ಪಂದದ ಪ್ರಕಾರ ಯುರೋಪಿಯನ್ನರು ಮುಖ್ಯವಾಗಿ ಪ್ರೊಟೆಸ್ಟಂಟ್ ಬ್ರಿಟೀಷ್ ವಸಾಹತುಗಾರರಿಗೆ ಮಾತ್ರ ಈ ಪ್ರದೇಶದಲ್ಲಿ ವಾಸಿಸಲು ಅವಕಾಶವಿತ್ತು.ಈ ಸೀಮೆಯ ಹೊರಗಡೆ ಭಾರತೀಯರಲ್ಲದವರಿಗೆ ಆಸ್ತಿ ಹೊಂದಲು ಅವಕಾಶವಿರಲಿಲ್ಲ. ಆದಾಗ್ಯೂ ಇತರ ರಾಷ್ಟ್ರೀಯ ಗುಂಪುಗಳು ಮುಖ್ಯವಾಗಿ ಫ್ರೆಂಚ್, ಪೋರ್ಚುಗೀಸ್ ಮತ್ತು ಇತರ ಕ್ಯಾಥೊಲಿಕ್ ವ್ಯಾಪಾರಿಗಳು ನಾಯಕ ಅವರೊಂದಿಗೆ ಪ್ರತ್ಯೇಕ ಒಪ್ಪಂದಗಳನ್ನು ಮಾಡಿಕೊಂಡರು.ಇದು ವ್ಯಾಪಾರದ ಪೋಸ್ಟ್‌ಗಳು, ಕಾರ್ಖಾನೆಗಳು ಮತ್ತು ಗೋದಾಮುಗಳನ್ನು ಸ್ಥಾಪಿಸಲು ಅವಕಾಶ ಮಾಡಿಕೊಟ್ಟಿತು.

ಈಸ್ಟ್ ಇಂಡಿಯಾ ಕಂಪನಿ ಈ ಪ್ರದೇಶದ ವ್ಯಾಪಾರವನ್ನು ನಿಯಂತ್ರಿಸುತ್ತಿದ್ದಂತೆ, ಈ ಬ್ರಿಟೀಷ್ ಅಲ್ಲದ ವ್ಯಾಪಾರಿಗಳು ನಾಯಕ ಅವರೊಂದಿಗಿನ ಒಪ್ಪಂದದ ಪ್ರಕಾರ "ವೈಟ್ ಟೌನ್" ಬಳಿ ಕಂಪನಿಯ ಭೂಮಿಯಲ್ಲಿ ನೆಲೆಸಲು ಕಂಪನಿಯೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡರು.ಕಾಲಾಂತರದಲ್ಲಿ ಭಾರತೀಯರು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬಂದರು.ಆಗ ಪೋರ್ಚುಗೀಸ್ ಮತ್ತು ಇತರ ಪ್ರೊಟೆಸ್ಟಂಟ್ ಅಲ್ಲದ ಕ್ರಿಶ್ಚಿಯನ್ ಯುರೋಪಿಯನ್ನರನ್ನು ಮೀರಿಸಲಾಯಿತು.ಕ್ರಿಶ್ಚಿಯನ್ ಯುರೋಪಿಯನ್ನರ ವಿರುದ್ಧ ಹಲವಾರು ಹಿಂದೂ ಮತ್ತು ಮುಸ್ಲಿಂ ಭಾರತೀಯ ಸಮುದಾಯಗಳು ನಡೆಸಿದ ಹಿಂಸಾಚಾರದ ನಂತರ ವೈಟ್ ಟೌನ್‌ನ ರಕ್ಷಣೆಅದರ ಗೋಡೆಗಳ ಸುತ್ತಲೂ ಬೆಳೆದ ಹೆಚ್ಚಿನ ಪ್ರದೇಶವನ್ನು ಸಂಯೋಜಿಸಲು ವಿಸ್ತರಿಸಲಾಯಿತು.ಆ ಮೂಲಕ

ಅದರ ಹೆಚ್ಚಿನ ಕ್ಯಾಥೊಲಿಕ್ ಯುರೋಪಿಯನ್ ವಸಾಹತುಗಳನ್ನು ಸಂಯೋಜಿಸಿತು.ಪ್ರತಿಯಾಗಿ ಅವರು ಯುರೋಪಿಯನ್ ಅಲ್ಲದ ವ್ಯಾಪಾರಿಗಳು ಮತ್ತು ಅವರ ಕುಟುಂಬದ ಕಾರ್ಮಿಕರನ್ನು ಸಂಪೂರ್ಣವಾಗಿ ಮುಸ್ಲಿಂ ಅಥವಾ ಹೊಸದಾಗಿ ವಿಸ್ತರಿಸಿದ "ವೈಟ್ ಟೌನ್" ನ ಹೊರಗೆ ವಿವಿಧ ಹಿಂದೂ ಜಾತಿಗಳನ್ನು ಪುನರ್ವಸತಿ ಮಾಡಿದರು.

ಇದರ ಸುತ್ತಲೂ ಗೋಡೆಯಿಂದ ಆವೃತವಾಗಿತ್ತು. ಈ ಯುರೋಪಿಯನ್ ಅಲ್ಲದ ಮತ್ತು ಕ್ರೈಸ್ತೇತರ ಪ್ರದೇಶವನ್ನು "ವೈಟ್ ಟೌನ್" ನಿಂದ ಪ್ರತ್ಯೇಕಿಸಲು ಹೊಸ ವಸಾಹತು "ಬ್ಲ್ಯಾಕ್ ಟೌನ್" ಎಂದು ಕರೆಯಲ್ಪಟ್ಟಿತು. ಒಟ್ಟಾರೆಯಾಗಿ ಮೂಲ ಕೋಟೆ ಸೇಂಟ್ ಜಾರ್ಜ್ ವಸಾಹತು "ವೈಟ್ ಟೌನ್" ಮತ್ತು "ಬ್ಲ್ಯಾಕ್ ಟೌನ್" ಅನ್ನು ಮದ್ರಾಸ್ ಎಂದು ಕರೆಯಲಾಯಿತು."[೮]

- **ಸ್ವಾತಂತ್ರ್ಯ ನಂತರದ (೧೯೪೭–ಇಂದಿನವರೆಗೆ)**

"೧೯೪೭ರಲ್ಲಿ ಭಾರತ ಸ್ವತಂತ್ರವಾದ ನಂತರ, ನಗರವು ಮದ್ರಾಸ್ ರಾಜ್ಯದ ಆಡಳಿತ ಮತ್ತು ಶಾಸಕಾಂಗ ರಾಜಧಾನಿಯಾಗಿ ಮಾರ್ಪಟ್ಟಿತು.ಇದನ್ನು ೧೯೬೮ ರಲ್ಲಿ ತಮಿಳುನಾಡು ಎಂದು ಮರುನಾಮಕರಣ ಮಾಡಲಾಯಿತು.ಭಾಷಾ ದೃಷ್ಟಿಯಿಂದ ಭಾರತದಲ್ಲಿ ರಾಜ್ಯಗಳ ಮರುಸಂಘಟನೆಯ ಸಮಯದಲ್ಲಿ ೧೯೫೩ ರಲ್ಲಿ ತೆಲುಗು ಭಾಷಿಕರು ಮದ್ರಾಸನ್ನು ಆಂಧ್ರಪ್ರದೇಶದ ರಾಜಧಾನಿಯಾಗಿ ಬಯಸಿದ್ದರು.ಮತ್ತು "ಮದ್ರಾಸ್ ಮನದೆ" (ಮದ್ರಾಸ್ ನಮ್ಮದು) ಎಂಬ ಘೋಷಣೆಯನ್ನು ಸೃಷ್ಟಿಸಿದರು.ತಿರುಪತಿಯನ್ನು ಆಂಧ್ರ ರಾಜ್ಯದಲ್ಲಿ ಸೇರಿಸಿದ ನಂತರ ಚಳುವಳಿಯನ್ನು ಮುನ್ನಡೆಸಿದ ನಾಯಕರು ಮದ್ರಾಸ್ ಮೇಲಿನ ತಮ್ಮ ಹಕ್ಕನ್ನು ತ್ಯಜಿಸಲು ಮನವರಿಕೆಯಾದ ನಂತರ ತೆಲುಗು ಮಾತನಾಡುವ ರಾಜ್ಯವನ್ನು ತಕ್ಷಣ ರಚಿಸುವ ಬೇಡಿಕೆಗಳನ್ನು ಈಡೇರಿಸಲಾಯಿತು."[೯]

ಇಂದು ಆಧುನಿಕ ಚೆನ್ನೈಹಾಗೂ ಮದ್ರಾಸ್ ಎಂದು ಕರೆಯಲ್ಪಡುವ ಈ ನಗರವು ವಾಣಿಜ್ಯ, ಕೈಗಾರಿಕಾ, ಸಾಂಸ್ಕೃತಿಕ ಪರಂಪರೆ ಮತ್ತು ದೇವಾಲಯದ ವಾಸ್ತುಶಿಲ್ಪಕ್ಕೆ ಹೆಸರುವಾಸಿಯಾಗಿದೆ.ಚೆನ್ನೈ ನಗರವು ಭಾರತದ ಸುಮಾರು ನಲವತ್ತು ಪ್ರತಿಶತದಷ್ಟು ವಾಹನ ಉದ್ಯಮವು ಇಲ್ಲಿ ನೆಲೆಯನ್ನು ಹೊಂದಿದೆ.ಮತ್ತು ರಾಷ್ಟ್ರದ ವಾಹನಗಳಲ್ಲಿ ಹೆಚ್ಚಿನ ಭಾಗವನ್ನು ಇಲ್ಲಿ ಉತ್ಪಾದಿಸಲಾಗುತ್ತಿದೆ.ಇದು ಪ್ರಮುಖ ಉತ್ಪಾದನಾ ಕೇಂದ್ರವಾಗಿದೆ. ಪಾಶ್ಚಿಮಾತ್ಯ ಪ್ರಪಂಚದಿಂದ ಹೊರಗುತ್ತಿಗೆ ಐಟಿ ಮತ್ತು ಹಣಕಾಸು ಸೇವೆಗಳಿಗೆ ಚೆನ್ನೈ ಪ್ರಮುಖ ಕೇಂದ್ರವಾಗಿದೆ. ನಗರದ ಶ್ರೀಮಂತ ಸಂಗೀತ ಹಾಗೂ

---

೮. ಅಂತರಜಾಲ: https://en.m.wikipedia.org/wiki/History_of_Chennai

೯. Narayana Rao k.v. (1973), The emergence of Andhrapradesh. ಪುಟ ಸಂ:೨೨೭ ಇ. ನಿಂದ ಕ. ಅನುವಾದ

ಸಾಂಸ್ಕೃತಿಕ ಸಂಪ್ರದಾಯಗಳ ಕಾರಣದಿಂದಾಗಿ ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ (ಯುನೆಸ್ಕೋ) ಚೆನ್ನೈ ಅನ್ನು ತನ್ನ ಸೃಜನಶೀಲ ನಗರಗಳ ಪಟ್ಟಿಯಲ್ಲಿ ಸೇರಿಸಿದೆ.[೧೦]

ಈ ಎಲ್ಲಾ ನಿಟ್ಟಿನಲ್ಲಿ ಚೆನ್ನೈ ತಮಿಳುನಾಡಿನ ರಾಜಧಾನಿಯಾಗಿದ್ದು, ಇದು ಭಾರತದ ನಾಲ್ಕನೇ ದೊಡ್ಡ ನಗರವಾಗಿದೆ. ಬ್ರಿಟೀಷರ ಆಳ್ವಿಕೆಯ ಈಸ್ಟ್ ಇಂಡಿಯಾ ಕಂಪನಿಯಿಂದ ೨೦ನೇ ಶತಮಾನದ ಉತ್ತರಾರ್ಧದಲ್ಲಿ ಭಾರತದ ಸೇವೆ ಮತ್ತು ಉತ್ಪಾದನಾ ಕೇಂದ್ರವಾಗಿ ಅದರ ವಿಕಾಸದವರೆಗೆ ಸುದೀರ್ಘ ಇತಿಹಾಸವನ್ನು ಹೊಂದಿದೆ. ಈ ನಗರವು ಕಲೆ ಮತ್ತು ಕರಕುಶಲ ಕಲೆಗೆ ಹೆಸರುವಾಸಿಯಾಗಿದ್ದು, ಭಾರತೀಯ ಕಲೆ ಮತ್ತು ಕರಕುಶಲ ಕಲೆಯ ಕಲಾ ಕ್ಷೇತ್ರಕ್ಕೆ ಪುನರುಜ್ಜೀವನದ ಕೇಂದ್ರವಾಗಿದೆ. ಈ ನಗರವು ಒಂದು ದೊಡ್ಡವಾಣಿಜ್ಯ ಮತ್ತು ಉದ್ಯಮ ಕೇಂದ್ರವಾಗಿದ್ದು ಹಾಗೂ ಈನಗರದ ಲಲಿತಕಲಾ ಇತಿಹಾಸವನ್ನು ಚೆನ್ನೈ ಸುತ್ತಮುತ್ತಲಿನ ಪ್ರದೇಶವು ಹಿಂದಿನ ಕಾಲದಿಂದಲೂ ಪ್ರಮುಖ ಆಡಳಿತ ಸೈನ್ಯ ಮತ್ತು ಆರ್ಥಿಕ ಕೇಂದ್ರವಾಗಿದ್ದು. ಅಲ್ಲದೆ ಪ್ರಮುಖವಾಗಿ ಪಲ್ಲವ, ಪಾಂಡ್ಯ, ವಿಜಯನಗರ ಸಾಮ್ರಾಜ್ಯಗಳು ಆಳಿ ಈ ಮಹಾನಗರದಲ್ಲಿ ಕಲೆ, ಸಂಸ್ಕೃತಿ ಬಿಂಬಿಸುವ ಅನೇಕ ದೇವಾಲಯಗಳು, ಬಂದರುಗಳು ಕಟ್ಟಿ ತನ್ನ ಸಾಂಸ್ಕೃತಿಕ ಪರಂಪರೆ ಮತ್ತು ದೇಗುಲ ಶಿಲ್ಪಗಳಿಂದಾಗಿ ಸುಪ್ರಸಿದ್ಧ ಎನಿಸಿಕೊಂಡಿದೆ.

ಚೆನ್ನೈನ ದೃಶ್ಯಕಲಾ ಪರಿಸರ ಎಂದ ತಕ್ಷಣ ನೆನಪಾಗುವುದು ಮೊಟ್ಟಮೊದಲು ಚೋಳಮಂಡಲ ಕಲಾಗ್ರಾಮ ಮತ್ತು ಭಾರತ ಸ್ವಾತಂತ್ರದಮೊದಲು ಬ್ರಿಟೀಷರು ಭಾರತದಲ್ಲಿ ಸ್ಥಾಪಿಸಿದ ಮದ್ರಾಸ್ ಸ್ಕೂಲ್ ಆಫ್ ಆರ್ಟ್ ಆಂಡ್ ಕ್ರಾಫ್ಟ್ ಕಲಾಶಾಲೆ,ಅಲ್ಲಿನ ವಸ್ತುಸಂಗ್ರಹಾಲಯಗಳು, ದಕ್ಷಿಣಚಿತ್ರ ಮತ್ತು ಕಲಾಗ್ಯಾಲರಿಗಳು, ಅಲ್ಲದೇ ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಾದೇಶಿಕ ಕೇಂದ್ರ ಇನ್ನೂ ಹಲವಾರು ಕಲಾಚಟುವಟಿಕೆಗಳ ಸ್ಥಳಗಳು ಕಂಡುಬರುತ್ತವೆ.

*** ಚೋಳಮಂಡಲ ಕಲಾಗ್ರಾಮ**

ಆಧುನಿಕ ಚಿತ್ರಕಲಾ ಜಗತ್ತಿಗೆ ಪೂರಕವಾಗಿ ದಾರಿ ತೋರಿಸುವುದರಲ್ಲಿ ಕಲಾಗ್ರಾಮಗಳ ಪಾತ್ರವು ಬಹಳಮುಖ್ಯವಾಗಿದೆ.ಕಲಾಗ್ರಾಮ ನಮ್ಮ ಭಾರತದೇಶದ ಲಲಿತಕಲೆಗಳ ಬಹುದೊಡ್ಡ ಆಸ್ತಿ.ಸಂಸ್ಕೃತಿ, ಸಮೃದ್ಧಿ ಮತ್ತು ಪ್ರವೃತ್ತಿ ತೋರುವ ಕಲಾಗ್ರಾಮಗಳು ಪ್ರಮುಖವಾಗಿ ಕಾಣಿಸಿಕೊಳ್ಳುತ್ತವೆ. ಕಲೆಯಬೆಳವಣಿಗೆಗೆ ಮುಂದಿನ ಪೀಳಿಗೆಗೆ ಕಲಾವಿದರ ಮಾರ್ಗದರ್ಶಿಯಾಗಿ ಉಳಿದುಕೊಂಡು ಬಂದಿವೆ. "ಕಲಾಗ್ರಾಮಗಳು ೧೯-೨೦ನೇ ಶತಮಾನಗಳಿಂದ ಪ್ರಾರಂಭಗೊಂಡು ಅವು ಚೆನ್ನೈ,ಬೆಂಗಳೂರು, ಕಲ್ಕತ್ತಾ ಇತರೆ ಪ್ರದೇಶಗಳಲ್ಲಿಮಾತ್ರ ಕಾಣಿಸಿಕೊಳ್ಳುತ್ತವೆ.

---

೧೦. ಅಂತರಜಾಲ: https://en.m.wikipedia.org/wiki/History_of_Chennai ಇ. ನಿಂದ ಕ. ಅನುವಾದ

ಕಲಾಗ್ರಾಮಗಳು ಪ್ರಶಾಂತ ಮತ್ತು ಸೃಜನಾತ್ಮಕ ರೀತಿಯ ಕ್ರಿಯೆಯ ವಾತಾವರಣವನ್ನು ಒದಗಿಸುವ"[೧೧] ಒಂದು ಪ್ರಬುದ್ಧ ಸ್ಥಳವಾಗಿದೆ ಎಂದು ಹೇಳಬಹುದು.ಅದರಲ್ಲಿ ಚೆನ್ನೈಲ ಚೋಳಮಂಡಲ ಕಲಾಗ್ರಾಮ ಕೂಡ ಒಂದು.

"೧೯೬೪ ರಲ್ಲಿ ಸ್ಥಾಪನೆಯಾದ ಚೋಳಮಂಡಲ ಕಲಾವಿದರ ಕಲಾಗ್ರಾಮವು ಚೆನ್ನೈನಪ್ರಮುಖ ಸ್ಥಳಗಳಲ್ಲಿ ಒಂದಾಗಿದೆ.ಇದು ಯಾವುದೇ ಸರಕಾರದ ಸಹಾಯವಿಲ್ಲದೆ ಕಲಾವಿದರುಗಳು ತಮ್ಮದೇ ಆದ ಸ್ವಂತ ಕಲಾ ಅಭಿವ್ಯಕ್ತಿಗೆ ಸ್ಥಳವನ್ನು ಸೃಷ್ಟಿಸಿಕೊಂಡಿದ್ದಾರೆ."[೧೨]ಇದರ ಪೂರ್ಣಗೌರವ ಅರ್ಪಣೆಯನ್ನು ಖ್ಯಾತ ಕಲಾವಿದರಾದ ಕೆ.ಸಿ.ಎಸ್.ಪಣಿಕರ್ ಮತ್ತು ಅಲ್ಲಿಯ ಕೆಲವು ಕಲಾವಿದರುಗಳಿಗೆ ಸೇರುತ್ತದೆ. ಈಗ ಕಲಾಗ್ರಾಮ ೫೨ನೇ ವರ್ಷಗಳಕಾಲ ಕಳೆದು ವಿವಿಧರೀತಿಯಬೆಳವಣಿಗೆಯನ್ನು ಕಂಡಿರುವುದನ್ನು ನೋಡಬಹುದಾಗಿದೆ.ಇಲ್ಲಿ ಭಾರತದ ಬೇರೆ ಬೇರೆ ಕಡೆಯ ಪ್ರದೇಶದ ಬೇರೆ ಬೇರೆ ಭಾಗದಿಂದ ಕಲಾವಿದರು ಬಂದು ಒಂದೆಡೆ ನೆಲೆಸಿ ಸೃಜನಾತ್ಮಕ ಕಲಾಭಿವ್ಯಕ್ತಿ ಕೇಂದ್ರವಾಗಿದೆ.ತಮ್ಮದೇ ಆದ ಸಂಸ್ಕೃತಿ, ವೈವಿಧ್ಯ, ಕಲಾಭಾವನೆಗಳನ್ನು ಈ ಕಲಾನಗರಿಯಲ್ಲಿ ಕಲಾವಿದರು ಕಲಾತ್ಮಕವಾಗಿ ರೇಖೆ, ಬಣ್ಣ, ಕುಂಚಗಳ, ಶಿಲ್ಪಕಲೆಗಳ ಮೂಲಕ ತಮ್ಮ ಭಾವನೆಗಳಿಂದ ಭಾವಪೂರ್ಣವಾಗಿ ರಚಿಸಿದ ಕಲಾಕೃತಿಗಳು ಅಭಿವ್ಯಕ್ತಗೊಳ್ಳುತ್ತವೆ.

ಇದು ಭಾರತೀಯ ಕಲಾನಗರಿಗಳಲ್ಲಿ ತುಂಬಾನೆ ಸುದೀರ್ಘ ಅಂದರೆ ೫೦ ದಶಕಗಳು ಕಳೆದುಮುಂದಿನ ಪೀಳಿಗೆಗೆ ಇದು ದೊಡ್ಡ ಮಾದರಿಯಾಗಿ ಉಳಿದುಕೊಂಡಿದೆ.ಚೋಳಮಂಡಲ ಕಲಾವಿದರು ಇಂದಿನ ಸಮಕಾಲೀನ ದೃಶ್ಯಕಲೆತಂತ್ರ, ಶೈಲಿಗಳಿಂದ ಹಾಗೂ ಲಲಿತಕಲೆಗಳು ಕೂಡ ಅನೇಕ ರೀತಿಯಾಗಿ ಬೆಳೆಯುತ್ತಿವೆ. ಈ ಕಲಾಗ್ರಾಮವು ಇದು ಚನ್ನೈ ನಿಂದ ಸುಮಾರು ೧೧ ಕಿಲೋ ಮೀಟರ್ ದೂರದಲ್ಲಿ ಇರುವ ಒಂದು ಪುಟ್ಟ ಸುಂದರವಾದ ಕಲಾ ದೃಷ್ಟಿಕೋನವುಳ್ಳ ಪ್ರದೇಶವಾಗಿದೆ.ಈ ನಗರವನ್ನು ಚೋಳಮಂಡಲ ಕಲಾವಿದರ ಕಲಾಗ್ರಾಮವಾಗಿ ಕರೆಸಿಕೊಳ್ಳುತ್ತದೆ. ಇದು ಮದ್ರಾಸ್‌ನ ಇತಿಹಾಸದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ ಹಾಗೂ ಕಲಾವಿದರಿಗೆ, ಸಹೃದಯರಿಗೆ ತುಂಬಾನೇ ಆಸರೆಕೊಟ್ಟು ಬೆಳೆಸಿದ ಸ್ಥಳ ಇದಾಗಿದೆ.

ಈ ಕಲಾಗ್ರಾಮದ ಕಲಾವಿದರುಗಳು ಕಲಾಜೀವನದ ಜೊತೆಗೆ ತಾವು ಹೊರದೇಶಗಳ ಪ್ರಯಾಣವನ್ನು ಕಂಡುಕೊಂಡು ಭಾರತೀಯಕಲೆಗೆ ಮತ್ತು ಚೋಳಮಂಡಲದ ಕಲಾವಿದರಿಗೆ ಒಂದು ಉತ್ತಮವಾದ ಸ್ಥಳ ಹಾಗೂ ಅವಕಾಶಗಳನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಬೆಳೆದಿದೆ.ಈ ಕಲಾಗ್ರಾಮ ಚೆನ್ನೈನ ಒಂದು ದೃಶ್ಯಕಲೆಯ ಅಮೂಲ್ಯವಾದ ಭಾಗವೆಂದು ಈ ಅಧ್ಯಾಯನದಿಂದ ತಿಳಿದು ಬರುತ್ತದೆ.

೧೧. ಮಹ್ಗದ :ಚೋಳಮಂಡಲ. (ಅ.ಪ್ರ.ಲ.ಸಂ.ಪ್ರ)ಎಂ.ಎಂ.ಕೆ. ಕಾಲೇಜು, ಗುಲಬರ್ಗಾ. ಪುಟ ಸಂ:೫
೧೨. ಅದೇ. ಪುಟ ಸಂ:೭

"ಕಲಾವಿದ ಎಂ.ವಿ.ದೇವನ್ ಎನ್ನುವ ವಾಸ್ತುಶಿಲ್ಪಕಾರರು ಚೋಳಮಂಡಲದ ಗ್ಯಾಲರಿ ಸ್ಟುಡಿಯೋಗಳ ವಾಸ್ತು ವಿನ್ಯಾಸವನ್ನು ಹಾಕಿದ್ದೂ, ಇದಕ್ಕಿಂತ ಮೊದಲು ಡಚ್ ದಂಪತಿಗಳು ಆರಂಭಿಕ ವಿನ್ಯಾಸವನ್ನು ಮಾಡಲಾಗಿತ್ತು. ಹೀಗೆ ಬೆಳೆದು ಕಲಾಗ್ರಾಮ ಸಮಕಾಲೀನ ಕಲೆಯ ಚಳುವಳಿಯೂ ಒಂದನೇ ಫೆಬ್ರುವರಿ ೨೦೦೧ ರಂದು ಪ್ರಾರಂಭವಾಯಿತು.ಈ ಚಳುವಳಿಯಲ್ಲಿ ಕೆಲವು ಪ್ರಮುಖಕಲಾವಿದರುಗಳಾದ ಜೆ.ಸುಲ್ತಾನ ಅಲಿ, ಗೋಪಾಲ ಎಂ.ಸೇನಾದಿಪತಿ, ಎ.ಪಿ.ಸಣಾನರಾಜ್, ಪಿ.ಎಸ್.ನಂದನ್, ಎಸ್.ಜಿ. ವಾಸುದೇವ, ಕೆ.ವಿ. ಹರಿದಾಸನ್, ತೊಟ್ಟದರಾನಿ, ಎಸ್.ನಂದಗೋಪಾಲ ರಂತಹ ಅನೇಕ ಕಲಾವಿದರ ಕಲಾಕೃತಿಗಳ ಪ್ರದರ್ಶನವು ಏರ್ಪಡಿಸುತ್ತ ಅನೇಕ ಕಲಾ ಚಟುವಟಿಕೆಗಳು ಇಲ್ಲಿ ಸಕ್ರೀಯವಾಗಿ ಜರುಗುತ್ತಲಿರುತ್ತವೆ. ೨೦೧೭ ರಂದು ಚೋಳಮಂಡಲವು ತನ್ನ ೫೦ ವರ್ಷಗಳನ್ನುಮುಗಿಸಿ ಮುಂದಕ್ಕೆ ಸಾಧನೆಯತ್ತ ನಡೆದುಕೊಂಡು ಬಂದಿದೆ. ಹೀಗೆ ಚೋಳಮಂಡಲ ಕಲಾಗ್ರಾಮವು ಕಲಾತ್ಮಕವಾದ ಸಾಹಸವನ್ನು ಹೊಂದಿದೆ."[೧೩]ಇಂದು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಕಲಾ ಪ್ರದರ್ಶನದಂತಹ ಕೇಂದ್ರ ಕೇಂದ್ರಸ್ಥಾನವಾಗಿದೆ. ಇದು ಸಾಹಯುವ ಅಥವಾ ಮರೆಯಾದ ಕಲೆಗಳ ಬಗ್ಗೆ ಜಾಗೃತಿ ಮೂಡಿಸುವ ವಿವಿಧ ಕಲಾ ಮೇಳಗಳು ಮತ್ತು ಉತ್ಸವಗಳನ್ನು ಆಯೋಜಿಸುತ್ತ ಬರುತ್ತಿದೆ.

ಹೀಗಾಗಿ ಚೋಳಮಂಡಲ ಇಂದು ಕ್ರಿಯಾಶೀಲವಾದ ಜಾಗವಾಗಿದ್ದು ಇಲ್ಲಿ ಕಲೆಯ ಆರಾಧನೆ ನಿರಂತರವಾಗಿ ನಡೆಯುತ್ತದೆ.ಇದು ಶಾಸ್ತ್ರೀಯ ಮತ್ತು ಸಮಕಾಲೀನ ಕಲೆಯಾಗಿದ್ದರು ಈ ಕಲಾಗ್ರಾಮವು ಎಲ್ಲಾ ಕಲಾಕೃತಿಗಳಿಗೆ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತಿದೆ.ಸುಂದರವಾದ ವಾತಾವರಣ ಮತ್ತು ತೆರೆದ ರಂಗ ಮಂದಿರವೆಂದು ಹೇಳಬಹುದು.ಇಲ್ಲಿ ನೃತ್ಯ, ವಾಚನ, ಗೋಷ್ಠಿಗಳಿಗೂ ಕೂಡ ಒಂದು ಸುಂದರ ಸ್ಥಳವಾಗಿ ಉಳಿದುಕೊಂಡಿದೆ. ಹೀಗೆ ತನ್ನ ಇತಿಹಾಸವನ್ನು ರೂಪಿಸಿಕೊಂಡು ಮುಂದಿನ ಪೀಳಿಗೆಗೆ ಪೂರ್ವಕವಾಗಿ ಉಳಿಯುವ ಹಾಗೆ ತನ್ನ ಕಾರ್ಯನಿರ್ವಹಿಸುತ್ತಿದೆ.

* **ದಕ್ಷಿಣ ಚಿತ್ರ**

ದಕ್ಷಿಣ ಭಾರತೀಯ ಕಲೆ, ಸಂಸ್ಕೃತಿ ಮತ್ತು ಪರಂಪರೆಯನ್ನು, ಜೀವಂತ ಇತಿಹಾಸವನ್ನು ತೋರಿಸುವ ಸುಂದರವಾದ ವಸ್ತುಸಂಗ್ರಹವಾಗಿದೆ. "ಇದು ಚೆನ್ನೈ ದಕ್ಷಿಣಕ್ಕೆ ೨೫ ಕೀ.ಮಿ. ದೂರದಲ್ಲಿರುವ ಪೂರ್ವ ಕರಾವಳಿ ರಸ್ತೆ ಮತ್ತು ಕಡೂ ಎನ್ನುವಲ್ಲಿದ್ದೂ, ಇದು ಒಂದು ಪಾರಂಪರಿಕ ಕಲಾ ಕೇಂದ್ರವಾಗಿದೆ.

ಇದು ದಕ್ಷಿಣ ಭಾರತೀಯ ಸಾಂಪ್ರದಾಯಿಕ ಜೀವನ ಶೈಲಿಯನ್ನು ಎಲ್ಲಾ ರಾಜ್ಯಗಳ ಆಧಾರದ ಮೇಲೆ ಪ್ರದರ್ಶಿಸಲಾಗಿದೆ.ಇದನ್ನು ಮದ್ರಾಸ್ ಕ್ರಾಫ್ಟ್ ಫೌಂಡೇಶನ್ ೧೪ ಡಿಸೆಂಬರ್ ೧೯೯೬ರಲ್ಲಿ ಸ್ಥಾಪಿಸಿತು.ಇದು ತಮಿಳುನಾಡು ಸರಕಾರದಿಂದ ೩೩ ವರ್ಷಗಳ ಗುತ್ತಿಗೆ

೧೩. ಅಂತರಜಾಲ: http://www.cholamandalartistvillage.com/ ಇ. ಇಂದ ಕ. ಅನುವಾದ

ತೆಗೆದುಕೊಂಡ ೧೦ ಎಕರೆ ಭೂಮಿಯಲ್ಲಿ ನಿರ್ಮಿಸಲಾಗಿದೆ. ಇದು ಪಾರಂಪರಿಕ ಹಳ್ಳಿಯಾಗಿ ಅಭಿವೃಧಿ ಹೊಂದಿದ ದಕ್ಷಿಣ ಚಿತ್ರವು ದಕ್ಷಿಣ ಭಾರತ ರಾಜ್ಯಗಳಲ್ಲಿನ ಭಾರತೀಯರ ಜೀವನಶೈಲಿ ವಿಧಾನವನ್ನು ಚಿತ್ರಿಸುವ ಭಾರತದ ಕಲೆ, ಜಾನಪದ ಪ್ರದರ್ಶನಗಳಂತಹ ಒಂದು ಶ್ರೇಣಿಯನ್ನು ಹೊಂದಿದೆ.

ಈ ಮ್ಯೂಜಿಯಂನ ಯೋಜನಾ ಪರಿಕಲ್ಪನೆಯನ್ನು ವಾಸ್ತುಶಿಲ್ಪಿ 'ಲಾರಿ ಬೇಕರ್ ಬೆನ್ನಿಕ್ಯೂರಿ ಯೊಜಕೋಸ್' ರವರು ಅಭಿವೃದ್ದಿಪಡಿಸಿದರು.ಈ ಸಂಗ್ರಹಾಲಯದಲ್ಲಿ ದಕ್ಷಿಣ ಭಾರತದ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ, ಉತ್ತರಕರ್ನಾಟಕ, ಕೇರಳ ಮತ್ತು ತೆಲಂಗಾಣ ಜನರ ಜೀವನ ಶೈಲಿಯನ್ನು ಪ್ರತಿನಿಧಿಸುವ ೧೮ ಪಾರಂಪರಿಕ ಮನೆಗಳನ್ನು ನೋಡಬಹುದಾಗಿದೆ.ನಮ್ಮ ಕರ್ನಾಟಕದ ಇಳಕಲ್ ಪ್ರದೇಶದ ಹಳ್ಳಿಮನೆ ಮತ್ತು ಸಾಂಪ್ರದಾಯಿಕ ವಸ್ತುವಿನ್ಯಾಸವನ್ನು ಇಲ್ಲಿ ಕಾಣಬಹುದು.

ಇಲ್ಲಿನ ಕಲಾಕೃತಿಗಳು ದಕ್ಷಿಣ ರಾಜ್ಯದಲ್ಲಿನ ದೈನಂದಿನ ಜೀವನಶೈಲಿ ಪ್ರತಿಬಿಂಬಿಸುತ್ತವೆ. ೨೦೧೪ರ ಹೊತ್ತಿಗೆ ಪ್ರದರ್ಶನದಲ್ಲಿ ೪೨೨೦ ಕಲಾಕೃತಿಗಳು ಇದ್ದವು, ಅವು ೩,೨೦೦ ಕಲೆಗೆ ಸಂಬಂಧಿಸಿದ್ದು ೭೦ ಸಮಕಾಲೀನ ವಿಷಯಗಳಿಗೆ ಸಂಬಂಧಿಸಿದ್ದು, ಸರಿಸುಮಾರು ೯೫೦ ವಸ್ತುಗಳು ಬಟ್ಟೆ, ಹತ್ತಿ ಮತ್ತು ರೇಷ್ಮೆ ಬಟ್ಟೆಗಳಲ್ಲಿ ಪುರುಷರು ಮತ್ತು ಮಹಿಳೆಯರ ದಕ್ಷಿಣ ಭಾರತದ ವಿಶಿಷ್ಟ ಉಡುಪನ್ನು ಒಳಗೊಂಡಿವೆ."[೧೪] ಈ ಸಂಗ್ರಾಹಲಯದಲ್ಲಿ ದಕ್ಷಿಣ ಭಾರತದ ಕಲೆ ಕರಕುಶಲ ವಸ್ತುಗಳ ಪ್ರದರ್ಶನ ವಿಷೇಶವಾಗಿ ದಕ್ಷಿಣ ಭಾರತದ ಸಂಪ್ರದಾಯಗಳಾದ ಜಾನಪದ ಪ್ರದರ್ಶನ-ಕಲೆಗಳು, ಮಾನವಶಾಸ್ತ್ರ, ಜಾನಪದಕ್ಕೆ ಸಂಬಧಿಸಿದ ಪುಸ್ತಕಗಳು, ಬ್ರಾಹ್ಮಣ ಜನರ ಸಾಂಸ್ಕೃತಿಕ ಬದುಕು ಮತ್ತು ದಕ್ಷಿಣಭಾರತದ ಪಾರಂಪರಿಕ ಮನೆಗಳ ಕರಕುಶಲಕಲೆ ಸಂಪ್ರದಾಯಗಳಜೊತೆಗೆ ತಮಿಳುನಾಡಿನ ಸಂಪ್ರದಾಯಕದೃಶ್ಯಕಲಾ ಪರಿಸರವನ್ನುಬಿಂಬಿಸುವಂತಹ ಸಾವಿರಾರು ಚಿತ್ರಗಳಿವೆ.

*** ಎಗ್ಮೋರ್ ಸರಕಾರಿ ವಸ್ತು ಸಂಗ್ರಹಾಲಯ,(ಮದ್ರಾಸ್) ಚೆನ್ನೈ**

ಎಗ್ಮೋರ್ ಸರಕಾರಿ ವಸ್ತು ಸಂಗ್ರಹಾಲಯ ಇದರಿಂದಲೂ ನಾವು ಈ ಭಾಗದ ಕಲೆಯ ಕುರಿತು ತಿಳಿಯಬಹುದಾಗಿದೆ.ಇದು "೧೮೫೧ ರಲ್ಲಿ ಸ್ಥಾಪನೆಯಾಗಿದ್ದು.ಆರು ಕಟ್ಟಡಗಳು ೪೬ ಗ್ಯಾಲರಿಗಳನ್ನು ಒಳಗೊಂಡಿರುವ ವಸ್ತು ಸಂಗ್ರಹಾಲಯವಾಗಿದೆ.ಇದು ೧೬.೨೫ ಎಕರೆ ಭೂಮಿಯನ್ನು ಒಳಗೊಂಡಿದ್ದು, ಇಲ್ಲಿ ನಾವು ದೃಶ್ಯಕಲೆಗೆ ಸಂಬಂಧಪಟ್ಟಂತೆ ಪುರಾತತ್ವ ಶಾಸ್ತ್ರ, ನಾಣ್ಯ, ಶಿಲ್ಪಗಳು, ತಾಳೆಗರಿ, ಹಸ್ತಪ್ರತಿಗಳು ಮತ್ತು ಅಮರಾವತಿ ವರ್ಣ ಚಿತ್ರಗಳು, ಅಲ್ಲದೆ ಅನೇಕ ರಾಜರ ಕಾಲದ ಶಿಲ್ಪ ಕಲಾಕೃತಿಗಳು ಸೇರಿದಂತೆ ವಿವಿಧ ಕ್ಷೇತ್ರಗಳನ್ನು ಒಳಗೊಂಡ ವಿವಿಧ ಕಲಾಕೃತಿಗಳು ಮತ್ತು ವಸ್ತುಗಳನ್ನು ನೋಡಬಹುದು."[೧೫] ನಗರದಲ್ಲಿ ಬ್ರಿಟೀಷರು ಕಟ್ಟಿದ ಚರ್ಚುಗಳಿಂದಲೂ ವಾಸ್ತುಕಲೆಯನ್ನು.ಕಾಣಬಹುದಾಗಿದೆ.

---

೧೪. ಅಂತರಜಾಲ: https://www.dakshinachitra.net/ ಇ. ಇಂದ ಕ. ಅನುವಾದ

೧೫. ಅಂತರಜಾಲ: https://en.m.wikipedia.org/wiki/Government_Museum,_Chennai ಇ. ಇಂದ ಕ.ಅನುವಾದ

* ಆರ್ಟ್ ಆಂಡ್ ಕ್ರಾಫ್ಟ್ ಕಾಲೇಜು (ಮದ್ರಾಸ್) ಚೆನ್ನೈ

ಭಾರತದಲ್ಲಿ ಬ್ರಿಟೀಷರ ಆಳ್ವಿಕೆಯಿಂದಾಗಿ ರಾಜಕೀಯ, ಸಾಮಾಜಿಕ, ಆರ್ಥಿಕ ಕ್ಷೇತ್ರದಲ್ಲಾದ ಬದಲಾವಣೆಗಳು ದೃಶ್ಯಕಲಾ ಶಿಕ್ಷಣದಲ್ಲೂ ಕಂಡುಬರುತ್ತದೆ."ಭಾರತದಲ್ಲಿ ಬ್ರಿಟೀಷ್ ನಿರೂಪಿತವಾದ ಕಲಾ ಸಂಸ್ಥೆಗಳಲ್ಲಿ ಚೆನ್ನೈ ಕೈಗಾರಿಕಾ ಕರಕುಶಲ ಮತ್ತು ಚಿತ್ರಕಲಾ ಶಾಲೆಯು ಒಂದು.ಇದನ್ನು ೧೮೫೦ ರಲ್ಲಿ ಬ್ರಿಟೀಷ್ ಸೈನ್ಯದಲ್ಲಿ ಖ್ಯಾತ ಸರ್ಜನ್ ವೈದ್ಯಕೀಯ ಸೇವೆ ಸಲ್ಲಿಸಿದ ಡಾ.ಅಲೆಕ್ಸಾಂಡರ್ ಹಂಟರ್ ಎಂಬುವನು ಈ ಖಾಸಗಿ ಕಲಾಶಾಲೆಯನ್ನು ಮೊದಲು ಪ್ರಾರಂಭಿಸಿದನು.೧೮೫೨ರಲ್ಲಿ ಮದ್ರಾಸ್ ಸರಕಾರವೂ ಈ ಶಾಲೆಯನ್ನು ತನ್ನ ವಶಕ್ಕೆ ತೆಗೆದುಕೊಂಡು ಅದನ್ನು ಗೌರ್ಮೆಂಟ್ ಸ್ಕೂಲ್ ಆಫ್ ಇಂಡಸ್ಟ್ರಿಯಲ್ ಆರ್ಟ್ ಎಂದು ನಾಮಕರಣ"[೧೬] ಮಾಡಿತ್ತು.ಇದನ್ನು ಪೋಪಮ್ಸ್ ಬ್ರಾಡ್ವೇ ಹತ್ತಿರ ಪ್ರಾರಂಭಿಸಲಾಗಿತ್ತು.ಈ ಸಂದರ್ಭದಲ್ಲಿ ಇಂಡಸ್ಟ್ರಿಯಲ್ ಡಿಪಾರ್ಟ್ಮೆಂಟ್ ಮತ್ತು ಆರ್ಟ್ಸ್ ಡಿಪಾರ್ಟ್‌ಮೆಂಟ್ಸ್ ಎಂಬ ಎರಡು ವಿಭಾಗಗಳನ್ನು ಈ ಕಾಲೇಜು ಹೊಂದಿತ್ತು.

ಇಲ್ಲಿ ವುಡ್ ಕಾರ್ವಿಂಗ್, ಇಟ್ಟಿಗೆಗಳ ತಯಾರಿಕೆ, ಬಿದರಿಕಲೆ ಮುಂತಾದ ಕಲೆಗಳ ತರಬೇತಿಯನ್ನು ಹೊಂದಿತ್ತು. ಹಾಗೂ "೧೮೫೫ರಲ್ಲಿ ಭಾರತದಲ್ಲಿ ಪ್ರಥಮ ಬಾರಿಗೆ ಛಾಯಾ ಚಿತ್ರಕಲೆ ವಿಷಯವನ್ನು ಇಲ್ಲಿ ಪ್ರಾರಂಭಿಸಲಾಯಿತು. ೧೮೮೪ ರಲ್ಲಿ ಇ.ಬಿ.ಹ್ಯಾವೆಲ್ ರವರು ಈ ಕಾಲೇಜಿಗೆ ಬರುತ್ತಾರೆ. ಭಾರತೀಯ ಸಾಂಪ್ರದಾಯಿಕ ಗುರುಕುಲ ಪದ್ಧತಿ ಮತ್ತು ಗ್ರಾಮೀಣ ಪ್ರದೇಶದ ಕರಕುಶಲ ಕಲೆಗಳಿಂದ ತುಂಬಾ ಪ್ರಭಾವಿತರಾಗಿದ್ದು ಅದರ ಪರಿಣಾಮವಾಗಿ ಈ ಕೋರ್ಸುಗಳು ಇಲ್ಲಿಬರಲು ಸಾಧ್ಯವಾಯಿತು.ಇದು ೧೯೬೨ರಲ್ಲಿ ಸರಕಾರಿ ಕಲೆ ಮತ್ತು ಕರಕುಶಲ ಕಲೆಗಳ ಕಾಲೇಜು ಎಂದು ಹೆಸರು ಬದಲಾವಣೆ ಆಯಿತು."[೧೭]

ಇಲ್ಲಿ ಲಲಿತ ಕಲೆಗಳ ಪದವಿಯಲ್ಲಿ ಚಿತ್ರಕಲೆ, ಶಿಲ್ಪಕಲೆ, ದೃಶ್ಯ ಸಂವಹನ, ಟೆಕ್ಸ್ ಟೈಲ್ ಡಿಸೇನ್, ಮುದ್ರಣಕಲೆ, ಸೆರಾಮಿಕ್ ಮುಂತಾದ ಪದವಿ ಕೋರ್ಸುಗಳನ್ನು ಪ್ರಾರಂಭಿಸಿ ಕಲಾವಿದರನ್ನು ಬೆಳೆಸಿದ ಹಿರಿಮೆ ಇದರದ್ದಾಗಿದೆ.ಈ ಕಲಾಶಾಲೆಗೆ "ಜಾರ್ಜ್ ಟೌನ್ ಎಂಬುವವರು ನಿರ್ದೇಶಕರಾಗಿ ಬಂದ ಮೇಲೆ ಇಲ್ಲಿ ಸಾಂಪ್ರದಾಯಿಕ ಕಲಾವಿದರು ಉದ್ಯೋಗಸ್ಥರು ಆಗುವ ಹಿನ್ನೆಲೆಯಲ್ಲಿ ಮೆಟಲ್ ವರ್ಕ ಮುಂತಾದ ಕರಕುಶಲ ವಿಷಯಗಳ ತರಬೇತಿಯ ಕಲಾ ಶಿಕ್ಷಣವನ್ನು ಪ್ರಾರಂಭಿಸುತ್ತಾರೆ.ಈ ಕಲಾಶಾಲೆಯಲ್ಲಿ ಸಿದ್ಧಗೊಂಡ ಕಲಾಕೃತಿಗಳನ್ನು ಲಂಡನ್ನಿನ ರಾಣಿಯ ರಾಯಲ್ ಪ್ಯಾಲೇಸಿಗೆ ಕಳುಹಿಸಿ ಕೊಡಲಾಗುತ್ತಿತ್ತು.ಇಲ್ಲಿ ರಚಿಸಿದ ಕಲಾಕೃತಿಗಳನ್ನು ವಿದೇಶಿಯ ವಸ್ತು ಸಂಗ್ರಹಾಲಯಗಳಲ್ಲಿ ಸಂಗ್ರಹಿಸಲಾಗಿದೆ."[೧೮] ಹೀಗೆ ಕಾಲಕ್ಕೆ ಅನುಗುಣವಾಗಿ ಆಗಮಿಸಿದ ನಿರ್ದೇಶಕರ ಕಾಲಾವಾದಿಗಳಲ್ಲಿ

೧೬. ಪ್ರೊ.ಎಸ್.ಸಿ. ಪಾಟೀಲ್: ದೃಶ್ಯಕಲಾ ಸಂವೇದನೆ. ಪುಟ ಸಂ:೨
೧೭. ಅದೇ.ಪುಟ ಸಂ:೩
೧೮. ಅದೇ. ಪುಟ.

ಹಂತ-ಹಂತವಾಗಿ ದೃಶ್ಯಕಲಾ ಶಿಕ್ಷಣದ ಅನೇಕ ಬದಲಾವಣೆಯ ಅಭಿವೃದ್ಧಿಯಾಗಿರುವುದನ್ನು ನಾವು ಕಾಣುತ್ತೇವೆ.

ಇಲ್ಲಿ ಕಲಿತ ಅನೇಕ ಕಲಾವಿದರು ತಮ್ಮದೇ ಆದ ಕಲಾಶೈಲಿಯಿಂದ ವಿಶ್ವದ ನಾನಾ ಭಾಗಗಳಲ್ಲಿ ಗುರುತಿಸಿಕೊಂಡಿದ್ದಾರೆ. ಅವರಲ್ಲಿ ಪ್ರಮುಖರಾದಸಂಧನರಾಜ್, ಮುನಿಸ್ವಾಮಿ, ಕೆ.ಎಂ.ಆದಿಮೂಲಂ, ಆರ್.ಬಿ.ಭಾಸ್ಕರನ್, ಚಂದ್ರಶೇಖರ್, ಶಿಲ್ಪಕಲೆಯಲ್ಲಿ ಹೆಸರುವಾಸಿಯಾದ ದೇವಿಪ್ರಸಾದ ರಾಯ್ ಚೌಧರಿ, ಕೆ.ಸಿ.ಎಸ್.ಪಣಿಕರ್, ಕಣ್ಣಿಯಪ್ಪನ್, ಎಸ್.ಧನಪಾಲ್, ಕನಯಿ ಕುಂಜಿರಾಮನ್, ಮುದ್ರಣ ಕಲೆಯಲ್ಲಿ ಹೆಸರುವಾಸಿಯಾದ ಆರ್.ಎಮ್.ಪಳನಿಯಪ್ಪನ್, ಎನ್.ರಾಧಾಕೃಷ್ಣನ್, ಆದಿವೀರ ಪಾಂಡಿಯನ್ ಹೀಗೆ ಮುಂತಾದವರನ್ನು ದೃಶ್ಯಕಲಾ ಕ್ಷೇತ್ರದ ಬೆಳವಣಿಗೆಗೆ ಕಲಾವಿದರನ್ನು ಸಿದ್ದಗೊಳಿಸಿದ ಹಿರಿಮೆ ಹಾಗೂಈ ಕಲಾ ಸಂಸ್ಥೆಯಿಂದ ಅನೇಕ ಪ್ರತಿಭಾವಂತ ಕಲಾವಿದರ ಬೆಳವಣಿಗೆಗೆ ಕಾರಣವಾಗಿದೆಯೆಂದು ತಿಳಿದುಬರುತ್ತದೆ.

- **ಚೆನ್ನೈನ ಕಲಾ ಗ್ಯಾಲರಿಗಳು**

ಕಲಾಗ್ಯಾಲರಿಗಳು ಕಲಾವಿದರು ತಮ್ಮ ಸೃಜನಾತ್ಮಕ ಅಭಿವ್ಯಕ್ತಿಯಿಂದ ರಚಿಸಿದ ಕಲಾಕೃತಿಗಳ ಪ್ರದರ್ಶನಕ್ಕೆ ಅನುಕೂಲವಾಗುವ ಹಿನ್ನೆಲೆಯಲ್ಲಿ ಈ ನಗರದಲ್ಲಿಅದ್ಭುತವಾದ ಒಂಭತ್ತು ಆರ್ಟ್ ಗ್ಯಾಲರಿಗಳನ್ನು ನೋಡಬಹುದಾಗಿದೆ.ಗ್ಯಾಲರಿಗಳ ಕುರಿತು ನೋಡಿದಾಗ ಚೆನ್ನೈ ಪ್ರದೇಶವು ಸಾಂಸ್ಕೃತಿಕ ತಾಣವೆಂದು ತಿಳಿದುಬರುತ್ತದೆ.ಇಲ್ಲಿ ಬಹಳಷ್ಟು ಕಲಾ ಪ್ರಕಾರಗಳು ಪ್ರವರ್ಧಮಾನಕ್ಕೆ ಬಂದಿದ್ದು,ಅದ್ಭುತ ಕಲಾ ಗ್ಯಾಲರಿಗಳು ವರ್ಣಚಿತ್ರಗಳು, ಶಿಲ್ಪಗಳು, ಪಿಂಗಾಣಿ ವಸ್ತುಗಳು, ಛಾಯಚಿತ್ರಗಳು ಇತ್ಯಾದಿಗಳ ಸಮೃದ್ಧ ಕಲಾ ಸಂಗ್ರಹದಿಂದಾಗಿ ಕಲಾಕೃತಿಗಳ ಆಶ್ರಯ ತಾಣವಾಗಿದೆ ಎಂದು ಕಂಡುಬರುತ್ತದೆ.ಕಲಾರಸಿಕರು ವೈವಿಧ್ಯಮಯವಾದ ಕಲಾಕೃತಿಗಳನ್ನು ನೋಡಿ ಅನಂದಪಡಲು ಕಲಾಗ್ಯಾಲರಿಗಳು ತುಂಬಾ ಅನುಕೂಲವಾಗಿವೆ. ಮತ್ತು ತಮ್ಮ ಕಲಾ ಸಂಗ್ರಹಣೆಗೆ ಸೂಕ್ತ ಸ್ಥಳವಾಗಿವೆ.

ಇಲ್ಲಿರುವ ಕಲಾ ಗ್ಯಾಲರಿಗಳು ಒಂದಕ್ಕಿಂತ ಒಂದು ವಿಶಿಷ್ಟವಾಗಿ ಕಂಡುಬರುತ್ತವೆ. ಇವುಗಳಲ್ಲಿಕೆಲವು ಗ್ಯಾಲರಿಗಳು ಸಮಕಾಲಿನ ಕಲೆಗಳಿಗೆ ಗಮನಹರಿಸಿದರೆ ಕೆಲವು ಆಧುನಿಕತೆಗೆ ಹಾಗೂ ದೇಶದ ಸಾಂಪ್ರದಾಯಿಕ ಕಲೆಗಳಿಗೆ ಗಮನ ಹರಿಸುತ್ತಾ ಜನಸಾಮಾನ್ಯರಿಗೆ, ಸಹೃದಯರಿಗೆ ಕಾರ್ಯಾಗಾರ ಮತ್ತು ಪ್ರದರ್ಶನಗಳನ್ನು ನಡೆಸುತ್ತಾ ದೃಶ್ಯಕಲಾ ಪರಿಸರವನ್ನು ಒಂದುಗೂಡಿಸುವ ನಿಟ್ಟಿನಲ್ಲಿ ಈ ಕಲಾ ಗ್ಯಾಲರಿಗಳು ಕಾರ್ಯನಿರ್ವಹಿಸುತ್ತಲಿವೆ ಎನ್ನಬಹುದು.

೧. "ಅಪ್ಪರಾವ್ ಆರ್ಟ್ ಗ್ಯಾಲರಿ, ಚೆನ್ನೈ

ಅಪ್ಪರಾವ್ ಆರ್ಟ್ ಗ್ಯಾಲರಿ ಇಂಜಂಬಕ್ಕಂನಲ್ಲಿರುವ ಚೆನ್ನೈನ ಅತ್ಯಂತ ಹಳೆಯ ಮತ್ತು ಅತ್ಯಂತ ಜನಪ್ರಿಯ ಖಾಸಗಿ ಒಡೆತನದ ಕಲಾ ಗ್ಯಾಲರಿಗಳಲ್ಲಿ ಒಂದಾಗಿದೆ.ಈ ಗ್ಯಾಲರಿಯು ಉದಯೋನ್ಮುಖ ಸಮಕಾಲೀನ ಕಲಾವಿದರ ಕಲೆ, ನುರಿತ ಮತ್ತು ಪ್ರತಿಭಾವಂತ ಕಲಾವಿದರ ಕೃತಿಗಳನ್ನು ಪ್ರೋತ್ಸಾಹಿಸುತ್ತದೆ.

೨. ಲಲಿತಕಲಾ ಅಕಾಡೆಮಿ ಗ್ಯಾಲರಿ, ಚೆನ್ನೈ

ತಮಿಳುನಾಡಿನ ಚೆನ್ನೈನ ಥೌಜಂಡ್ ಲೈಟ್ಸ್ ವೆಸ್ಟ್ ಗ್ರೀಮ್ಸ್ ರಸ್ತೆಯಲ್ಲಿರುವ ಲಲಿತಕಲಾ ಅಕಾಡೆಮಿಯನ್ನು ಜಿ.ಒ.ಐ ಸಂಸ್ಕೃತಿ ಸಚಿವಾಲಯವು ನಡೆಸುತ್ತಿದೆ ಮತ್ತು ಲಲಿತಕಲೆಗಳಿಗಾಗಿ ದೇಶದ ಪ್ರೀಮಿಯಂ ಇನ್ಸ್ಟಿಟ್ಯೂಟ್ ಎಂದು ಹೆಸರುವಾಸಿಯಾಗಿದೆ. ವಿವಿಧ ಕಾರ್ಯಾಗಾರಗಳು ಮತ್ತು ಪ್ರದರ್ಶನಗಳನ್ನು ನಡೆಸುವುದರ ಜೊತೆಗೆ ಸಾಂಪ್ರದಾಯಿಕ ಮತ್ತು ಆಧುನಿಕ ಕಲೆಗಳನ್ನು ಪ್ರದರ್ಶಿಸಲು ಚೆನ್ನೈನ ಅತ್ಯುತ್ತಮ ಕಲಾ ಗ್ಯಾಲರಿಗಳು ಹೊಂದಿದೆ.

೩. ಫೋಕಸ್ ಆರ್ಟ್ ಗ್ಯಾಲರಿ, ಚೆನ್ನೈ

ಫೋಕಸ್ ಆರ್ಟ್ ಗ್ಯಾಲರಿ ರುಗ್ಮಣಿ ಲಕ್ಷ್ಮಿಪತಿ ಆರ್ಡಿ, ಬಾಲಾಜಿ ನಗರ, ಎಗ್ಮೋರ್ನಲ್ಲಿದೆ.ಇದು ಚೆನ್ನೈನ ಅತ್ಯುತ್ತಮ ಕಲಾ ಗ್ಯಾಲರಿಗಳಲ್ಲಿ ಒಂದಾಗಿದ್ದು.ಇಲ್ಲಿ ಸಮಕಾಲೀನ ಕಲಾ ಪ್ರಕಾರಗಳಲ್ಲಿ ಹೂಡಿಕೆ ಮಾಡಿರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಕಲಾವಿದರ ಕಲಾಕೃತಿಗಳು ಪ್ರದರ್ಶನದಲ್ಲಿವೆ.

೪. ಚೋಳಮಂಡಲಂ ಆರ್ಟಿಸ್ಟ್ ವಿಲೆಜ್ ಗ್ಯಾಲರಿ, ಚೆನ್ನೈ

ಚೋಳಮಂಡಲಂ ಕಲಾವಿದರ ಗ್ರಾಮವು ಇಂಜಂಬಕ್ಕಂ ನಲ್ಲಿದೆ.ಚೆನ್ನೈನಲ್ಲಿರುವ ಈ ಆರ್ಟ್ ಗ್ಯಾಲರಿ ೧೦ ಎಕರೆ ವಿಸ್ತೀರ್ಣದಲ್ಲಿದೆ.ಇದನ್ನು ೧೯೬೬ ರಲ್ಲಿ ಸುಂದರ ಕಲಾವಿದ ಕೆ.ಸಿ.ಎಸ್. ಪಣಿಕರ್ ಸ್ಥಾಪಿಸಿದರು.ಈ ಗ್ಯಾಲರಿಯು "ಮದ್ರಾಸ್ ಚಳವಳಿಗೆ" ಕೊಡುಗೆ ನೀಡಿದ ಅನೇಕ ಕಲಾವಿದರ ಕೃತಿಗಳನ್ನು ಪ್ರದರ್ಶಿಸುತ್ತದೆ.

೫. ದಿ ಫಾರ್ ಅವೇ ಟ್ರೀ ಆರ್ಟ್ ಗ್ಯಾಲರಿ, ಚೆನ್ನೈ

ಟಿ ನಗರದ ಪಾರ್ಥಸಾರಥಿ ಪುರಂ ರಸ್ತೆಯಲ್ಲಿರುವ ದಿ ಫಾರ್ ಅವೇ ಟ್ರೀ ಗ್ಯಾಲರಿ ಸಮಕಾಲೀನ ಭಾರತೀಯ ಕಲೆಗಳನ್ನು ಕೇಂದ್ರಿಕರಿಸುವ ಸುಂದರ ಮತ್ತು ಅಲಂಕೃತ ಗ್ಯಾಲರಿಯಾಗಿದೆ. ಚೆನ್ನೈನ ಈ ಆರ್ಟ್ ಗ್ಯಾಲರಿಯಲ್ಲಿ ದಕ್ಷಿಣ ಭಾರತದ ಕಲಾವಿದರು ಪ್ರಾಬಲ್ಯ ಹೊಂದಿದ್ದಾರೆ.ಗ್ಯಾಲರಿಯಲ್ಲಿನ ಕೆಲವು ಜನಪ್ರಿಯ ಹೆಸರುಗಳು ಗೋಪಿನಾಥ್ ಪಿ, ಕೀಕೊ ಮಿಮಾ, ಅಕ್ಬಲ್ ಹುಸೈನ್ ಇತ್ಯಾದಿ.

೬. ಫೋರಂ ಆರ್ಟ್ ಗ್ಯಾಲರಿ, ಚೆನ್ನೈ

ಚೆನ್ನೈನ ಅಡಿಯಾರ್‌ನಲ್ಲಿರುವ ಫೋರಮ್ ಆರ್ಟ್ ಗ್ಯಾಲರಿ ಚೆನ್ನೈನ ಅತ್ಯಂತ ಜನಪ್ರಿಯ ಕಲಾ ಗ್ಯಾಲರಿಗಳಲ್ಲಿ ಒಂದಾಗಿದೆ.ಇದನ್ನು ೧೯೯೭ ರಲ್ಲಿ ಶಾಲಿನಿ ಬಿಸ್ವಾಜಿತ್ ಸ್ಥಾಪಿಸಿದರು.ಇದು ಸಮಕಾಲೀನ ಕಲಾ ಪ್ರಕಾರಗಳ ಮೇಲೆ ಕೇಂದ್ರೀಕರಿಸಿದ್ದು.ಗ್ಯಾಲರಿಯಲ್ಲಿನ ವೈವಿಧ್ಯಮಯ ಪ್ರದರ್ಶನಗಳಲ್ಲಿ ವರ್ಣಚಿತ್ರಗಳು, ಶಿಲ್ಪಗಳು, ಪಿಂಗಾಣಿ ವಸ್ತುಗಳು, ಛಾಯಾಚಿತ್ರಗಳು ಸೇರಿವೆ.

೭. ದಕ್ಷಿಣಚಿತ್ರ ಗ್ಯಾಲರಿ, ಚೆನ್ನೈ

ಇದು ದಕ್ಷಿಣ ಭಾರತದ ಶ್ರೀಮಂತ ಸಂಸ್ಕೃತಿ ಮತ್ತು ಪರಂಪರೆಯನ್ನು ಅರ್ಥಮಾಡಿಕೊಳ್ಳಲು ಒಂದು ನಿಲುಗಡೆ ತಾಣವಾಗಿದೆ.ಇದು ದಕ್ಷಿಣ ಭಾರತಕ್ಕೆ ಸೇರಿದ ವಾಸ್ತುಶಿಲ್ಪ, ಕರಕುಶಲ ವಸ್ತುಗಳು, ಪ್ರದರ್ಶನ ಕಲೆಗಳು ಮತ್ತು ಜೀವನಶೈಲಿಯ ಉತ್ತಮ ಕೃತಿಗಳನ್ನು ಸಂಗ್ರಹಿಸುತ್ತದೆ.ಈ ಹೆರಿಟೇಜ್ ಮ್ಯೂಸಿಯಂ ನಲ್ಲಿ ೪೨೨೦ ಕಲಾಕೃತಿಗಳು ಮತ್ತು ಲಕ್ಷಾಂತರ ಚಿತ್ರಗಳಿಗೆ ನೆಲೆಯಾಗಿದೆ.

೮. ಗ್ಯಾಲರಿ ವೇದ, ಚೆನ್ನೈ

ಗ್ಯಾಲರಿ ವೇದವನ್ನು ಪ್ರೀತಿಗರ್ಗ್ ಅವರು ಪ್ರಾರಂಭಿಸಿದರು.ಚೆನ್ನೈ ನಲ್ಲಿ ಇವರು ಎರಡು ಶಾಖೆಗಳನ್ನು ಹೊಂದಿದ್ದಾರೆ.ಒಂದು ಇಂಜಂಬಕ್ಕಂ ಮತ್ತು ಇನ್ನೊಂದು ಒ.ಎಂ.ಆರ್.ನಲ್ಲಿ ಜನಸಾಮಾನ್ಯರನ್ನು ಮತ್ತು ಕಲೆಯ ವಿವಿಧ ಮುಖಗಳಿಗೆ ಪರಿಚಯಿಸುವ ಉದ್ದೇಶದಿಂದ ಗ್ಯಾಲರಿಯನ್ನು ಪ್ರಾರಂಭಿಸಲಾಯಿತು.ಅದೇ ಕಾರಣಗಳಿಗಾಗಿ ಚೆನ್ನೈನ ಆರ್ಟ್ ಗ್ಯಾಲರಿಗಳಲ್ಲಿ ವರ್ಷಪೂರ್ತಿ ವಿವಿಧ ಕಾರ್ಯಾಗಾರಗಳು ಹಾಗೂ ಪ್ರದರ್ಶನಗಳನ್ನು ನಡೆಸುತ್ತದೆ.

೯. ಆರ್ಟ್‌ವರ್ಲ್ಡ್ ಸರಲಾಸ್ ಆರ್ಟ್ ಸೆಂಟರ್ ಗ್ಯಾಲರಿ,ಚೆನ್ನೈ

ಆರ್ಟ್‌ವರ್ಲ್ಡ್ ಸರಲಾಸ್ ಕಲಾ ಕೇಂದ್ರವು ಚೆನ್ನೈನ ೩ ನೇ ಬೀದಿ, ಆಫ್ ಸಿನೋಟಾಫ್ ರಸ್ತೆ, ತೈನಾಂಪೆಟ್‌ನಲ್ಲಿದೆ.ದೇಶಾದ್ಯಂತದ ಕಲಾ ಸಹೃದಯರಿಗೆ ಆಸಕ್ತಿಯನ್ನು ಪೂರೈಸುತ್ತದೆ.೧೯೬೫ ರಲ್ಲಿ ಬಿಶ್ವಾಜಿತ್ ಬ್ಯಾನರ್ಜಿ ಮತ್ತು ಸರಲಾ ಬ್ಯಾನರ್ಜಿ ಅವರು ಪ್ರಾರಂಭಿಸಿದ ಇದು ಚೆನ್ನೈನ ಅತ್ಯಂತ ಹಳೆಯ ಮತ್ತು ಮಹತ್ವದ ಕಲಾ ಗ್ಯಾಲರಿಗಳಲ್ಲಿ ಒಂದಾಗಿದೆ."[೧೯]

ಹಾಗೂ ಕೇಂದ್ರ ಲಲಿತಕಲಾ ಅಕಾಡೆಮಿ ಮತ್ತು ಇದರ ಸಹಯೋಗದೊಂದಿಗೆ ಚೆನ್ನೈ ಪ್ರಾದೇಶಿಕ ಕಲಾಕೇಂದ್ರದ ಮೂಲಕ ಈ ಭಾಗದ ಪ್ರಾದೇಶಿಕ ಭಾಗಗಳಾದ ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ, ಪಾಂಡಿಚೇರಿ, ಮಹಾರಾಷ್ಟ್ರ, ಗೋವಾ ಮತ್ತು ಲಕ್ಷದ್ವೀಪ ರಾಜ್ಯಗಳನ್ನು ಈ ಪ್ರಾದೇಶಿಕ ಕೇಂದ್ರದ ಹಿಡಿಯಲ್ಲಿ ತೆಗೆದುಕೊಂಡು. ಈ ಕಲಾ ಕೇಂದ್ರವು ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್,

---

೧೯.ಅಂತರಜಾಲ: https://www.holidify.com/collections/art-galleries-in-chennai?amp= ಇ. ಇಂದ ಕ. ಅನುವಾದ

ಸೆರಮಿಕ್ ಇತ್ಯಾದಿ ಸಮಕಾಲೀನ ಕಲೆ ಉತ್ತೇಜಿಸುವ ದೃಷ್ಟಿಯಿಂದ.ಈ ಭಾಗದಲ್ಲಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ಕಲಾ ಪ್ರದರ್ಶನಗಳಂತಹ ಕಲಾ ಚಟುವಟಿಕೆಗಳನ್ನು ಏರ್ಪಡಿಸಿ ಈ ಭಾಗದ ದೃಶ್ಯಕಲಾ ಪರಿಸರಕ್ಕೆ ಕಲಾವಿದರಿಗೆ ಹಾಗೂ ದೃಶ್ಯಕಲಾ ಕ್ಷೇತ್ರದ ಬೆಳವಣಿಗೆಗೆ ಸಹಕಾರಿಯಾಗಿದೆಯೆಂದು ಈ ಸಂಶೋಧನೆಯ ಅಧ್ಯಯನದಿಂದ ತಿಳಿಯುತ್ತದೆ.



ಚೋಳಮಂಡಲ ಕಲಾ ಗ್ರಾಮ



ಚೋಳಮಂಡಲ ಗ್ಯಾಲರಿಯ ನೋಟ

ದಕ್ಷಿಣ ಚಿತ್ರ





ಕರ್ನಾಟಕ ಹೌಸ್



ಆಂಧ್ರ ಹೌಸ್



ಕೇರಳ ಹೌಸ್

. ಸರಕಾರಿ ಮದ್ರಾಸ್ ಕಾಲೇಜ ಆಫ್ ಫೈನ್ ಆರ್ಟ್ಸನ ನೋಟ





ಎಗ್ಮೋರ್ ಸರಕಾರಿ ವಸ್ತುಸಂಗ್ರಹಾಲಯ ಮದ್ರಾಸ್





ಅಧ್ಯಾಯ-ಮೂರು

ಚೆನ್ನೈನ ಪ್ರಾದೇಶಿಕ ಕಲಾ ಕೇಂದ್ರದ ಹುಟ್ಟು ಮತ್ತು ಬೆಳವಣಿಗೆ

ಅಧ್ಯಾಯ– ಮೂರು

ಚೆನ್ನೈನ ಪ್ರಾದೇಶಿಕ ಕಲಾಕೇಂದ್ರದಹುಟ್ಟು ಮತ್ತು ಬೆಳವಣಿಗೆ

ಭಾರತದಲ್ಲಿ "ಕಲೆಯನ್ನು ಬೆಳೆಸಬೇಕು, ಚಿತ್ರಕಲಾ ಪರಿಸರವನ್ನು ಪ್ರೋತ್ಸಾಹಿಸಿ ಕಲಾ ಶಿಕ್ಷಣದ ಮೂಲಕ ನಾಡಿನ ಚಿತ್ರಕಲೆಯನ್ನು ಸಮೃದ್ಧಿ ಪಡಿಸಬೇಕೆಂಬ ಉದ್ದೇಶಗಳ ಹಿನ್ನೆಲೆಯಲ್ಲಿ ಬ್ರಿಟೀಷರು ಚಿತ್ರ ಕಲಾಶಾಲೆಗಳನ್ನು ಆರಂಭಿಸಿದ್ದರೂ.ಇದಕ್ಕೆ ಬದಲಾಗಿ ವಾಣಿಜ್ಯ ಉದ್ದೇಶಕ್ಕಾಗಿ ಕೈಗಾರಿಕ ಹಿನ್ನೆಲೆಯಿಂದ ಕೂಡಿದ ಚಿತ್ರಕಲೆಯನ್ನು ಕಲಿಸಬೇಕೆಂದು ಉದ್ದೇಶವಿಟ್ಟುಕೊಂಡು ಈರೀತಿಯ ಶಿಕ್ಷಣ ಕೊಡುವ ಕಲಾ ಶಾಲೆಗಳನ್ನೇ ಭಾರತದಲ್ಲಿ ಪ್ರಾರಂಭಿಸಿದರು."[೧]ಇವುಗಳ ಮುಂದುವರಿದ ಭಾಗಗಳೆಂಬಂತೆ ಭಾರತದಲ್ಲಿ ಪ್ರತ್ಯೇಕ ಕಲಾಶಾಲೆಗಳ ಹುಟ್ಟಿಗೆ ಕಾರಣವೆನ್ನಬಹುದು.

ಬ್ರಿಟೀಷರಿಗಿಂತ ಮುಂಚಿನ ದಿನಗಳಲ್ಲಿ ಭಾರತದಲ್ಲಿ ಚಿತ್ರಕಲೆಯನ್ನು ಗುರುಕುಲ ಪದ್ಧತಿಯಲ್ಲಿ ಮತ್ತು ಗುರುವನ್ನು ಆಶ್ರಯಿಸುವ ಪದ್ಧತಿಯಲ್ಲಿ ಕಲಿತುಕೊಳ್ಳಲಾಗುತ್ತಿತ್ತು.ಆದರೆ ಬ್ರಿಟೀಷರು ಚಿತ್ರಕಲೆಯನ್ನು ಶೈಕ್ಷಣಿಕ ಶಿಸ್ತಿಗೆ ಒಳಪಡಿಸಿ ಚಿತ್ರಕಲಾ ಶಾಲೆಗಳನ್ನು ಆರಂಭಿಸುವ ಮೂಲಕ ಕಲಾ ಕ್ಷೇತ್ರದಲ್ಲಿ ಗಮನಾರ್ಹ ಕೊಡುಗೆ ನೀಡಿದರು ಎಂದೇ ಹೇಳಬಹುದು. ಅಷ್ಟೆ ಅಲ್ಲದೆ ಇಂದಿನ ನಮ್ಮ ದೇಶದ ಎಲ್ಲಾ ಕಲಾ ಶಾಲೆಗಳಲ್ಲಿಯೂ ಪಾಶ್ಚಾತ್ಯ ಕಲಾ ಶಿಕ್ಷಣವೇ ಮುಂದುವರೆದಿರುವುದನ್ನು ನಾವು ನೋಡಬಹುದಾಗಿದೆ

೧. ಪ್ರಕಾಶ ಜಿ. ಬಂಡಿ : ಚಿತ್ರಕಲಾ ಕ್ಷೇತ್ರಕ್ಕೆ ಗದುಗಿನ ವಿಜಯ ಕಲಾ ಮಂದಿರದ ಕೊಡುಗೆ. (ಅ.ಪ್ರ.ಕಿ.ಪ್ರ.) ಕ.ವಿ.ವಿ. ಪುಟ ಸಂ:೨೫

ಬ್ರಿಟೀಷರು ಭಾರತದಲ್ಲಿ ಆರಂಭಿಸಿದ ಮೊದಲ ಕಲಾಶಾಲೆಯು ಕಲ್ಕತ್ತಾದಲ್ಲಿ ಆರಂಭ ಮಾಡಿತು.ಇದು "೧೮೫೪ ರಲ್ಲಿ ರಾಜ ಪ್ರತಾಪಚಂದ್ರ ಸಿಂಗ್ ಅರಮನೆಯ ಒಂದು ಭಾಗದಲ್ಲಿ ಆರಂಭಗೊಂಡ"[೨] ಈ ಕಲಾಶಾಲೆ ಕೈಗಾರಿಕಾ ಹಿನ್ನೆಲೆಯ ಕಲಾ ಶಿಕ್ಷಣವನ್ನು ನೀಡತೊಡಗಿತು.ಆ ನಂತರದಲ್ಲಿ ಇದೆ ವರ್ಷದ ಕೊನೆಯಲ್ಲಿ ಮದ್ರಾಸ್(ಚೆನ್ನೈ) ನಲ್ಲಿಯೂ ಮತ್ತೊಂದು ಕಲಾ ಶಾಲೆಯನ್ನು ಆರಂಭಿಸಿತು.ಇದಲ್ಲದೆ ೧೮೫೭ ರಲ್ಲಿ ಮುಂಬೈನಲ್ಲಿ ಜೆ.ಜೆ.ಕಲಾಶಾಲೆ ಮತ್ತು ೧೮೭೮ ರಲ್ಲಿ ಲಾಹೋರದಲ್ಲಿ ಮಾಯೋ ಚಿತ್ರಕಲಾ ಶಾಲೆಗಳು ಬ್ರಿಟೀಷರಿಂದ ಆರಂಭಿಸಲ್ಪಟ್ಟವು.ನಾಲ್ಕು ಪ್ರಮುಖ ಕಲಾಶಾಲೆಗಳಲ್ಲಿ ವಾಣಿಜ್ಯಕ್ಕೆ ಪೂರಕವಾಗಿರುವ ಕೈಗಾರಿಕಾ ಹಿನ್ನೆಲೆ ಚಿತ್ರಕಲೆಯನ್ನೆ ಕಲಿಸಲ್ಪಡುತ್ತಿದ್ದವು.ಇ.ಬಿ.ಹ್ಯಾವೆಲ್‌ರಂತಹ ಮೇಧಾವಿಗಳು ಬರುವವರೆಗೆ ಮತ್ತು ಆನಂದ ಕುಮಾರಸ್ವಾಮಿಯಂತಹ ವಿಮರ್ಶಕರ ಬರವಣಿಗೆಗಳು ನಮ್ಮಲ್ಲಿ ಜಾಗೃತಿ ಉಂಟು ಮಾಡುವವರೆಗೆ ಇದೆ ಪದ್ಧತಿ ಮುಂದುವರೆಯುತ್ತಿತ್ತು. ಹೀಗೆ ಇವರಿಬ್ಬರ ನಿರಂತರ ಪ್ರಯತ್ನದ ಫಲವಾಗಿ ಭಾರತೀಯ ಚಿತ್ರಕಲೆ ತನ್ನ ಅಸ್ತಿತ್ವ ಉಳಿಸಿ-ಬೆಳೆಸಲು ಸಹಕಾರಿಯಾಗಿದೆ ಎನ್ನಬಹುದು.

ನಂತರದ ದಿನಗಳಲ್ಲಿ ಸ್ಟೆಲ್ಲಾ ಕಾಮ್ರಿಶ್ ಎಂಬ ಪಾಶ್ಚಾತ್ಯ ಮಹಿಳೆ ಭಾರತದ ಚಿತ್ರಕಲೆಯ ಬಗ್ಗೆ ಸಂಶೋಧನೆಗಳನ್ನು ಆರಂಭಿಸಿ ಹೊಸ ಬೆಳಕನ್ನು ಚೆಲ್ಲತೊಡಗಿದಳು.ಇಂತಹ ಕ್ರಮಗಳಿಂದ ಕೈಗಾರಿಕಾ ಹಿನ್ನೆಲೆಯ ಚಿತ್ರಕಲಾ ಕಲಿಕೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಲಾಯಿತು.ಪ್ರಮುಖ ನಾಲ್ಕು ಕಲಾಶಾಲೆಗಳ ನಂತರ ಮುಂದಿನ ದಿನಗಳಲ್ಲಿ ಭಾರತದ ವಿವಿಧ ಭಾಗಗಳಲ್ಲಿ ಕಲಾಶಾಲೆಗಳು ಆರಂಭಗೊಂಡು ಅವುಗಳಲ್ಲಿ ಕೆಲವು ಸರಕಾರದಿಂದ ಸ್ಥಾಪಿಸಲ್ಪಟ್ಟರೆ ಇನ್ನು ಕೆಲವು ಸಂಘಸಂಸ್ಥೆಗಳು ಮತ್ತು ಖಾಸಗಿ ವ್ಯಕ್ತಿಗಳಿಂದ ಸ್ಥಾಪಿಸಲ್ಪಟ್ಟವು.ಆಂಧ್ರಪ್ರದೇಶ, ರಾಜಸ್ಥಾನ, ಮಧ್ಯಪ್ರದೇಶ ಮತ್ತು ಕರ್ನಾಟಕದಲ್ಲಿಯೂ ಕಲಾಶಾಲೆಗಳು ಆರಂಭಗೊಂಡವು.

ಈ ಮೋದಲು ಭಾರತಕ್ಕೆ ಮುಸ್ಲಿಮರು, ಬ್ರಿಟೀಷರು ಬಂದನಂತರ ಸಮಾಜದಲ್ಲಿ ರಾಜಕೀಯವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಅನೇಕ ಬದಲಾವಣೆಗಳಾದವು. ವೈವಿಧ್ಯಮಯವಾದ ಜೀವನಶಕ್ತಿ ಸಾಂಸ್ಕೃತಿಕ ವಲಯಗಳಲ್ಲಿ ಪ್ರಗತಿಸಾಧಿಸುವುದರೊಂದಿಗೆ, ಗುರುತಿಸಿಕೊಳ್ಳುವುದರೊಂದಿಗೆ ಮಾಧ್ಯಮಗಳ ಅಭಿಪ್ರಾಯ, ಮನ್ನಣೆ ಜೊತೆಗೆ ತನ್ನತನವನ್ನು ಕಾಪಾಡಿಕೊಳ್ಳುವ ಮನೋಭಾವ ಬೆಳೆಯಿತು.

ಹೀಗಾಗಿ ದೃಶ್ಯಕಲೆಯಲ್ಲಿ ಅನೇಕ ರಾಜಮನೆತನದ ಕಲಾಕೃತಿಗಳು ಅಂದರೆ ದಖನಿ ಕಲೆ, ಜೈನ, ಪಾಲಿ, ಅಜಂತ, ಇತ್ಯಾದಿ ಕೃತಿಗಳ ಮೂಲಕ ಕಲಾವಿದರು ವಿಶೇಷ ಪರಂಪರೆ ನೀಡಿದ್ದಾರೆ. ಪ್ರಾದೇಶಿಕ ಕಲೆಗಳಲ್ಲಿ ಶಿಲ್ಪ, ವಾಸ್ತುಶಿಲ್ಪ, ಜನಪದ ಶಿಲ್ಪ, ವಿಗ್ರಹಗಳಲ್ಲಿ ಮತ್ತು ಚಿತ್ರ ಕಲಾಕೃತಿಗಳಿಗೆ ಪ್ರೋತ್ಸಾಹ ದೊರೆಯುವುದರಿಂದ ಕಲಾವಿದರು ಆರ್ಥಿಕವಾಗಿ ಪೋಷಣೆ ಪಡೆದಿದ್ದನ್ನು

೨. ಪ್ರೊ.ಎಸ್.ಸಿ. ಪಾಟೀಲ್: ದೃಶ್ಯಕಲಾ ಸಂವೇದನೆ. ಪುಟ ಸಂ: ೬

ತಿಳಿದುಬರುತ್ತದೆ.ಹೀಗೆ ಕಲಾಕೃತಿಗಳಿಗೆ ಮಾನ್ಯತೆ ಬಂದು ಜಾತಿ, ಮತ, ಪಂಥಗಳ ಭೇದವಿಲ್ಲದೆ ಕಲಾಕೃತಿ ರಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.

ಬ್ರಿಟೀಷರ ಪ್ರಭಾವದ ಶಿಕ್ಷಣದ ಪ್ರಸಾರ ವೈಜ್ಞಾನಿಕ ಬೆಳವಣಿಗೆಗಳಿಂದಾಗಿ ಸಮಾಜ ವಿಕಾಸಗೊಂಡು, ಜನತೆಯ ನಡುವಳಿಕೆಗಳಲ್ಲಿ ವೈವಿಧ್ಯತೆ ಹಾಗೂ ಅನನ್ಯತೆಗಳು ರೂಪಗೊಂಡವು.ತಮ್ಮ ಕೈಗಾರಿಕಾ ವಿಧಾನಗಳಿಂದ ಕುಶಲಕರ್ಮಿಗಳಿಗೆ, ಶಿಕ್ಷಣ ತಜ್ಞರಿಗೆ, ತಮ್ಮ ಸೂಕ್ಷ್ಮ ಸಂವೇದನೆಗಳಿಗೆ, ಭಾವನೆಗಳಿಗೆ, ಅಭಿವ್ಯಕ್ತಿಗೊಳಿಸಲು ಅನುಕೂಲವಾಯಿತು. ದೃಶ್ಯಕಲೆ ಸಾಮಾಜಿಕ ಬದುಕಿನಲ್ಲಿ ಉದ್ದಿಮೆಯಾಗಿ ಪ್ರಭಾವಿತಗೊಂಡಿತು.ಭಾರತ ದೇಶದಲ್ಲಿ ಬ್ರಿಟೀಷರಿಂದ ಅನೇಕ ಚಿತ್ರಕಲಾ ವಿದ್ಯಾಲಯಗಳು ಪ್ರಾರಂಭಗೊಂಡಿರುವುದನ್ನು ನಾವು ಪ್ರಸ್ತುತದಲ್ಲು ನೋಡಬಹುದಾಗಿದೆ.ಸ್ವಾತಂತ್ರ್ಯ ನಂತರ ಅಧುನಿಕ ಭಾರತದ ಕಲಾವಿದರೆಲ್ಲಾ ಸ್ವತಂತ್ರ ವಿಚಾರಗಳಿಂದ ಕೃತಿ ರಚನೆಯಲ್ಲಿ ತೊಡಗಿದರು.ಅನೇಕ ಪ್ರತಿಭೆಗಳಿಗೆ ಆಧುನಿಕ ಕಲಾ ಪ್ರಭಾವಗಳ ಪ್ರೋತ್ಸಾಹದೊಂದಿಗೆ ಕಾವ್ಯ, ವಿಮರ್ಶೆ, ದೃಶ್ಯಕಲಾ, ಸಾಹಿತ್ಯ, ಉತ್ಕೃಷ್ಟವಾಗಿ ಬೆಳವಣಿಗೆಗೊಂಡಿತು. ಪತ್ರಿಕಾ ಮಾಧ್ಯಮಗಳ ಮೂಲಕ ಕಲಾವಿದರ ಕಲಾಕೃತಿಗಳ ಪರಿಚಯಗಳೊಂದಿಗೆ ಶೈಲಿ, ಮಾಧ್ಯಮ, ಭಾವನೆ ಸಾಮಗ್ರಿ ಕ್ರಿಯಾಶೀಲತೆ ಪ್ರಕಾರ ಮಾಧ್ಯಮಗಳ ಪರಿಚಯಗಳಿಂದ ದೃಶ್ಯಕಲೆ ಶೈಕ್ಷಣಿಕವಾಗಿ ನಾನಾ ರೀತಿಯ ತಂತ್ರಗಾರಿಕೆಗಳಿಂದ ಕ್ರಿಯಾಶೀಲತೆಯಿಂದ ಮುದ್ರಣದ ಹೊಸ ಪ್ರಯೋಗಗಳ ಮೂಲಕ ವಿಶೇಷ ಅಭಿರುಚಿಗಳಿಂದ, ವಸ್ತು ಗ್ರಹಿಕೆಗಳಿಂದ, ಆಧುನಿಕ ಕಲೆ ಕಲಾ ಸಾಮಗ್ರಿಗಳ ಮೂಲಕ ಬೆಳೆಯತೊಡಗಿತು.

ಹೀಗೆ ಈ ಪ್ರಭಾವಗಳಿಂದ ಪ್ರಾಂತೀಯವಾಗಿ ಅನೇಕ ರಾಜಮಹಾರಾಜರು, ಶ್ರೀಮಂತರು, ಉದ್ದಿಮೆದಾರರು, ಕಲೆಯನ್ನು ಪೋಷಿಸುವುದರ ಮೂಲಕ ಕಲಾಶಾಲೆಗಳು ಪ್ರಾರಂಭಗೊಂಡವು. ಅನೇಕ ಕ್ಷೇತ್ರಗಳಲ್ಲಿ ಕಲೆಯು ಪೂರಕವಾಗಿ ಮಹತ್ವದ ಮಾಧ್ಯಮವಾಗಿ ವಿಸ್ತರಿಸಿತು ಎಂದು ಕಲಾ ಶಿಕ್ಷಣದ ಇತಿಹಾಸ ಪುಟಗಳನ್ನು ತಿರುವಿ ನೋಡಿದಾಗ ತಿಳಿಯಬಹುದಾಗಿದೆ.

ಬ್ರಿಟೀಷರಿಂದ ಭಾರತ ಸ್ವಾತಂತ್ರ್ಯಗೊಂಡ ಮೇಲೆ ಭಾರತೀಯ ಕಲೆ ಮತ್ತು ಸಂಸ್ಕೃತಿ ಬೆಳೆಸುವ, ಪ್ರೋತ್ಸಾಹಿಸುವ ಹಾಗೂ ಲಲಿತಕಲೆಗಳ ಬೆಳವಣಿಗೆಯ ಜವಾಬ್ದಾರಿಯು ಮುಂದುವರೆದ ಭಾಗವಾಗಿ ಕೇಂದ್ರ ಲಲಿತಕಲಾ ಅಕಾಡೆಮಿಯನ್ನು "೧೯೫೪ ರಂದು ಆಗಿನ ಪ್ರಧಾನಮಂತ್ರಿಯಾದ ಜವಾಹರಲಾಲ ನೆಹರು ಅವರ ಕನಸಿನ ಅನುಸಾರವಾಗಿ ನಮ್ಮ ಭಾರತ ಸರಕಾರವು ಸ್ಥಾಪಿಸಿತು."[೩]ನಂತರದ ದಿನಗಳಲ್ಲಿ ದೃಶ್ಯಕಲಾ ಕ್ಷೇತ್ರದ ಬೆಳವಣಿಗೆಗೆ ಲಲಿತಕಲಾ ಅಕಾಡೆಮಿಯು ಅನೇಕ ಕಲಾ ಚಟುವಟಿಕೆಗಳನ್ನು ಕೈಗೊಂಡು ನಮ್ಮ ಭಾರತದ ಕಲೆಯು ವಿಶ್ವದ ಅನೇಕ ಭಾಗಗಳಿಗೆ

೩. ಅಂತರಜಾಲ: Lalitkala.gov.in ಇ. ಇಂದ ಕ. ಅನುವಾದ

ಪರಿಚಯಿಸುತ್ತಾ, ದೃಶ್ಯ ಕಲಾಕ್ಷೇತ್ರವನ್ನು ಅಭಿವೃದ್ಧಿಪಡಿಸುವ ಕಾರ್ಯನಿರ್ವಹಿಸುತ್ತಿದೆಯೆಂದು ಈ ಸಂಶೋಧನೆಯಿಂದ ತಿಳಿದುಬರುತ್ತದೆ.

ಹಾಗೂ ಗ್ರಾಮೀಣ ಪ್ರದೇಶದ ಯುವ ಕಲಾವಿದರ ದೃಶ್ಯಕಲಾ ಬೆಳವಣಿಗೆಗೆ ಅವರಿಗೆ ಹತ್ತಿರದ ಅನುಕೂಲವಾಗುವಂತೆ (ರಿಜಿನಲ್ ಸೆಂಟರ್)ಪ್ರಾದೇಶಿಕ ಕಲಾ ಕೇಂದ್ರಗಳನ್ನು ಸ್ಥಾಪಿಸಿ, ಆ ಪ್ರದೇಶದ ಯುವ ಕಲಾವಿದರ ಕಲೆಯ ಬೆಳವಣಿಗೆಗೆ ಮುಖ್ಯ ಪಾತ್ರವಹಿಸಿದೆಯೆಂದು ತಿಳಿದುಬರುತ್ತದೆ.

ರಾಜ್ಯದ ಯುವ ಕಲಾವಿದರು ಹಾಗೂ ಕಲಾ ವಿದ್ಯಾರ್ಥಿಗಳು ಶಿಕ್ಷಣ ಮುಗಿಸಿದ ನಂತರವೂ ತಮ್ಮ ದೃಶ್ಯ ಕಲಾ ಕ್ಷೇತ್ರದಲ್ಲಿಯೇ ತೊಡಗಿ ಕಲಾಕೃತಿ ರಚಿಸಿ ಮುಂದಿನ ದಿನಗಳಲ್ಲಿ ಅವರು ಕಲಾಜಗತ್ತಿನಲ್ಲಿ ಸಾಧನೆ ಮಾಡಲು ಸಹಾಯಕವಾಗುವಂತಹ ವಾತಾವರಣವನ್ನು ಕಲ್ಪಿಸಲು ಹಾಗೂ ಪ್ರಾದೇಶಿಕವಾದ ಕಲೆ ಮತ್ತು ಸಂಸ್ಕೃತಿಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಪ್ರಾದೇಶಿಕ ಕಲಾಕೇಂದ್ರಗಳು ಸ್ಥಾಪನೆಯ ಮೂಲ ಉದ್ದೇಶವಾಗಿದೆಯೆಂದು ಈ ಸಂಶೋಧನಾತ್ಮಕ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಾದೇಶಿಕ ಕಲಾ ಕೇಂದ್ರಗಳಲ್ಲಿ ಕಲಾವಿದರಿಗೆ ಅನೇಕ ವಿಷಯಗಳಲ್ಲಿ ಸಂಶೋಧನೆ ಮಾಡಲು ಸಹಾಯಕವಾಗಿದೆ.ಹಾಗೂ ಕಲಾವಿದರಿಗೆ ಕಲಾಕೃತಿಗಳು ರಚಿಸಲು ಸ್ಥಳವಕಾಶ ಮತ್ತು ಸ್ಟುಡಿಯೋ ಸೌಲಭ್ಯಗಳನ್ನು ಒದಗಿಸುತ್ತದೆ.ಅವು ಮುದ್ರಣಕಲೆ, ಶಿಲ್ಪಕಲೆ, ಹಾಗೂ ಚಿತ್ರಕಲೆ ಮುಂತಾದ ಸೃಜನಶೀಲ ಕಲೆಗಳ ಕ್ಷೇತ್ರಗಳಲ್ಲಿ ಅಧ್ಯಯನ ಮತ್ತು ಸಂಶೋಧನೆಯನ್ನು ಪ್ರೋತ್ಸಾಹಿಸುವುದು ಮತ್ತು ಉತ್ತೇಜಿಸುವುದು ಇದರ ಮೂಲ ಉದ್ದೇಶವಾಗಿದೆ. ಹಾಗೂ ಸಂಶೋಧನೆ ಮತ್ತು ಜನಪದ ಸಮೀಕ್ಷೆ, ಬುಡಕಟ್ಟು ಮತ್ತು ಸಾಂಪ್ರದಾಯಿಕ ಕಲೆ ಗ್ರಾಮೀಣ ಪ್ರದೇಶದ ಕಲೆ ಮತ್ತು ಕರಕುಶಲ ತಂತ್ರಗಳನ್ನು ಉತ್ತೇಜಿಸಲು ಅವರ ಕಲಾ ಪ್ರಕಾರಗಳನ್ನು ಸಂರಕ್ಷಿಸಲು ಮತ್ತು ಪ್ರಾದೇಶಿಕ ಸಮೀಕ್ಷೆಗಳನ್ನು ಸಂಘಟಿಸಲು, ಉಳಿದಿರುವ ಸ್ಥಳೀಯ ಕುಶಲಕರ್ಮಿಗಳು, ಗ್ರಾಮೀಣ ಪ್ರದೇಶದ ಯುವ ಕಲಾವಿದರು, ವಿವರಣಾ ಚಿತ್ರಕಾರರು ಮತ್ತು ಶಿಲ್ಪಗಾರರನ್ನು ಪ್ರೋತ್ಸಾಹಿಸಲು ಪ್ರಾದೇಶಿಕ ಕಲಾ ಕೇಂದ್ರಗಳು ಕಾರ್ಯನಿರ್ವಹಿಸುತ್ತವೆ.

ಪ್ರಾದೇಶಿಕ ಕಲಾ ಕೇಂದ್ರವು ಕಲಾವಿದರ ಕೇಂದ್ರಸ್ಥಾನವಾಗಿರುವುದರಿಂದ ಇಲ್ಲಿ ಅನೇಕ ಯುವ-ಹಿರಿಯ ಕಲಾವಿದರು ಸೇರಿ ಕಲಾಕೃತಿಗಳ ಕುರಿತು ಚರ್ಚೆ, ಸಂವಾದ, ವಿಮರ್ಶೆಗಳು ನಡೆಯುವುದು ಸರ್ವೇಸಾಮಾನ್ಯವಾದದ್ದು.ಇಂತಹ ಒಂದು ಸಾಂಸ್ಕೃತಿಕ ಕಲಾಪರಿಸರದಲ್ಲಿ ಯುವ ಮತ್ತು ಹಿರಿಯಕಲಾವಿದರು ಸ್ವತಂತ್ರವಾಗಿ ಸೃಜನಾತ್ಮಕವಾಗಿ ಹಲವು ರೀತಿಯ ತಮ್ಮಕಲಾಕೃತಿಗಳನ್ನು ರಚಿಸಿಕೊಳ್ಳುವ ಅವಕಾಶದೊರೆಯುವುದು ಭಾಗ್ಯವೆಂಬುವುದು ತಿಳಿದುಬರುತ್ತದೆ.

ಈ ಪ್ರಾದೇಶಿಕ ಕಲಾಕೇಂದ್ರಗಳು ಭಾರತದ ಎಲ್ಲಾ ಕಲಾವಿದರಿಗೆ ಅನುಕೂಲವಾಗುವಂತೆ ಸ್ಥಾಪಿಸಲಾಗಿದೆ.ಇವುಗಳ ಕುರಿತು ಹೇಳುವ ಮೊದಲು ಇವುಗಳಿಗೆ ಮೂಲ ಕೇಂದ್ರ ಸ್ಥಾನವಾದದೆಹಲಿಯ ಕೇಂದ್ರ ಲಲಿತಕಲಾ ಅಕಾಡೆಮಿಯ ಕುರಿತು ಪರಿಚಯ ಅವಶ್ಯಕವಾಗಿದೆ.

*** ಕೇಂದ್ರ ಲಲಿತಕಲಾ ಅಕಾಡೆಮಿ, ದೆಹಲಿ**

ಮೊದಲು ನಾವು 'ಅಕಾಡೆಮಿ' ಪದದ ಕುರಿತು ತಿಳಿಯುವುದಾದರೆ "ಪಾಂಡಿತ್ಯ ಕೇಂದ್ರವಾದ ಅಕಾಡೆಮಿಯು ಮೊದಲು ಕ್ರಿ.ಪೂ.೬೦೦ರಲ್ಲಿ ಅಥೆನ್ಸಿನ ಸಮಿಪದ ಆಲಿವ್ ಮರಗಳ ತೋಪಿನಲ್ಲಿ ಒಂದು ಮನೆಯಿದ್ದು ಇದು ಗ್ರೀಕ ವೀರ ಅಕಾಡೆಮಿಸ್‌ನ ನೆನಪಿಗಾಗಿ ನಿರ್ಮಿತವಾಗಿತ್ತು. ಇಲ್ಲಿ ಒಂದು ಕ್ರೀಡಾಭವನ ಕಟ್ಟಿ ಯುವಜನರು ಕ್ರೀಡೆಗಳನ್ನು ಆಡಲು ಸೇರುತಿದ್ದರು. ಕ್ರಿ.ಪೂ. ೩೮೫ರಲ್ಲಿ ತತ್ವಜ್ಞಾನಿ ಪ್ಲೇಟೊ ಇದನ್ನು ವಿದ್ಯಾಸಂಸ್ಥೆಯನ್ನಾಗಿ ಮಾಡಿದ 'ಅಕೆಡಮಸ್' ಸ್ಮಾರಕ ಕ್ಷೇತ್ರದಲ್ಲಿ ಪ್ರಾರಂಭವಾದ ವಿಧ್ಯಾಸಂಸ್ಥೆಯನ್ನು ಅಕಾಡೆಮಿಯೆಂದು ಕರೆದರು."[೪]ಹೀಗೆ ಪಾಶ್ಚಿಮಾತ್ಯ ದೇಶಗಳಲ್ಲಿ ಅಕಾಡೆಮಿ ಪದವು ಜನಿಸಿರುವುದು ನಾವು ಕಾಣುತ್ತೆವೆ. ನಂತರದ ದಿನಗಳಲ್ಲಿ ವಿಶ್ವವ್ಯಾಪ್ತಿಯಾಗಿ ಬೆಳೆದು ನಿಂತಿವೆ. ಹೀಗೆ ಮುಂದುವರೆದ ದಿನಗಳಲ್ಲಿ "ಕಲೆ, ವಿಜ್ಞಾನ, ಸಾಹಿತ್ಯ, ತತ್ವಜ್ಞಾನಗಳಲ್ಲಿ ಪಾಂಡಿತ್ಯಪಡೆದ ಸಂಘ ಸಂಸ್ಥೆಗಳಿಗೂ ಈ ಹೆಸರು ಅನುವಹಿಸಲ್ಪಟ್ಟಿತು.ನವೋದಯ ಕಾಲದಲ್ಲಿ ಇಟಲಿಯ ನಗರದಲ್ಲಿ ಅಕಾಡೆಮಿಗಳು ಪ್ರಾರಂಭವಾದವು"[೫] ಈ ಅಕಾಡೆಮಿಗಳಿಗೆ ಮಾನ್ಯತೆಸಿಕ್ಕಿದ್ದು ಕೂಡಾ ನವೋದಯ ಕಾಲದಲ್ಲಿ.

"ಅಕಾಡೆಮಿಗಳು ವಿದ್ವಾಂಸರ ಸಂಸ್ಥೆಯಾಗಿದ್ದು ಈಗ ಎಲ್ಲಾ ರಾಷ್ಟ್ರಗಳಲ್ಲಿ ಅಕಾಡೆಮಿ ಸ್ಥಾಪಿತವಾಗಿವೆ. ಅಕಾಡೆಮಿಗಳು ಸಾಹಿತ್ಯ, ಕಲೆ ಮತ್ತು ವಿಜ್ಞಾನಗಳ ಅಭಿವೃದ್ದಿಗಾಗಿ ಮಿಸಲಾಗಿವೆ. ಸಾಹಿತ್ಯಕಲೆಗಳಂತಹ ಅಭಿವೃದ್ದಿ ಮತ್ತು ವಿವಿಧ ಕಲಾ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ ರಾಜ್ಯದ ಹಾಗೂ ರಾಷ್ಟ್ರದ ಸಾಂಸ್ಕೃತಿಕ ಬೆಳವಣಿಗೆಗೆ ಶ್ರಮಿಸುತ್ತವೆ ಹಾಗೂ ಅಧ್ಯಯನ, ಸಂಶೋಧನೆಗಳಿಗೆ ಪ್ರೋತ್ಸಾಹಿಸುತ್ತವೆ. ಇದಕ್ಕಾಗಿ ಇಲ್ಲಿ ಗ್ರಂಥಾಲಯಗಳು ವಿವಿಧ ಪ್ರದೇಶದ ವಿಚಾರ ವಿನಿಮಯ ನಡೆಸುವದು, ಮುಸ್ತಕಗಳ ಪ್ರಕಟಣೆ, ಅನೇಕ ಕ್ಷೇತ್ರದ ಕಲಾವಿದರಿಗೆ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುವದು ಅಲ್ಲದೆ ರಾಜ್ಯದ ವಿವಿಧ ಭಾಗಗಳ ಅನೇಕ ರೀತಿಯ ಕಲೆಗಳ ಸಂಗ್ರಹ,ರಕ್ಷಣೆ ಮಾಡಿ ಪ್ರೋತ್ಸಾಹಿಸುತ್ತದೆ."[೬]ಇನ್ನೂ ವಿಷೇಶವಾಗಿಗಮನಿಸಿದರೆ ಕಲಾ ಪ್ರದರ್ಶನ, ಕಲಾಸಾಹಿತ್ಯ, ಕಲಾವಿದರು ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗೆ ಪ್ರಶಸ್ತಿಗಳು, ಶಿಷ್ಯವೇತನ, ಪ್ರವಾಸನುದಾನ, ಕಲೆಗಳ

೪. ಕಲಾಕೋಶ-(ಪ್ರ.ಸಂ.)ಪಿ.ಆರ್.ತಿಪ್ಪೇಸ್ವಾಮಿ. ಅಕಾಡೆಮಿ:ಲೇ. ಎಸ್. ಮರಿಶಾಮಾಚಾರ. ಮುಟ ಸಂ:೧
೫. ಅದೇ. ಮುಟ ಸಂ:೨
೬. ಅದೇ ಮುಟ.

ಅಭಿವೃದ್ಧಿ, ಕಲಾವಿದರಿಗೆ ಗುರುತಿಸಿ ಪ್ರೋತ್ಸಾಹಿಸುವ ಹಿನ್ನಲೆಯಲ್ಲಿ ಇತ್ಯಾದಿ ಪ್ರೋತ್ಸಾಹದಾಯಕ ಚಟುವಟಿಕೆಗಳು ಅಕಾಡೆಮಿ ಮಾಡುತ್ತವೆ.

ಹೀಗೆಯಾವುದೆ ದೇಶದ ಬೆಳವಣಿಗೆಗೆ, ಪ್ರಗತಿಗೆ ಆದೇಶದ ಜನಜೀವನದ ಹೆಜ್ಜೆಹೆಜ್ಜೆಗಳು ಮೂಲವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಭಾರತೀಯ ಕಲೆ ಬಹುಪ್ರಾಚೀನ ಕಾಲದಿಂದಲೂ ತನ್ನದೆ ಆದ ಅಸ್ತಿತ್ವವನ್ನು ಬೆಳೆಸಿಕೊಂಡು ಬಂದಿದೆ.ಹಾಗೂ ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಲಾವಿದರನ್ನು ಗುರುತಿಸಿ ಗೌರವಿಸುವ, ಹಾಗೂ ದೃಶ್ಯಕಲಾ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ, ಕಾರ್ಯವನ್ನು ಅಕಾಡೆಮಿಗಳು ಕಾರ್ಯ ನಿರ್ವಹಿಸುತ್ತವೆ.

ಭಾರತ ಸ್ವತಂತ್ರದನಂತರ ದೃಶ್ಯಕಲಾ ಕ್ಷೇತ್ರದಲ್ಲಿ ಕಲಾ ಚಟುವಟಿಕೆಗಳ ಮೇಲೆ ಗಮನ ಹರಿಸಲು"ಲಲಿತಕಲಾ ಅಕಾಡೆಮಿಯು ಆಗಸ್ಟ್ ೦೫–೧೯೫೪ರ ರಂದು ಶಿಕ್ಷಣ ಸಚಿವರಾದ ಮೌಲಾನಾ ಅಬ್ದುಲ್ ಕಲಾಂ ಅಜಾದ್ ಅವರು ಹೊಸ ದೆಹಲಿಯಲ್ಲಿ ಉದ್ಘಾಟಿಸಿದರು.ಸ್ವಾತಂತ್ರ ಭಾರತದ ಮೊದಲ ಪ್ರಧಾನಿಯಾದ ಜವಹರಲಾಲ್ ನೆಹರು ಅವರು ಕನಸಿನ ಅನುಸಾರವಾಗಿ ಸಾಂಸ್ಕೃತಿಕ ಹಾಗೂ ರಾಷ್ಟ್ರೀಯ ಗುರುತಿಗಾಗಿ ಲಲಿತಕಲಾ ಅಕಾಡೆಮಿ ಸ್ಥಾಪಿಸಲಾಯಿತು."[೭]

ಅಕಾಡೆಮಿಯ ಉದ್ಘಾಟನಾ ಭಾಷಣದಲ್ಲಿ ಮೌಲಾನಾ ಅಬ್ದುಲ್ ಕಲಾಂ ಅಜಾದ್ ಅವರು ಅಕಾಡೆಮಿಯ ಕುರಿತು ಹೀಗೆ ಹೇಳುತ್ತಾರೆ, "ಅಕಾಡೆಮಿಯು ಹಿಂದಿನ ಅದ್ಭುತವಾದ ಸಾಂಪ್ರದಾಯಗಳನ್ನು ಕಾಪಾಡಿಕೊಳ್ಳಲು ಮತ್ತು ನಮ್ಮ ಆಧುನಿಕ ಕಲಾವಿದರ ಕೆಲಸದಿಂದ ಅವರನ್ನು ಉತ್ಕೃಷ್ಟಗೊಳಿಸಲು ಕೆಲಸ ಮಾಡಬೇಕಾಗುತ್ತದೆ, ಇದರ ಮಾನದಂಡಗಳನ್ನು ಸುಧಾರಿಸಲು ಮತ್ತು ಸಾರ್ವಜನಿಕ ಹಿತಾಸಕ್ತಿಗಳನ್ನು ಪರಿಷ್ಕರಿಸಲು ಪ್ರಯತ್ನಿಸಬೇಕು. ಅಲ್ಲದೆ ಭಾವನೆಗಳ ಬೆಳವಣಿಗೆಗೆ ಸರಿಯಾಗಿ ಗಮನವಹಿಸದಿದ್ದರೆ ಯಾವುದೆ ಶಿಕ್ಷಣವು ಪೂರ್ಣವಾಗುವುದಿಲ್ಲ. ಲಲಿತಕಲೆಯು ಜೀವನದ ಮೌಲ್ಯಗಳನ್ನು ಬೆಳೆಸುವ ಅಂಗವಾಗಿದೆ.ಇದು ವಿಚಾರಶಕ್ತಿಯ ವೃದ್ಧಿಗೆ ಸಹಾಯವಾಗಿದೆ.ಇಂದಿನ ಯುಗದಲ್ಲಿ ಕಲಾತ್ಮಕ ಶಿಕ್ಷಣದಿಂದ ವ್ಯಕ್ತಿತ್ವ ವಿಕಾಸವಾಗುತ್ತಿವೆ. ಮಕ್ಕಳಿಗೆ ಬಣ್ಣಗಳ ಹೊಂದಾಣಿಕೆ ಆಕಾರಗಳ ಅಳತೆಯ ಜೋಡಣೆಯಿಂದಾಗಿ ಮಕ್ಕಳ ಮನಸ್ಸು ಕೇಂದ್ರಿಕೃತವಾಗಿ ಅವರಲ್ಲಿದ್ದ ಸೃಜನಾತ್ಮಕ ಶಕ್ತಿ ಹೊರ ಹೊಮ್ಮುತ್ತದೆ.ಅಂದಾಗ ಮಾತ್ರ ಶಿಕ್ಷಣವು ಸುಧಾರಣೆ ಗೊಳ್ಳುತ್ತದೆ."[೮] ಎಂದು ದೃಶ್ಯಕಲೆ ಮತ್ತು ಕೇಂದ್ರ ಲಲಿತ ಕಲಾ ಅಕಾಡೆಮಿಯ ಕುರಿತು ಹೇಳಿದರು.ಕೇಂದ್ರ ಲಲಿತಕಲಾ ಅಕಾಡೆಮಿ "(ನ್ಯಾಷನಲ್ ಆರ್ಕಿಟೆಕ್ಟ್ ಆಫ್ ಫೈನ್ ಆರ್ಟ್ಸ್) ಭಾರತೀಯ ದೃಶ್ಯಕಲೆಯ ಸಂಸ್ಕೃತಿಯನ್ನು ಉತ್ತೇಜಿಸಲು ಮತ್ತು ಅಭಿವೃದ್ಧಿ ಪಡಿಸಲು ಭಾರತ ಸರಕಾರದ ಪ್ರಧಾನ ಕಲಾ ಸಂಸ್ಥೆಯಾಗಿದೆ. ಇದು ಸಾಂಸ್ಕೃತಿಕ ಸಚಿವಾಲಯವು ಅನುದಾನ ಮಾಡಿರುವವೈಯಕ್ತಿಕ

೭ ಅಂತರಜಾಲ: Lalitkala.gov.in ಇ. ಇಂದ ಕ. ಅನುವಾದ
೮. ಶಿವಪ್ರಸಾದ ಎಸ್. ಬನ್ನಟ್ಟಿ : ಪ್ರಾದೇಶಿಕ ಕಲಾ ಕೇಂದ್ರಗಳು. (ಅ.ಪ್ರ.ಲ.ಪ್ರ)ಎಂ.ಎಂ.ಕೆ. ಕಾಲೇಜು, ಗುಲಬರ್ಗಾ. ಪುಟ ಸಂ:೧೦

ಲಾಭೋದ್ದೇಶವಿಲ್ಲದ ಸ್ವಾಯತ್ತ ಸಂಸ್ಥೆಯಾಗಿದೆ."[೯] ಈ ಸಂಸ್ಥೆಯು ದೃಶ್ಯಕಲಾ ಬೆಳವಣಿಗೆಗೆ ಅನೇಕ ಕಲಾ ಚಟುವಟಿಕೆಗಳು ನಿರಂತರವಾಗಿಕೈಗೊಳ್ಳುತ್ತಿದೆ.ನಂತರದ ದಿನಗಳಲ್ಲಿ ದೆಹಲಿಯ, ಕೇಂದ್ರ ಲಲಿತಕಲಾ ಅಕಾಡೆಮಿ ತನ್ನ ಕಾರ್ಯ ವ್ಯಾಪ್ತಿಯನ್ನು ದೇಶದ ಬೇರೆ ಬೇರೆ ಕಡೆ ವಿಸ್ತರಿಸಬೇಕೆಂಬ ಉದ್ದೇಶದಿಂದ ಪ್ರಾದೇಶಿಕವಾಗಿ ಪ್ರಾಂತಿಯ ಅಕಾಡೆಮಿಗಳನ್ನು ಮದ್ರಾಸ್ (ಚೆನ್ನೈ), ಭುವನೇಶ್ವರ, ಕಲ್ಕತ್ತ, ಲಖನೌ ಹೀಗೆ ನಾಲ್ಕು ದಿಕ್ಕುಗಳಲ್ಲಿ ಒಂದೊಂದಾಗಿ ಪ್ರಾದೇಶಿಕ ಕಲಾಕೇಂದ್ರಗಳನ್ನು ಸ್ಥಾಪಿಸಲಾಯಿತು.

ಹೀಗೆ ಸ್ಥಾಪಿಸಿದ ಕೇಂದ್ರಗಳು ರಾಜ್ಯದ ಯುವ ಕಲಾವಿದರು ಹಾಗೂ ಕಲಾ ವಿದ್ಯಾರ್ಥಿಗಳು ಶಿಕ್ಷಣ ಮುಗಿಸಿದ ನಂತರ ಸ್ವತಂತ್ರ ಕಲಾವಿದರಾಗಲು ಪ್ರೋತ್ಸಾಹಿಸುವ ಹಿನ್ನೆಲೆಯಲ್ಲಿ ಈ ಕೇಂದ್ರವು ಸಹಕಾರಿಯಾಗುತ್ತಿದೆ."ಕಲಾಕೃತಿಗಳನ್ನು ರಚಿಸಲು ಸಹಾಯಕವಾಗುವಂತೆ ವಾತಾವರಣವನ್ನು ಕಲ್ಪಿಸಲು ೧೮೭೦ರಲ್ಲಿ ಸ್ಟುಡಿಯೋಗಳನ್ನು ಸ್ಥಾಪಿಸಿದರು.ಇದು ನಗರದಿಂದ ದೂರ ಕಾಡಿನಲ್ಲಿ ಇದ್ದುದರಿಂದ ಕಲಾವಿದರ ಅನುಕೂಲಕ್ಕಾಗಿ ೧೯೭೪ರಲ್ಲಿ ಗರಿ ಹಳ್ಳಿಯಲ್ಲಿ ಸ್ಟುಡಿಯೋಗಳನ್ನು ಸ್ಥಾಪಿಸಲಾಯಿತು.ಅದರಲ್ಲಿ ಹೆಚ್ಚಾಗಿ ಶಿಲ್ಪಕಲೆ, ಮುದ್ರಣಕಲೆ, ಮತ್ತು ಸೆರಾಮಿಕ್ ಬಹುಮುಖ್ಯವಾದ ಸ್ಟುಡಿಯೊಗಳಾಗಿದ್ದವು.ಇದರ ಜೊತೆಗೆ ಗ್ರಂಥಾಲಯ ಸವಲತ್ತು ನೀಡಲಾಗುತಿತ್ತು.ಈ ಅನುಕೂಲತೆಯನ್ನು ದೇಶದ ವಿವಿಧ ರಾಜ್ಯದ ಕಲಾವಿದರಿಗೆ ಒದಗಿಸಲೆಂದು (ರಿಜಿನಲ್ ಸೆಂಟರ್ಸ್) ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲಾಯಿತು.ಕೇಂದ್ರ ಲಲಿತಕಲಾ ಅಕಾಡೆಮಿ ದೂರದ ಕಲಾವಿದರ ಅನುಕೂಲಕ್ಕಾಗಿ ದೇಶವನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿ ಪ್ರಾದೇಶಿಕ ಕೇಂದ್ರಗಳನ್ನು ಪ್ರಾರಂಭಿಸಿತು."[೧೦] ಕೇಂದ್ರ ಲಲಿತಕಲಾ ಅಕಾಡೆಮಿಯು ಕಾರ್ಯಕ್ರಮಗಳನ್ನು ಪ್ರಾದೇಶಿಕ ಕೇಂದ್ರಗಳ ಮೂಲಕ ಕಾರ್ಯರೂಪಕ್ಕೆ ತರಲಾಗುತ್ತದೆ.

ಕಲಾಕೇಂದ್ರಗಳು "ಮೊದಲನೆಯದಾಗಿ ಚೆನ್ನೈ ರಾಷ್ಟ್ರೀಯ ಪ್ರಾದೇಶಿಕ ಕೇಂದ್ರವನ್ನು ೧೯೭೮ ರಲ್ಲಿ ಸ್ಥಾಪಿಸಲಾಯಿತು.ಇದು ಆಂಧ್ರಪ್ರದೇಶ, ಕರ್ನಾಟಕ, ಕೇರಳ, ತಮಿಳುನಾಡು, ಪಾಂಡಿಚೇರಿ, ಮತ್ತು ಲಕ್ಷದ್ವೀಪ ರಾಜ್ಯಗಳನ್ನು ಒಳಗೊಂಡಿದೆ."[೧೧]ನಂತರ ಎರಡನೆಯದಾಗಿ "ಕಲ್ಕತ್ತಾ ೧೯೮೪ರಂದು ಪಶ್ಚಿಮಬಂಗಾಳ, ಮೇಘಾಲಯ, ಮಣಿಪುರ, ಅರುಣಾಚಲಪ್ರದೇಶ, ಅಂಡಮಾನ್ ಮತ್ತು ನಿಕೋಬಾರ್ ರಾಜ್ಯಗಳನ್ನು ಒಳಗೊಂಡಿದೆ.ಭುವನೇಶ್ವರ ೧೯೮೮ ರಲ್ಲಿ ಇದು ಒರಿಸ್ಸಾ, ಬಿಹಾರ, ಮಧ್ಯಪ್ರದೇಶ, ಝಾರ್ಖಂಡ, ಛತ್ತೀಸಗಡ ರಾಜ್ಯಗಳನ್ನು ಒಳಗೊಂಡಿದೆ.ನಾಲ್ಕನೆಯದಾಗಿ ಲಖನೌ ಇದು ರಾಜಸ್ಥಾನ, ಗುಜರಾತ, ದಮನ ಮತ್ತು ದೀವು ರಾಜ್ಯಗಳನ್ನು ಒಳಗೊಂಡಿದೆ.ಗರಿ ದೆಹಲಿ ಇದಕ್ಕೆ ೨೦೦೦ದಲ್ಲಿ ಸ್ಥಾನಮಾನವನ್ನು ನೀಡಲಾಯಿತು. ಇದು ದೆಹಲಿ, ಉತ್ತರಖಂಡ,

೯. ಶಿವಪ್ರಸಾದ ಎಸ್. ಬನ್ನಟ್ಟಿ : ಪ್ರಾದೇಶಿಕ ಕಲಾ ಕೇಂದ್ರಗಳು. (ಅ.ಪ್ರ.ಲ.ಪ್ರ) ಎಂ.ಎಂ.ಕೆ. ಕಾಲೇಜು. ಗುಲಬರ್ಗಾ. ಪುಟ ಸಂ:೩

೧೦. ವಿಜಯ ಕುಮಾರ ಎಸ್. ಕೊಪ್ಪದ : ರಾಷ್ಟ್ರ ಪ್ರಶಸ್ತಿ ಪಡೆದ ಕರ್ನಾಟಕದ ಕಲಾವಿದರ ಕುರಿತು ಒಂದು ಅಧ್ಯಯನ : (ಅ.ಪ್ರ.ಸಂ.ಪ್ರ) ಗು.ವಿ.ವಿ.ಗು. ಪುಟ ಸಂ:೬

೧೧. ಅದೇ. ಪುಟ ಸಂ:೭

ಪಂಜಾಬ್, ಹರಿಯಾಣ ರಾಜ್ಯಗಳನ್ನು ಒಳಗೊಂಡಿದೆ."[೧೨] ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವಲ್ಲಿ ಚೆನ್ನೈ ಪ್ರಾದೇಶಿಕ ಕಲಾ ಕೇಂದ್ರವು ಒಂದಾಗಿದೆ.

ದೇಶದ ದೃಶ್ಯಕಲೆಯ ಪ್ರಚಾರಕ್ಕಾಗಿ ಸಂಸ್ಕೃತಿ ಸಚಿವಾಲಯದ ಆಡಳಿತಾತ್ಮಕ ನಿಯಂತ್ರಣದ ಅಡಿಯಲ್ಲಿ ಚೆನ್ನೈ ಲಲಿತಕಲಾ ಅಕಾಡೆಮಿ ಸ್ಥಾಪಿಸಲಾಯಿತು.ಈ ಪ್ರದೇಶದ ಕಲೆಯನ್ನು ಪ್ರೋತ್ಸಾಹಿಸುವ ಉದ್ದೇಶಕ್ಕಾಗಿ ಇದನ್ನು "೧೯೭೮ ಅಕ್ಟೋಬರ್ ೧೪ರಂದು ತಮಿಳುನಾಡಿನ ಅಂದಿನ ಮುಖ್ಯಮಂತ್ರಿ ರಾಮಚಂದ್ರನ್ ಉದ್ಘಾಟಿಸಿದರು."[೧೩]

ಪ್ರಸ್ತುತ "ಅಸ್ತಿತ್ವದಲ್ಲಿರುವ ಒಂದು ಎಕರೆ ಭೂಮಿಯನ್ನು ರಾಜ್ಯಸರ್ಕಾರವು ೧೯೭೭ ರಲ್ಲಿ ಲಲಿತಕಲಾ ಅಕಾಡೆಮಿಗೆ ತನ್ನ ಪ್ರಾದೇಶಿಕ ಕೇಂದ್ರವನ್ನು ಚೆನ್ನೈನಲ್ಲಿ ಮಾಲೀಕತ್ವ ಆಧಾರದ ಮೇಲೆ ಸ್ಥಾಪಿಸಲು ನೀಡಲಾಯಿತು.ಮೊದಲ ಹಂತದ ನಿರ್ಮಾಣವನ್ನು ಪ್ರಸ್ತುತ ಕಛೇರಿ ಪ್ರದೇಶ ಮತ್ತು ನೆಲಮಹಡಿ ಗ್ಯಾಲರಿ ೧೯೭೮ ರಲ್ಲಿ ಪೂರ್ಣಗೊಳಿಸಲಾಯಿತು.ರಾಜ್ಯದ ಪಿಡಬ್ಲ್ಯೂಡಿ ರಾಜ್ಯ ಸರ್ಕಾರದಿಂದ ೫೦% ಪಾಲುಗಾರಿಕೆ ನೀಡಿತು, ನಂತರ ೧೯೮೪ ರಲ್ಲಿ ಕಾರ್ಯಾಗಾರಗಳಜೊತೆಗೆ ಗ್ಯಾಲರಿಯ ನಿರ್ಮಾಣ ಮತ್ತು ಕಲಾವಿದರು ತಮ್ಮ ಕಲಾಕೃತಿಗಳ ರಚನೆಗೆ ಸ್ಥಳ ಮತ್ತು ಸೌಲಭ್ಯಗಳನ್ನು ಬಳಸಲು ಸ್ಟುಡಿಯೋ ಸೌಲಭ್ಯಗಳೊಂದಿಗೆ ಎರಡನೆ ಹಂತದ ನಿರ್ಮಾಣ ಪೂರ್ಣಗೊಂಡಿತು."[೧೪]ಎಂದು ನಾವು ಕಾಣಬಹುದಾಗಿದೆ.

ಇದರಚಟುವಟಿಕೆಗಳನ್ನು ತಮಿಳುನಾಡು, ಆಂದ್ರಪ್ರದೇಶ, ಕರ್ನಾಟಕ, ಪಾಂಡಿಚೇರಿ, ಮಹಾರಾಷ್ಟ್ರ, ಗೋವಾ ಮತ್ತು ಲಕ್ಷದ್ವೀಪರಾಜ್ಯಗಳನ್ನು ಇದರ ವ್ಯಾಪ್ತಿಗೆ ಸೇರಿಸಲಾಗಿದೆ.ಕಲಾಕೇಂದ್ರವು ಚಿತ್ರಕಲೆ, ಶಿಲ್ಪಕಲೆ, ಸೆರಾಮಿಕ್ ಇತ್ಯಾದಿ ಸಮಕಾಲೀನ ಕಲೆ ಉತ್ತೇಜಿಸುವ ದೃಷ್ಟಿಯಿಂದ ಕಲಾವಿದರಿಗೆ ಸಹಕಾರಿಯಾಗಿದೆ.ಕೇಂದ್ರದ ಮೊದಲ ಕಾರ್ಯದರ್ಶಿ ಎಮ್.ರಾಜಾರಾಮ್ ಆಗಿದ್ದರು. ಕಲಾವಿದರಿಗೆ ಕಲಾಕೃತಿ ರಚನೆಯಲಲಿ ತೊಡಗಿಸಿಕೊಳ್ಳಲು ಸ್ಟುಡಿಯೋಗಳನ್ನು, ಉತ್ತಮವಾದ ಗ್ರಂಥಾಲಯ, ಆರ್ಟ್‌ಗ್ಯಾಲರಿ, ಕಲಾ ಶಿಬಿರ, ಸಂವಾದಾತ್ಮಕ ಕಾರ್ಯಾಗಾರಗಳು ಮತ್ತು ವಿಚಾರಸಂಕಿರಣ ಗೋಷ್ಠಿಗಳಂತಹ ಕಲಾ ಚಟುವಟಿಕೆಗಳನ್ನು ಇಲ್ಲಿ ಆಯೋಜಿಸುತ್ತದೆ.

"ಪ್ರತಿವರ್ಷ ೨೧ ರಿಂದ ೩೫ ವರ್ಷದ ವಯೋಮಿತಿ ಇರುವ ಕಲಾವಿದರನ್ನು ಕೇಂದ್ರ ಲಲಿತಕಲಾ ಅಕಾಡೆಮಿಯ ಮೂಲಕ ಪ್ರಾಯೋಗಿಕವಾಗಿ ಸೃಜನಾತ್ಮಕ ಕಲಾಕೃತಿ ರಚನೆಯಲ್ಲಿ ಸಂಶೋಧನೆ ಮಾಡಲು ಆಯ್ಕೆ ಮಾಡುತ್ತಾರೆ.ಆಯ್ಕೆಯಾದ ಕಲಾವಿದರು ವಿಷಯವಾರು ಅಂದರೆ ಚಿತ್ರಕಲೆ, ಶಿಲ್ಪಕಲೆ, ಮುದ್ರಣಕಲೆ, ಸೆರಾಮಿಕ್ ಇತ್ಯಾದಿ ವಿವಿಧ ಮಾಧ್ಯಮಗಳಲ್ಲಿ ಕಲಾಕೃತಿ ರಚಿಸುವ ಕಲಾವಿದರನ್ನು ಆಯ್ಕೆ ಮಾಡುತ್ತಾರೆ.ಸಂಶೋಧನೆಗೆ ಆಯ್ಕೆಯಾದ ಕಲಾವಿದರಿಗೆ ಮಾಸಿಕ

೧೨. ಶಿವಪ್ರಸಾದ ಎಸ್. ಬನ್ನಟ್ಟಿ : ಪ್ರಾದೇಶಿಕ ಕಲಾ ಕೇಂದ್ರಗಳು. (ಅ.ಪ್ರ.ಲ.ಪ್ರ) ಎಂ.ಎಂ.ಕೆ. ಕಾಲೇಜು. ಗುಲಬರ್ಗಾ.ಪುಟ ಸಂ:೧೧

೧೩. ಅದೇ. ಪುಟ ಸಂ:೧೬

೧೪. ಅಂತರಜಾಲ: https://lalitkala.gov.in/showdetails.php?id=158 ಇ. ಇಂದ ಕ.ಅನುವಾದ

ಧನಸಹಾಯವಾಗಿ ಪ್ರಸ್ತುತ ದಿನಗಳಲ್ಲಿ ೧೦ ಸಾವಿರ ರೂಪಾಯಿಗಳನ್ನು ನೀಡುತ್ತದೆ. ಈ ಮೊದಲು ಕೇವಲ ೩೦೦೦ ರೂಪಾಯಿಗಳು ನೀಡುತ್ತಿದ್ದರು”[೧೫]ಆಯ್ಕೆಯಾದ ಕಲಾವಿದರು ಪ್ರತಿ ತಿಂಗಳು ತಮ್ಮ ಪ್ರಗತಿಯ ವರದಿ ದಾಖಲೆಗಳನ್ನು ಕೇಂದ್ರ ಲಲಿತಕಲಾ ಅಕಾಡೆಮಿಗೆ ಕಡ್ಡಾಯವಾಗಿ ಸಲ್ಲಿಸಬೇಕು. ಸಲ್ಲಿಸಿದ ನಂತರ ಕಲಾವಿದರಿಗೆ ಹತ್ತು ಸಾವಿರ ರೂಪಾಯಿಗಳನ್ನು ಕೇಂದ್ರದಿಂದ ಬಿಡುಗಡೆಯಾಗುತ್ತದೆ.

ಕೇಂದ್ರದಲ್ಲಿ ಸಂಶೋಧನ ಕಲಾವಿದರಿಗೆ ಉಪಯೋಗವಾಗುವಂತೆ ವಿಷಯವಾರು ಪ್ರತ್ಯೇಕ ಬೇರೆಬೇರೆ ಸ್ಟುಡಿಯೋಗಳನ್ನು ಹೊಂದಿದೆ.ಹಾಗೂ ಕಲಾವಿದರಿಗೆ ಅನೇಕ ಹಿರಿಯ ಕಲಾವಿದರಿಂದ, ಕೇಂದ್ರದ ಮಾರ್ಗದರ್ಶಕರಿಂದ ಉಪನ್ಯಾಸಗಳು, ಹಾಗೂ ಬೇರೆಬೇರೆ ರಾಜ್ಯಗಳಿಂದ ಆಯ್ಕೆಯಾದ ಕಲಾವಿದರ ಪರಿಚಯ ಮಾರ್ಗದರ್ಶನಗಳು ನಡೆಸುವ ಮೂಲಕ ಕಲಾವಿದರನ್ನು ಕ್ಷೇತ್ರದಲ್ಲಿ ಬೆಳೆಯಲು ಪ್ರೋತ್ಸಾಹಿಸುತ್ತದೆ.

ಪ್ರಸ್ತುತ ದಿನಗಳಲ್ಲಿ ಒಂದುವರ್ಷ ಸಂಶೋಧನಾ ಅವಧಿಯನ್ನು ಪೂರ್ಣಗೊಳಿಸಿದ ಕಲಾವಿದರಿಗೆ ಸಂಶೋಧನಾ ಕೊನೆಯ ದಿನಗಳಲ್ಲಿ ಅನುಕೂಲಗಳನ್ನು ನೋಡಿ ಕೇಂದ್ರದ ಮೂಲಕ ಕಲಾವಿದರ ಕಲಾಕೃತಿಗಳನ್ನು ಗ್ಯಾಲರಿಯಲ್ಲಿ ಪ್ರದರ್ಶನ ನಡೆಸಿ, ಕಲಾವಿದರ ಕ್ಯಾಟಲಾಗ್ ಮುದ್ರಿಸಿ ಬಿಡುಗಡೆಮಾಡಿ ಕಲಾವಿದರ ಕಲಾಕೃತಿಗಳನ್ನು ಪ್ರದರ್ಶಿಸಿ ಪ್ರಚಾರಮಾಡುತ್ತದೆ.ಮತ್ತು ಬೀಳ್ಕೊಡುಗೆ ನೀಡುತ್ತದೆ ಎಂದು ಕಲಾ ಕೇಂದ್ರದ ಸಿಬ್ಬಂದಿ ಡಾ.ರಾಜೀವ್ ಪ್ರತಾಪ್ ಸಿಂಗ್ ಅವರು ಸಂದರ್ಶನದಲ್ಲಿತಿಳಿಸಿದರು.

ಒಟ್ಟಾರೆ ಯುವ ಕಲಾವಿದರಿಗೆ ಕಲಾಕ್ಷೇತ್ರದಲ್ಲಿ ಬೆಳೆಯಲು ಇನ್ನಷ್ಟು ಪ್ರೋತ್ಸಾಹಿಸುವ ಮೂಲಕ ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಾದೇಶಿಕ ಕಲಾಕೇಂದ್ರ ಚೆನ್ನೈ ನಿರಂತರವಾಗಿ ಶ್ರಮಿಸುವುದರ ಜೊತೆಗೆ ದೃಶ್ಯಕಲಾ ಕ್ಷೇತ್ರವನ್ನು ಅಂತರಾಷ್ಟ್ರ ಮಟ್ಟದಲ್ಲಿ ಬೆಳೆಯಲು ಸಹಕಾರಿಯಾಗಿ ನಿಲ್ಲುತ್ತದೆ ಎಂಬುವುದು ಸಂಶೋಧನೆಯ ಅಧ್ಯಯನದಿಂದ ಕಂಡುಬರುತ್ತದೆ.

*** ಅಕಾಡೆಮಿಯ ಉದ್ದೇಶಗಳು**

ಕರ್ನಾಟಕದ ಕಲಾ ವಿಮರ್ಶಕರಾದ ಸಿ.ಎಸ್.ಕೃಷ್ಣಶೆಟ್ಟಿಯವರು ಹೇಳಿದಂತೆ“ಭಾರತೀಯರಿಗೆ ಇತಿಹಾಸ ಪ್ರಜ್ಞೆ ಇಲ್ಲ” ಎಂಬುದಾಗಿ ಹಲವು ಪಾಶ್ಚಾತ್ಯ ವಿದ್ವಾಂಸರು ಈ ಹಿಂದೆ ಹೇಳಿದ ಉದಾಹರಣೆಗಳಿವೆ. ಈ ನೆಲೆಯಲ್ಲಿ ನೋಡಿದಾಗ ನಮ್ಮ ಕಲಾ ಇತಿಹಾಸದ ಕ್ಷೇತ್ರದಲ್ಲಿಯೂ

---

೧೫. ಎಂ. ಸೋವನ್ ಕುಮಾರ್, ಐ.ಸಿ.ಸೆಕ್ರೇಟರಿ ಲಲಿತಕಲಾ ಅಕಾಡೆಮಿ, ಪ್ರಾದೇಶೀಕ ಕೇಂದ್ರ (ರೀಜನಲ್ ಸೆಂಟರ್), ಚೆನ್ನೈ. ಇವರ ಸಂದರ್ಶನದಲ್ಲಿ ಹೇಳಿದರು. ೧೬ ಜುಲೈ ೨೦೧೯

ತುಂಬ ಕೆಲಸ ಆಗ ಬೇಕಿದೆ"[೧೬] ಭಾರತದಲ್ಲಿ ಈ ನಿಟ್ಟಿನಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿಯು ತನ್ನ ಕಲಾಚಟುವಟಿಕೆಗಳನ್ನು ಪ್ರಾದೇಶಿಕ ಕಲಾ ಕೇಂದ್ರದ ಮೂಲಕ ದೇಶದ ಅನೇಕ ಭಾಗಗಳಲ್ಲಿ ಕಲಾಕ್ಷೇತ್ರದ ಬೆಳವಣಿಗೆಗೆ ಕಾರ್ಯ ನಿರ್ವಹಿಸುತ್ತಿದೆಯೆಂದು ತಿಳಿಯಬಹುದಾಗಿದೆ.ಕೇಂದ್ರದ ಉದ್ದೇಶಗಳೆ ಎಲ್ಲಾ ಪ್ರಾದೇಶೀಕ ಕೇಂದ್ರಕ್ಕೆ ಅನ್ವಯವಾಗುತ್ತವೆ. ಅವು ಈ ಕೆಳಗಿನಂತೆ ನೋಡಬಹುದಾಗಿದೆ.

ಸೃಜನಶೀಲಕಲೆಗಳ ಕ್ಷೇತ್ರಗಳಲ್ಲಿ ಅಧ್ಯಯನ ಮತ್ತು ಸಂಶೋಧನೆಗಳನ್ನು ಉತ್ತೇಜಿಸಲು ಮತ್ತು ಪ್ರೋತ್ಸಾಹಿಸಲು ಪ್ರಾದೇಶಿಕ ಕಲಾಕೇಂದ್ರಗಳು ಮತ್ತು ರಾಜ್ಯ ಲಲಿತಕಲಾ ಅಕಾಡೆಮಿಗಳ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಮತ್ತು ಸಂಘಟಿಸಲು ಶ್ರಮಿಸುತ್ತದೆ.

ಕಲಾವಿದರು, ಕಲಾಸಂಘಗಳಲ್ಲಿ ಸಹಕಾರವನ್ನು ಉತ್ತೇಜಿಸಲು ಮತ್ತು ಅಂತಹ ಸಂಘಗಳ ಅಭಿವೃದ್ಧಿಗೆ ಪ್ರೋತ್ಸಾಹಿಸಲು, ಅಖಿಲಭಾರತ ಆಧಾರದಮೇಲೆ ವಿದ್ವಾಂಸರು, ಶಿಕ್ಷಣತಜ್ಞರು, ರಾಜ್ಯದ ಅನೇಕ ವಲಯದ ಸಾಂಸ್ಕೃತಿಕ ಕೇಂದ್ರಗಳು, ಕಲಾಸಂಸ್ಥೆಗಳು, ಕಾಲೇಜುಗಳು ಮತ್ತು ಶಾಲೆಗಳಲ್ಲಿ ಉಪನ್ಯಾಸ, ಸಮ್ಮೇಳನಗಳು, ಪ್ರದರ್ಶನಗಳು ಇತ್ಯಾದಿಗಳನ್ನು ಆಯೋಜಿಸುವ ಮೂಲಕ ವಿವಿಧ ಕಲಾಶಾಲೆಗಳ ನಡುವೆ ವಿಚಾರವಿನಿಮಯವನ್ನು ಉತ್ತೇಜಿಸಲು ಇದರ ಮೂಲ ಉದ್ದೇಶವೆಂದು ಹೆಳಬಹುದು.

ಹಾಗೂ ಸಂಗ್ರಹಾಲಯಗಳು, ಕಲಾಗ್ಯಾಲರಿಗಳು, ಕಲಾಸಂಘಗಳು ಪ್ರೋತ್ಸಾಹಿಸಲು ಸಾಹಿತ್ಯದ ಪ್ರಕಟಣೆಯನ್ನು ಪ್ರಕಟಿಸಲು, ಮೌನೊಗ್ರಾಫ್, ಜರ್ನಲ್‌ಗಳು ಸೇರಿದಂತೆ ಕಲೆಯಕುರಿತು ಸಾಹಿತ್ಯದ ಪ್ರಕಟಣೆಯನ್ನು ಉತ್ತೇಜಿಸಲು ವಿವಿಧ ಸಂಸ್ಥೆಗಳ ಅಗತ್ಯತೆಗಳನ್ನು ಪೂರೈಸುವ ಮತ್ತು ವಿಶ್ವಕಲೆಗಳನ್ನೂ ಒಳಗೊಂಡ ಅನೇಕ ಚಟುವಟಿಕೆಗಳನ್ನು ಬಿಂಬಿಸುತ್ತದೆ.

ಕಲಾಪ್ರದರ್ಶನ ಮತ್ತು ಕಲಾವಸ್ತುಗಳ ಇತ್ಯಾದಿಗಳಮೂಲಕ ದೇಶದೊಳಗೆ ಮತ್ತು ಇತರ ದೇಶಗಳೊಂದಿಗೆ ಸಾಂಸ್ಕೃತಿಕ ಸಂಪರ್ಕಗಳನ್ನು ಬೆಳೆಸುವುದು, ಅತ್ಯುತ್ತಮ ಸಾಧನೆಗಳಿಗಾಗಿ ಕಲಾವಿದರಿಗೆ ಮಾನ್ಯತೆನಿಡುವುದು, ಬುಡಕಟ್ಟು ಮತ್ತು ಸಾಂಪ್ರದಾಯಿಕ ಕಲೆ, ಕರಕುಶಲತಂತ್ರಗಳ ಅಧ್ಯಯನ ಸಂಶೋಧನೆ ಮತ್ತು ಸಮೀಕ್ಷೆಗಳನ್ನು ಉತ್ತೇಜಿಸಲು ಹಾಗೂ ಉಳಿದಿರುವ ಕಲಾಪ್ರಕಾರಗಳನ್ನು ಸಂರಕ್ಷಿಸಲು ಮತ್ತು ಯೋಚಿಸಲು ಸಮೀಕ್ಷೆಗಳನ್ನು ಆಯೋಜಿಸಲು ಪ್ರೋತ್ಸಾಹಕ್ಕೆ. ನಿರ್ಮಿಸಲಾಗಿದೆಯೆಂದು ಈ ಅಧ್ಯಯನದ ಸಂಶೋಧನೆಯಿಂದ ತಿಳಿಯುತ್ತದೆ.

೧೬. ಸಂ.ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಹೈದ್ರಬಾದ ಕರ್ನಾಟಕದ ದೃಶ್ಯಕಲಾ ಪರಂಪರೆ. (ವೈಚಾರಿಕ ಪ್ರಜ್ಞೆ ಜಾಗೃತವಾಗಲಿ (ಉದ್ಘಾಟನಾ ಭಾಷಣ,) : ಚಿ.ಸು. ಕೃಷ್ಣಶೆಟ್ಟಿ : ಪುಟ ಸಂ:XV

* ಇದುವರೆಗೂ ಕಾರ್ಯ ನಿರ್ವಹಿಸಿದ ರಿಜಿನಲ್ ಸೆಕ್ರೇಟರಿಗಳು(ಕಾರ್ಯದರ್ಶಿಗಳು)

ಈ ಸಂಶೋಧನಾ ಅಧ್ಯಯನ ಕೈಗೊಂಡಾಗ ೧೯೭೭ ರ ಪ್ರಾರಂಭದಿಂದ ಹಂತ ಹಂತವಾಗಿ ಕಾರ್ಯನಿರ್ವಹಿಸಿದ ಕಾರ್ಯದರ್ಶಿಗಳ ಹೆಸರು ಈ ಕೆಳಗಿನಂತೆ ಕಂಡುಬರುತ್ತದೆ.ಈ ಕಲಾ ಕೇಂದ್ರದ ಬೆಳವಣಿಗೆಗೆ ಇವರ ಸೇವೆಯು ಅತ್ಯಂತ ಮಹತ್ವದೆಂದು ತಿಳಿಯುತ್ತದೆ.ಪ್ರಥಮವಾಗಿ ಶ್ರೀ ಎಂ. ರಾಜರಾಮ,ಶ್ರೀ ಆರ್.ಬಿ ಭಾಸ್ಕರನ್, ಶ್ರೀ ರಾಜರಾಮ, ಶ್ರೀ ವೈ.ಎನ್. ಭಾಗೊವಾ, ಶ್ರೀ ಕೆ.ಆರ್. ಚೌದ್ರಿ, ಶ್ರೀ ಎಂ.ಎಲ್.ಭಾಟಿಯ, ಶ್ರೀ ಆರ್.ಎಮ್.ಪಳನಿಯಪ್ಪನ್, ಶ್ರೀಸಿಧ್ದಾರ್ಥ ಘೋಷ್, ಶ್ರೀ ಆರ್.ಎಮ್.ಪಳನಿಯಪ್ಪನ್, ಶ್ರೀ ಎಮ್.ರಾಮಚಂದ್ರನ್, ಶ್ರೀ ರಾಮಕೃಷ್ಣ ವೆದಲ, ಶ್ರೀ ಎಂ.ಸೊವನ್ ಕುಮಾರ್ ಪ್ರಸ್ತುತ ಕೇಂದ್ರದ ಇಂಚಾರ್ಜ್ ಸೆಕ್ರೇಟರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.ಹಾಗೂ ಕೇಲವರು ಎರಡೆರಡುಬಾರಿ ಕಾರ್ಯ ನಿರ್ವಹಿಸಿದ್ದನ್ನು ನಾವು ನೋಡಬಹುದಾಗಿದೆ, ಈ ಎಲ್ಲಾ ಮಾಹಿತಿಯು ಕೇಂದ್ರದ ಸಿಬ್ಬಂದಿ ಡಾ.ರಾಜೀವ್ ಪ್ರತಾಪ್‌ಸಿಂಗ್ ಅವರಿಂದ ಪಡೆದು ದಾಖಲಿಸಲಾಗಿದೆ.ಹೀಗೆ ಈ ಕಲಾ ಕೇಂದ್ರಕ್ಕೆ ಇವರ ಪರಿಶ್ರಮ ಮತ್ತು ಕೊಡುಗೆಗಳು ಅತ್ಯಂತ ಮೌಲ್ಯವಾದವುಗಳೆಂದು ಈ ಸಂಶೋಧನೆಯಿಂದ ತಿಳಿಯುತ್ತದೆ.

* ಕಲಾ ಕೇಂದ್ರದಲ್ಲಿ ಅಧ್ಯಯನ ಮಾಡಿದ ಕಲಾವಿದರು

ಈ ಕಲಾ ಕೇಂದ್ರದಲ್ಲಿ ಭಾರತದ ಅನೇಕ ಅರ್ಹ ಕಲಾವಿದರನ್ನು ಆಯ್ಕೆ ಮಾಡಿ ಚಿತ್ರ, ಶಿಲ್ಪ, ಗ್ರಾಫಿಕ್, ಸೆರಾಮಿಕ್ ಮತ್ತು ಇತ್ಯಾದಿ ಸಮಕಾಲೀನ ಕಲಾಕೃತಿ ರಚಿಸಲು ಸ್ಥಳವಕಾಶ ನೀಡಿ ಕಲಾವಿದರಿಗೆ ಪ್ರೋತ್ಸಾಹಿಸುತ್ತಿದೆ.ಈ ನಿಟ್ಟಿನಲ್ಲಿ ದೇಶದ ಅನೇಕ ಯುವಕಲಾವಿದರು ಇದರ ಉಪಯೊಗ ಪಡೆದು ಕೊಂಡಿರುವುದನ್ನು ಈ ಸಂಶೋಧನೆಯಿಂದ ತಿಳಿದು ಬರುತ್ತದೆ.ಹೀಗೆ ಈ ಕೇಂದ್ರದಲ್ಲಿ ಭಾರತದ ಅನೇಕ ರಾಜ್ಯದ ಕಲಾವಿದರು ಅಧ್ಯಯನ ಮಾಡಿದ್ದು ಕಾಣುತ್ತೇವೆ. ಕರ್ನಾಟಕದ ಹಿನ್ನಲೆಯಲ್ಲಿ ಗಮನಿಸಿದಾಗ ೧೯೯೪ ರಲ್ಲಿ ಶ್ರೀ ಚಂದ್ರಹಾಸ ವ್ಹಾಯ್.ಜಾಲಿಹಾಳ ಮತ್ತು ೧೯೯೭ ರಲ್ಲಿ ಶ್ರೀ ಬಿ.ಓ. ಶೈಲೇಶ್ ರವರು ಸೇರಿದಂತೆ ಅನೇಕ ರಾಜ್ಯದ ಕಲಾವಿದರು ಇದ್ದಿದ್ದರೂ ಎಂದು ಈಕಲಾವಿದರೊಂದಿಗೆ ಸಂದರ್ಶನದಲ್ಲಿ ತಿಳಿಸಿದರು. ಆದರೆ ಈ ಕೇಂದ್ರದಲ್ಲಿ ೨೦೧೨ ಕ್ಕಿಂತ ಮೊದಲಿನ ಅವಧಿಯ ಕಲಾವಿದರ ವಿವರಗಳ ದಾಖಲೆಗಳು ದೊರೆಯದಿದ್ದ ಕಾರಣ ಹಾಗೂ ಅಷ್ಟೊಂದು ನಿಖರವಾದ ಮಾಹಿತಿ ದೊರೆತಿಲ್ಲಾ ಆದರೆ ೨೦೧೨ ರಿಂದ ಪ್ರಸ್ತುತ ವರ್ಷದವರೆಗಿನ ಕಲಾವಿದರ ಪರಿಪೂರ್ಣವಾದ ಮಾಹಿತಿಯನ್ನು ಕೇಂದ್ರದ ಸಿಬ್ಬಂದಿ ಶಿಲ್ಪಕಲಾ ವಿಭಾಗದ ಮೆಲ್ವಿಚಾರಕರಾದ ಡಾ.ರಾಜೀವ್ ಪ್ರತಾಪ್ ಸಿಂಗ್‌ರವರು ನೀಡಿರುವ ಅನೇಕ ಕ್ಯಾಟ್ಲಾಗ್ ಮತ್ತು ಪತ್ರಗಳಿಂದ ಮಾಹಿತಿ ಪಡೆದು ಸಂಗ್ರಹಿಸಿ ದಾಖಲಿಸಲಾಗಿದೆ. ಹಾಗೂ ಈ ಕೇಂದ್ರವು ಕೇಲವು ವರ್ಷಗಳ ಕಾಲ ನವೀಕರಣಕ್ಕಾಗಿ (ರೆನುವೇಷನ್) ಮುಚ್ಚಲಾಗಿತ್ತು. ಅದಕ್ಕಾಗಿ ತನ್ನ ಕಾರ್ಯಗಳನ್ನು ಅಲ್ಪವಾಗಿ ನಡೆಸುತ್ತಿತ್ತು ಎಂದು ಇವರು ಪ್ರಸ್ತಾಪಿಸಿದರು.ಅಧ್ಯಯನ ಮಾಡಿದ ಕಲಾವಿದರ ಹೆಸರುಗಳು ಕ್ರಮೇಣವಾಗಿ ಈ ಕೆಳಗಿನಂತೆ ಗಮನಿಸಬಹುದಾಗಿದೆ.

೨೦೧೨-೧೩ರ ಅವಧಿಯಲ್ಲಿ ಎನ್.ವಿ.ಆರ್. ಸುನಿಲ್‌ವರ್ಮಾ ಹೈದರಾಬಾದ, ವಿಜಯ್‌ಪಿಚುಮನಿ ಕನ್ಯಾಕುಮಾರಿ, ಅವಿನಾಶ್ ಮನೋಹರ್‌ರಾವ ಮೋಟಗರೆ ಮಹಾರಾಷ್ಟ್ರ, ಇವರು ಗ್ರಾಫಿಕ್ ವಿಭಾಗದಲ್ಲಿ ಆಯ್ಕೆಯಾಗಿದ್ದು.ಶಿನೋಜ್ ಚೋರಣ್ ಕೇರಳಾ, ವೀರೇಶ್ ಎಂ.ರುದ್ರಸ್ವಾಮಿಕರ್ನಾಟಕ, ಶೀನಿವಾಸರೆಡ್ಡಿ ಎನ್. ಕರ್ನಾಟಕ, ಜಿ.ಗುರುನಾಥನ್‌ಚೆನ್ನೈ, ಇವರು ಪೇಂಟಿಂಗ್ ವಿಭಾಗದಲ್ಲಿ ಹಾಗೂ ಎಸ್.ಪೊಟ್ರಾಸನ್‌ಚೆನ್ನೈ, ಸೆರಾಮಿಕ್ ವಿಭಾಗದಲ್ಲಿ ಆಯ್ಕೆಯಾಗಿದ್ದರು.

೨೦೧೩ ರಿಂದ ೨೦೧೪ರ ಅವಧಿಯಲ್ಲಿ ದಿನು ಘಟಾ ಕಚರುಲಾಲ್‌ಮಹಾರಾಷ್ಟ್ರ, ಎಲೆಂಚೆಜಿಯನ್ ಪಿ.ಚೆನ್ನೈ, ಶಿಲ್ಪಕಲೆ ವಿಭಾಗದಲ್ಲಿ ಆಯ್ಕೆಯಾಗಿದ್ದು, ಕಾಶಿನಾಥ ಜನಾರ್ಧನ್ ಜಾಧವ ಮಹಾರಾಷ್ಟ್ರ, ಸಾಯಿ ಕಿರಣ ಮಹೇಶ್ವರ ಆಂಧ್ರಪ್ರದೇಶ, ವೆಂಕಟಗಂಗು ನಾಯ್ಡು ಆಂಧ್ರಪ್ರದೇಶ, ಇವರು ಪೇಂಟಿಂಗ್ ವಿಭಾಗದಲ್ಲಿ, ಕೊಯಿಲ್‌ಪಿಚೈ ಪ್ರಬಾಕರ್ ಚೆನ್ನೈ, ಸೆರಾಮಿಕ್‌ನಲ್ಲಿ.ಪ್ರಸನ್ನಾ ಕುಮರ ನಾಗರಾಜನ್ ಚೆನ್ನೈ, ಇವರು ಗ್ರಾಫಿಕ್ ವಿಭಾಗದಲ್ಲಿ ಆಯ್ಕೆಯಾಗಿದ್ದರು.

೨೦೧೭-೧೮ರ ಅವಧಿಯಲ್ಲಿ ಚೆಗಂಟಿ ದುರ್ಗಾಪ್ರಸಾದಆಂಧ್ರಪ್ರದೇಶ, ಶಿಲ್ಪಕಲೆಯಲ್ಲಿ ಕೆ.ಸುಮೇಶನ್‌ಕೇರಳಾ, ಎನ್.ಪ್ರಕಾಶ್‌ಸಲೆಂ, ಶೆಖಪ್ಪ ಬಿ.ನಿಂಗಾಪೂರಕರ್ನಾಟಕ, ಪವನ್ ಗಣೇಶ್ ಕವಿತ್ಕರ್‌ಮಹಾರಾಷ್ಟ್ರ, ಎಂ.ವಿ.ಸಪ್ರೂಪ್‌ಕೇರಳಾ, ಇವರು ಪೇಂಟಿಂಗ್ ವಿಭಾಗದಲ್ಲಿ ಆಯ್ಕೆಯಾಗಿದ್ದು, ಸಚಿನ್ ಮಂಚಾರೆಅಹ್ಮದ ನಗರ. ಇವರು ಗ್ರಾಫಿಕ್ ವಿಭಾಗದಲ್ಲಿ ಆಯ್ಕೆಯಾಗಿದ್ದರು.

೨೦೧೮-೧೯ರ ಅವಧಿಯಲ್ಲಿ ಕೆ.ಪ್ರದೀಪ ಕುಮಾರಆಂಧ್ರಪ್ರದೇಶ, ಶಿಲ್ಪಕಲೆ ವಿಭಾಗದಲ್ಲಿ ಆಯ್ಕೆಯಾಗಿದ್ದು, ಶೃತಿ ಎಸ್.ಕುಮಾರ್‌ಕೇರಳಾ, ದಿವ್ಯಾ ಪವನೇಂದ್ರ ಪಂಡ್ಯೆಯನ್‌ತಂಜಾವೂರ್, ಆಶಿಕ್ ಅಲಿಖಾನ್‌ಕೇರಳಾ, ಪೇಂತಿಂಗ್ ವಿಭಾಗದಲ್ಲಿ ಆಯ್ಕೆಯಾಗಿದ್ದರು. ಹೀಗೆ ಕೇಂದ್ರವು ಅನೇಕ ಕಲೆಗಳು ಮತ್ತು ಕಲಾವಿದರಿಗೆ ಪ್ರೋತ್ಸಾಹಿಸುತ್ತಾ ದೃಶ್ಯಕಲಾ ಕ್ಷೇತ್ರಕ್ಕೆ ಉದಯೋನ್ಮುಖ ಕಲಾವಿದರನ್ನು ಪರಿಚಯಿಸುವ ನಿಟ್ಟಿನಲ್ಲಿ ಒಂದು ವೇದಿಕೆಯಾಗಿ ರೂಪಿಸಿಕೊಂಡಿದೆಯೆನ್ನಬಹುದು.



ಕಲಾ ಕೇಂದ್ರದ ಸ್ಥಾಪನೆಯ ಶಿಲೆ



ಸ್ಟುಡಿಯೋಗಳ ಸ್ಥಾಪನೆಯ ಶಿಲೆ

ಕೇಂದ್ರದಲ್ಲಿ ಅಧ್ಯಯನ ಮಾಡಿದ ಕಲಾವಿದರ ಕಲಾಕೃತಿಗಳು



ಎಲಂಚೇಜಯನ್ ಪಿ. ಚೆನ್ನೈ — ಕೃಷ್ಣ ವಿತ್ ಕವ್, ಕಂಚು 37x11x32 c.m



ದಿನು ಘಟಾ ಕಜರುಲಾಲ್ ಮಹಾರಾಷ್ಟ್ರ — ಶೀರ್ಷಿಕೆ ರಹಿತ, ಫೈಬರ್ ಗ್ಲಾಸ್ 69x36x52 c.m



ಕೆ.ಎಲ್. ಪ್ರಭಾಕರ್ ಚೆನ್ನೈ ಹೂ ಗೊಂಚಲು, ಸೆರಾಮಿಕ್ 13x05x27 c.m



ವೆಂಕಟಗಂಗು ನಾಯ್ಡು ಪಿ. ಆಂಧ್ರಪ್ರದೇಶ್ ಸ್ಪೆಜ್ ೧ ಆಕ್ರೆಲಿಕ್ ಆನ್ ಕ್ಯಾನ್ವಾಸ್ 69x36x52 c.m



ಶೇಖಪ್ಪ ಬಿ.ಎನ್. ಕರ್ನಾಟಕ ಶೀರ್ಷಿಕೆರಹಿತ ತೈಲವರ್ಣ ಆನ್ ಕ್ಯಾನ್ವಾಸ್ 60.96x76.2 c.m



ಶ್ರೀನಿವಾಸ ರೆಡ್ಡಿ ಎನ್. ಕರ್ನಾಟಕ ಸೇವ್ ಮಿ ಜಲವರ್ಣ ಮತ್ತು ಪೋಸ್ಟ ಕಾರ್ಡ್ 14x14 c.m



ಚಂದ್ರಹಾಸ ವ್ಹಾಯ್.ಜೆ. ಕರ್ನಾಟಕ — ಏಕಸ್ವಾಮ್ಯ ಇಂಟ್ಯಾಗ್ಲೊ ಆನ್ ಪೇಪರ್ 50.8x50.8 c.m



ವೀರೇಶ್ ಎಂ. ರುದ್ರಸ್ವಾಮಿ. ಕರ್ನಾಟಕ — ಮೈಂಡ್ ಆಫ್ ಫ್ಲೋ ಆಕ್ರಿಲಿಕ್ ಆನ್ ಕ್ಯಾನ್ವಾಸ್ 122x122 c.m

ಅಧ್ಯಾಯ-ನಾಲ್ಕು

ಪ್ರಾದೇಶಿಕ ಕಲಾ ಕೇಂದ್ರದ ಚಟುವಟಿಕೆಗಳು

ಅಧ್ಯಾಯ- ನಾಲ್ಕು

ಪ್ರಾದೇಶಿಕ ಕಲಾ ಕೇಂದ್ರದ ಚಟುವಟಿಕೆಗಳು

ಈ ಕಲಾ ಕೇಂದ್ರವು ಕೇಂದ್ರ ಲಲಿತಕಲಾ ಅಕಾಡೆಮಿಯ ಕಲಾಚಟುವಟಿಕೆಗಳು ಇದರ ಸಹ ಭಾಗಿತ್ವವನ್ನು ಪಡೆದು, ದೃಶ್ಯಕಲಾ ಬೆಳವಣಿಗೆಗೆ ರೂಪಿಸಿರುವ ವಾರ್ಷಿಕ ಕಲಾ ಪ್ರದರ್ಶನ, ಕಲಾಶಿಬಿರ, ಅಂತರಾಷ್ಟ್ರೀಯ ಕಲಾಮೇಳ, ವಿವಿಧ ರೀತಿಯಲ್ಲಿ ಫೆಲೋಷಿಪ್‌ಗಳು, ವಿಚಾರ ಸಂಕಿರಣ, ಮತ್ತು ಪದವಿ ಅಧ್ಯಯನ ಮಾಡುತ್ತಿರುವವರಿಗೆ ಶಿಷ್ಯವೇತನದಂತಹ ಧನಸಹಾಯದ ಮೇರೆಗೆ ಪ್ರಾದೇಶಿಕ ಕೇಂದ್ರಗಳಲ್ಲಿ ಕಲಾ ಸಂಶೋಧನೆಗೆ ತೊಡುಗುವ ನಿಟ್ಟಿನಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿ ಕಾರ್ಯ ನಿರ್ವಹಿಸುತ್ತಿದ್ದು, ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಹಾಗೆ ಕಲಾಕೇಂದ್ರದ ನಿಯಮಿತಕಲಾ ಚಟುವಟಿಕೆಗಳನ್ನು ಬಳಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಚೆನ್ನೈ ಪ್ರಾದೇಶಿಕ ಕೇಂದ್ರವು ಯುವ ಕಲಾವಿದರಿಗೆ ಸ್ಥಳಾವಕಾಶ ನೀಡುವುದರ ಜೊತೆಗೆ ಅನೇಕ ಪ್ರಕಾರದ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ತನ್ನ ಕಲಾಚಟುವಟಿಕೆಗಳು ವಿಸ್ತಾರಗೊಳಿಸಿಕೊಂಡಿದೆ. ಸಾಹಿತ್ಯ, ಸಂಗೀತ, ದೃಶ್ಯಕಲೆಗೆ ಸಂಬಂಧಿಸಿದ ಅನೇಕ ಕಾರ್ಯಗಳು, ಕಲಾ

ಉತ್ಸವಗಳು,ವಿವಿಧ ರೀತಿಯ ವಿಚಾರ ಸಂಕಿರಣಗಳು, ಕಲಾ ಪ್ರಾತ್ಯಕ್ಷಿಕೆಗಳು ಹಾಗೂಕೇಂದ್ರವು ಕಾಲಕಾಲಕ್ಕೆ ವಿವಿಧ ಹೆಸರಾಂತ ಕಲಾವಿದರಿಂದ ಪ್ರಾತ್ಯಕ್ಷಿಕೆಗಳನ್ನು ನಡೆಸುವ ಮೂಲಕ ಸಹೃದಯರಿಗೆ ಹಾಗೂ ಕಲಾ ಕೇಂದ್ರದಲ್ಲಿನ ಸಂಶೋಧಕರಿಗೆ ಸಮಕಾಲಿನ ದೃಶ್ಯಕಲಾ ಬದುಕಿನ ರೂಪರೇಷಗಳನ್ನು ತಿಳಿಸುವ ಪ್ರಯತ್ನ ಮಾಡುತ್ತಿದೆ. ಈ ನಿಟ್ಟಿನಲ್ಲಿ ಕೇಂದ್ರವು ರಾಜ್ಯಮಟ್ಟದ, ರಾಷ್ಟಮಟ್ಟ ಅಲ್ಲದೆ ಅಂತರಾಷ್ಟ್ರೀಯ ಮಟ್ಟದ ಕಲಾವಿದರ ಪ್ರಾತ್ಯಕ್ಷಿಕೆಗಳಂತಹ ಅನೇಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತದೆ.

ಕೇಂದ್ರವು ಕಲವು ರೀತಿಯ ಕಲಾ ಚಟುವಟಿಕೆಗಳನ್ನು ನಡೆಸುತ್ತದೆ.ಆ ಒಂದು ಪ್ರಾದೇಶಿಕ ಕಲಾ ಕೇಂದ್ರದ ಆಡಳಿತಕ್ಕೆ ಒಳಪಟ್ಟಿರುವ ರಾಜ್ಯಗಳಲ್ಲಿನ ಕಲಾವಿದರನ್ನು ಆಹ್ವಾನಿಸಿ ಪ್ರದರ್ಶನ ಮತ್ತು ಶಿಬಿರಗಳನ್ನು ಏರ್ಪಡಿಸುವುದು.ದೇಶವಿದೇಶದ ಕಲಾವಿದರನ್ನು ಆಹ್ವಾನಿಸಿಕಲಾಶಿಬಿರಗಳನ್ನು ಏರ್ಪಡಿಸುವುದು ಹಾಗೂ ಮತ್ತೊಂದು ಹಿರಿಯ ಕಲಾವಿದರ ಹೆಸರಿನ ಮೇಲೆ ಇಡೀ ವರ್ಷದ ಕಲಾ ಚಟುವಟಿಕೆಗಳನ್ನೆಲ್ಲಾ ಅವರ ಹೆಸರಿನ ಮೇಲೆ ನಡೆಸುತ್ತದೆ.ಚೆನ್ನೈನ ಕೆಲವು ಕಲಾಶಾಲೆಗಳು ಮತ್ತು ಇತರ ಸಂಸ್ಥೆಗಳ ಸಹಯೊಗದೊಂದಿಗೆ ಕೆಲವು ಕಲಾ ಚಟುವಟಿಕೆಗಳನ್ನು ನಡೆಸುತ್ತವೆ. ಈ ಎಲ್ಲಾ ಚಟುವಟಿಕೆಗಳು ದೆಹಲಿಯ ಕೇಂದ್ರ ಲಲಿತಕಲಾ ಅಕಾಡಮಿಯ ಧನಸಹಾಯದ ಅನುಮೋದನೆಗೆ ತಕ್ಕಂತೆ ಕಲಾಚಟುವಟಿಕೆಗಳನ್ನು ಕೈಗೊಳ್ಳುತ್ತಾರೆ.ಒಟ್ಟಾರೆ ವಾರ್ಷಿಕ ಅನುದಾನಕ್ಕೆ ತಕ್ಕ ಕಾರ್ಯಕ್ರಮಗಳು ಆಯೋಜಿಸಲಾಗುತ್ತದೆ.

ಹೀಗೆ ಕಲಾ ಕೇಂದ್ರವು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದ್ದು ಇವುಗಳ ಸ್ಥೂಲ ಮಾಹಿತಿಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ. ಕಲಾ ಕೇಂದ್ರವು ಆರಂಭದಿಂದಲೂ ಅನೇಕ ಕಾರ್ಯಕ್ರಮಗಳು ನಡೆದಿದ್ದರೂ ಈ ಅಧ್ಯಯನದ ಸಿಮೀತ ಕಾಲವಧಿಯಲ್ಲಿ ಲಭ್ಯವಾದ ಕೆಲವು ಮಾಹಿತಿಗಳನ್ನು ಮಾತ್ರ ಇಲ್ಲಿ ಬಳಸಿಕೊಂಡು ಪ್ರಸ್ತುತ ಭಾಗವನ್ನು ಪೂರೈಸಿದ್ದೇನೆ. ಕೇಂದ್ರ ಲಲಿತಕಲಾ ಅಕಾಡೆಮಿ ಆಯೋಜಿಸುವ ಕಾರ್ಯಕ್ರಮಗಳ ಪ್ರಕಾರಗಳು ಮತ್ತು ಅವುಗಳ ಸ್ವರೂಪ, ಉದ್ದೇಶ, ವ್ಯಾಪ್ತಿ ಮತ್ತು ಬದಲಾದ ಹಂತಗಳು ಈ ಕೆಳಗೆ ಉದಾಹರಣೆಗಳೊಂದಿಗೆ ನೋಡಬಹುದಾಗಿದೆ.

- **ಕಲಾಕೇಂದ್ರ ಆಯೋಜಿಸುವ ಕಾರ್ಯಕ್ರಮಗಳ ವರ್ಗೀಕರಣ**

1. ಕಲಾ ಶಿಬಿರ

ಕೇಂದ್ರವು ಹಿರಿಯ ಕಲಾವಿದರು ಹಾಗೂ ಯುವ ಕಲಾವಿದರಿಗೆ ಪ್ರತಿವರ್ಷ ಕಲಾ ಶಿಬಿರಗಳನ್ನು ಏರ್ಪಡಿಸುತ್ತದೆ.ಇದರಿಂದ ಬೇರೆ ಬೇರೆ ರಾಜ್ಯದ ಅನೇಕ ಕಲಾವಿದರು ಭೇಟಿಯಾಗಿ ಅವರ ಕಲಾಕೃತಿಗಳ ಬಗ್ಗೆ ಹಾಗೂ ಅವರ ಪರಿಚಯವಾಗುತ್ತದೆ.ಹಾಗೂ ಕಲಾಶಿಬಿರದಲ್ಲಿ ಭಾಗವಹಿಸಿದ ಕಲಾವಿದರಿಗೆ ಕಲಾಸಾಮಗ್ರಿಗಳು, ಊಟ ಮತ್ತು ವಸತಿ ಸೌಲಭ್ಯದ ಜೋತೆಗೆ ಗೌರವ

ಸಂಭಾವನೆಯನ್ನು ಆಯಾ ಕಲಾ ಶಿಬಿರದ ಮಹತ್ವಕ್ಕೆ ತಕ್ಕಂತೆ ಅಕಾಡೆಮಿವತಿಯಿಂದ ನೀಡಲಾಗುತ್ತದೆ.ಈ ನಿಟ್ಟಿನಲ್ಲಿ ಕಲಾಕೇಂದ್ರವು ಇದುವರೆಗೆ ಅನೇಕ ಶಿಬಿರಗಳನ್ನು ಕೈಗೊಂಡಿರುವುದನ್ನು ನೋಡಬಹುದಾಗಿದೆ.

1.೧. 'ಎ ಸ್ಪೇಸ್ ಆಂಡ್ ರೂಟ್ಸ್ ಫೇಸ್ಟಿವೆಲ್'

ಚೆನ್ನೈನ ಪ್ರಾದೇಶಿಕ ಕೇಂದ್ರವು ಚೆನ್ನೈನ ಆಸಿಮಾ ಟ್ರಸ್ಟ್ ಸಹಯೋಗದೊಂದಿಗೆ ಸಮಕಾಲೀನ ಚಿಂತನೆಯ ಹಾಗೂ ಸಾಂಪ್ರದಾಯಿಕ ಕಲೆಗಳನ್ನು ಅನ್ವೇಷಿಸುವ 'ಎ ಸ್ಪೇಸ್ ಆಂಡ್ ರೂಟ್ಸ್ ಫೇಸ್ಟಿವೆಲ್' ಅನ್ನು ಕೇಂದ್ರದ ಕಲಾ ಗ್ಯಾಲರಿಯಲ್ಲಿ ೦೮-೦೮-೧೪ ಮತ್ತು ೧೪-೦೮-೧೪ರ ನಡುವಿನ ಅವಧಿಯಲ್ಲಿ ಆಯೋಜಿಸಿಲಾಗಿತ್ತು.ಈ ಕಾರ್ಯಾಗಾರದಲ್ಲಿ ಭಾಗವಹಿಸಲು ದೇಶದ ನಾನಾ ಭಾಗದ ೧೦ ಕಲಾವಿದರನ್ನು ಆಹ್ವಾನಿಸಲಾಗಿತ್ತು. ಅದರಲ್ಲಿ ೫ ಜನ ಸಮಕಾಲೀನ ಕಲಾವಿದರು ಮತ್ತು ೫ ಜನ ಸಾಂಪ್ರದಾಯಿಕ ಕಲಾವಿದರನ್ನು ಈ ಕೆಳಗಿನಂತೆ ಗಮನಿಸಬಹುದು

ಸಮಕಾಲೀನಕಲಾವಿದರು: ಶ್ರೀ ಎಸ್. ವಿಘ್ನೇಶ್ ಚೆನ್ನೈ, ಶ್ರೀ ಕೋಮಕುಲ ರಾಜಶೇಖರ್, ವಿಶಾಖಪಟ್ಟಣಂ, ಶ್ರೀ ಮಹೇಶ್ ಬಲಿಗಾ, ವಡೋದರಾ, ಶ್ರೀ ಪಿ. ಉಸ್ಮಾನ್, ಪಾಲಕ್ಕಾಡ್, ಶ್ರೀ ಶ್ರೀಪಾದ್ ಅಮೃತ್ ಗುರುವ್, ಗೋವಾ,

ಸಾಂಪ್ರದಾಯಿಕ ಕಲಾವಿದರು: ಶ್ರೀ ಡಿ. ವಿನಯ್ ಕುಮಾರ್ (ಚೆರಿಯಲ್ ಚಿತ್ರಕಲೆ), ತೆಲಂಗಾಣ, ಶ್ರೀಮತಿ ಗಾಯತ್ರಿ ಶಂಕರ್ನಾರಾಯಣ್ (ಕೋಲಂ) ಚೆನ್ನೈ, ಶ್ರೀ ಆರ್. ಕೃಷ್ಣನ್ ಕಿಟ್ಟಾ (ಕುಂಬಾ ಕಲೆ), ನೀಲಗಿರಿ, ಶ್ರೀ ಚಕ್ರ ಪ್ರಭಾಕರ್ (ಕಲಾಮಕಾರಿ) ಶಶಿಧರನ್, (ಕೇರಳ ಮ್ಯೂರಲ್) ಪಾಲಕ್ಕಾಡ್. ಈ ಕಾರ್ಯ್ಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀಮತಿ ಗೀತಾರಾಮ್ (ಕ್ರಾಫ್ಟ್ ಕೌನ್ಸಿಲ್ ಆಫ್ ಇಂಡಿಯಾ, ಚೆನ್ನೈ) ಮತ್ತು ಶ್ರೀ ಕೆ.ಮುರಳೀಧರನ್ (ಹಿರಿಯ ಕಲಾವಿದ) ಅವರನ್ನು ಆಹ್ವಾನಿಸಲಾಗಿತ್ತು.ಕಾರ್ಯಾಗಾರದ ಕೊನೆಯ ಎರಡು ದಿನಗಳಲ್ಲಿ ಅಂದರೆ ೨೦೧೪ ರ ಆಗಸ್ಟ್ ೧೩ ಮತ್ತು ೧೪ ರಂದು ಚೆನ್ನೈ ನಗರದ ಸುತ್ತಮುತ್ತಲಿನ ಕಲಾ ಶಾಲೆಗಳ ೧೩೦ ಮಕ್ಕಳನ್ನು ಆಹ್ವಾನಿತ ಸಮಕಾಲೀನ ಮತ್ತು ಸಾಂಪ್ರದಾಯಿಕ ಕಲಾವಿದರೊಂದಿಗೆ ಸಂವಹನ ನಡೆಸಲು ಕಾರ್ಯಾಗಾರದಲ್ಲಿ ಭಾಗವಹಿಸಲು ಆಹ್ವಾನಿಸಲಾಗಿತ್ತು.

1.೨. ಪ್ರಾದೇಶಿಕ ಮುದ್ರಣ-ತಯಾರಿಕೆ ಕ್ಯಾಂಪ್ (ರಿಲೀಫ್ ಕಲರ್ ಪ್ರಿಂಟ್ ಕ್ಯಾಂಪ್)

ದಿನಾಂಕ ೨೧-೧೧-೨೦೧೪ ರಿಂದ ೨೭-೧೧-೨೦೧೪ರ ಅವಧಿಯಲ್ಲಿ ಹೈದರಾಬಾದ ನಲ್ಲಿ ಚೆನ್ನೈನ ಪ್ರಾದೇಶಿಕ ಕೇಂದ್ರವು ಹೈದರಾಬಾದನ ಬನ್ಯನ್ಆರ್ಟ್ ಒಪನ್ ಸ್ಟೂಡಿಯೋ ಸಹಯೋಗದೊಂದಿಗೆ ಪ್ರಾದೇಶಿಕ ಮುದ್ರಣ ತಯಾರಿಕೆ ಶಿಬಿರವನ್ನು ಆಯೋಜಿಸಲಾಗಿತ್ತು.ಈ ಶಿಬಿರದಲ್ಲಿ ಈ ಕೆಳಗಿನ ಹಿರಿಯ ಮತ್ತು ದೇಶದ ನಾನಾ ಭಾಗದ ಯುವ ಕಲಾವಿದರನ್ನು

ಭಾಗವಹಿಸಲು ಆಹ್ವಾನಿಸಲಾಗಿತ್ತು.**ಹಿರಿಯಕಲಾವಿದರು:** ಪ್ರೊ. ಲಕ್ಷ್ಮಗೌಡ್(ಹೈದರಾಬಾದ್) ಮತ್ತು ಶ್ರೀ ಸೂರ್ಯಪ್ರಕಾಶ್ (ಹೈದರಾಬಾದ್). **ಯುವ ಕಲಾವಿದರು:** ಶ್ರೀ ಎಸ್. ವಿನಿಲ್ ರಜೀಕ್, ಶ್ರೀ ಫವಾದ್ ತಮ್ಕನಾತ್, ಶ್ರೀ ಎ. ರಾಜೇಶ್ವರರಾವ್, ಶ್ರೀ ಸಿ.ಎನ್. ವಿಜಯ್ ಸಾರಥಿ, ಶ್ರೀ ಕೆ.ಎಸ್. ಪ್ರಕಾಶನ್, ಶ್ರೀ ಮಂಗೇಶ್ ಕಪ್ಸೆ, ಶ್ರೀ ಹೆಚ್.ಷಣ್ಮುಗಂ ಮತ್ತು ಶ್ರೀ ರಾಮದಾಸ್ ಎಂ.ಗಡೇಕರ್.

1.೩.ಮ್ಯೂರಲ್ ಕ್ಯಾಂಪ್

ದಿನಾಂಕ ೨೩-೦೯-೨೦೧೫ ಮತ್ತು ೩೦-೦೯-೨೦೧೫ರ ನಡುವಿನ ಅವಧಿಯಲ್ಲಿ ಚೆನ್ನೈನ ಪ್ರಾದೇಶಿಕ ಕೇಂದ್ರ ಹಾಗೂ ಚೆನ್ನೈನ ದಕ್ಷಿಣಚಿತ್ರ ಮ್ಯೂಸಿಯಂ ಸಹಯೋಗದೊಂದಿಗೆ.ಈ ಶಿಬಿರವನ್ನು ಆಯೋಜಿಸಲಾಯಿತು.ಜಾನಪದ, ಬುಡಕಟ್ಟು, ಸಾಂಪ್ರದಾಯಿಕ ಮತ್ತು ಸಮಕಾಲೀನ ಕಲಾವಿದರು ದೇಶದ ನಾನಾ ಬಾಗಗಳಿಂದ ಆಗಮಿಸಿ ತಲಾ ಎರಡು ಕೃತಿಗಳನ್ನು ರಚಿಸಿದ್ದರು. ಭಾಗವಹಿಸಿದ ಕಲಾವಿದರು ಈ ಕೆಳಗಿನಂತೆ ನೋಡಬಹುದಾಗಿದೆ.**ಜಾನಪದ, ಬುಡಕಟ್ಟು ಮತ್ತು ಸಾಂಪ್ರದಾಯಿಕ ಭಾಗವಹಿಸಿದ ಕಲಾವಿದರು:**

ಶ್ರೀ ಡಿ. ವೆಂಕಟರಮಣ ಹೈದರಾಬಾದ್, ತೆಲಂಗಾಣ : ಚೆರಿಯಲ್. ಶ್ರೀಮತಿ ರಾಧಾ ಚಿತ್ರಕರ್ ಮದಿನಿಪುರ, ಪಶ್ಚಿಮಬಂಗಾಳ: ಪಟಚಿತ್ರ, ಶ್ರೀ ಆಕಾಶ್ ಮಹಾರಾಣ ಪುರಿ, ಒರಿಸ್ಸಾ : ಪಟಚಿತ್ರ, ಶ್ರೀ ರಮೇಶ್ಂಗಡಿ ಪಾಲ್ಘರ್, ಮಹಾರಾಷ್ಟ್ರ: ವರಲಿ. ಶ್ರೀ ಪಿ. ನವೀನ್ ಕುಮಾರ್ ಮೆಪ್ಪಾಯೂರ್, ಕೇರಳ: ಕೇರಳಮ್ಯೂರಲ್. **ಸಮಕಾಲೀನ ಕಲಾವಿದರು:** ಶ್ರೀ ಪಿ.ರಾಮಚಂದ್ರನ್ ತಿರುವಣ್ಣಾಮಲೈ, ತಮಿಳುನಾಡು. ಶ್ರೀ ವಿ.ಎಸ್.ಡಿ. ಅರುಲರಸನ್ ಕುಂಬಕೋಣಂ, ತಮಿಳುನಾಡು.ಶ್ರೀ ಪಿ.ಜಯಕಣಿ ಚೆನ್ನೈ, ತಮಿಳುನಾಡು.ಶ್ರೀಮತಿ ಚೈತ್ರ ಪುತ್ರನ್ ಮಂಗಳೂರು, ಕರ್ನಾಟಕ. ಶ್ರೀ ಗಿರಿಧರ್ ಗೌಡ್ ಗುಂಟೂರು, ಎ.ಪಿ. ಈ ಶಿಬಿರದ ಅವಧಿಯಲ್ಲಿ ಸಾಕಷ್ಟು ಸ್ಥಳೀಯ ಸಂದರ್ಶಕರು, ಕಲಾ ಪ್ರೇಮಿಗಳು, ಕಾಲೇಜು ವಿದ್ಯಾರ್ಥಿಗಳು ಭೇಟಿನೀಡಿ ಶಿಬಿರದೊಂದಿಗೆ ಸಂವಹನ ನಡೆಸಿದರು.

1.೪. ಕಲಂಕರಿ ಪೇಂಟಿಂಗ್ ಕ್ಯಾಂಪ್

ದಿನಾಂಕ ೨೮-೦೯-೨೦೧೫ ಮತ್ತು ೦೬-೧೦-೨೦೧೫ ರ ವರೆಗೆ ಚೆನ್ನೈನ ಪ್ರಾದೇಶಿಕ ಕೇಂದ್ರ ಹಾಗೂ ಚೆನ್ನೈನ ಕಲಾಕ್ಷೇತ್ರ ಪ್ರತಿಷ್ಠಾನದ ಸಹಯೋಗದೊಂದಿಗೆ ಈ ಶಿಬಿರವು ಆಯೋಜಿಸಲಾಯಿತು.ಈ ಶಿಬಿರದಲ್ಲಿ ಸಾಂಪ್ರದಾಯಿಕ ಮತ್ತು ಸಮಕಾಲೀನ ದೇಶದ ನಾನಾ ರಾಜ್ಯಗಳ ೧೨ ಕಲಾವಿದರು ಭಾಗವಹಿಸಿ ತಲಾ ಎರಡು ಕೃತಿಗಳನ್ನು ರಚಿಸಿದರು.

ಭಾಗವಹಿಸಿದ ಸಾಂಪ್ರದಾಯಿಕ ಕಲಾವಿದರು:

ಶ್ರೀಮತಿ ಟಿ.ಪಿ. ಲಕ್ಷ್ಮಿ ಶ್ರೀ ಕಲಹಸ್ತಿಆಂಧ್ರಪ್ರದೇಶ

ಶ್ರೀ ಕಲಾಂ ಎ. ವಿಜಯ ಕುಮಾರ್ ಶ್ರೀ ಕಲಹಸ್ತಿ ಆಂಧ್ರಪ್ರದೇಶ

ಶ್ರೀ ಪಟ್ಟಲಂ ರಾಮಚಂದ್ರಯ್ಯ ಶ್ರೀ ಕಲಹಸ್ತಿಆಂಧ್ರಪ್ರದೇಶ

ಶ್ರೀ ಅರ್ಕಾಡು ಮುರಳಿ ಶ್ರೀ ಕಲಹಸ್ತಿಆಂಧ್ರಪ್ರದೇಶ
ಶ್ರೀ ವಿ.ನಂದಗೋಪಾಲ್ ಶ್ರೀ ಕಲಹಸ್ತಿಆಂಧ್ರಪ್ರದೇಶ
ಶ್ರೀ ಕೆ.ದಕ್ಷಿಣ ಮೂರ್ತಿ ಚೆನ್ನೈ ತಮಿಳು ನಾಡು

ಸಮಕಾಲೀನ ಕಲಾವಿದರು:

ಶ್ರೀ ಎ.ಮುನುಸ್ವಾಮಿ, ಚೆನ್ನೈ ತಮಿಳು ನಾಡು
ಶ್ರೀಮತಿ ಉಮಾ ಕೃಷ್ಣಸ್ವಾಮಿ ಚೆನ್ನೈ ತಮಿಳು ನಾಡು
ಶ್ರೀ ಅಖಿಲ್ ಮೋಹನ್ ಎರ್ನಾಕುಲಂ ಕೇರಳ
ಶ್ರೀ ಬಿ.ಎಚ್.ಲೊಕೇಶ್ ಬೆಂಗಳೂರು
ಶ್ರೀ ಚಂದ್ರಶೇಖರ್ ಮೊರ್ಕೊಂಡ ಶ್ರೀ ಕಲಹಸ್ತಿಆಂಧ್ರಪ್ರದೇಶ
ಶ್ರೀ ಹಿತೇಶ್ ಪಂಕರ್ ಗೋವಾ

ಈ ಶಿಬಿರದ ಅವಧಿಯಲ್ಲಿ ಸಾಕಷ್ಟು ಸ್ಥಳೀಯ ಸಂದರ್ಶಕರು, ಕಲಾ ಪ್ರೇಮಿಗಳು, ಕಾಲೇಜು ವಿದ್ಯಾರ್ಥಿಗಳು ಭೇಟಿನೀಡಿ ಶಿಬಿರದೊಂದಿಗೆ ಸಂವಹನ ನಡೆಸಿದರು.

1.೫. ಕಂಟೆಂಪ್ರರಿ ಸ್ಪೇಸ್ ಪಬ್ಲಿಕ್ ವಾಲ್ ಮ್ಯೂರಲ್

ಯೋಗಿ ವೇಮನ ವಿಶ್ವವಿದ್ಯಾಲಯ, ಆಂಧ್ರದ ಕಡಪ ದಲ್ಲಿ ದಿನಾಂಕ ೧೪-೦೩-೨೦೧೬ ರಿಂದ ೨೩-೦೩-೨೦೧೬ ರಂದು ಚೆನ್ನೈನ ಪ್ರಾದೇಶಿಕ ಕೇಂದ್ರ ಹಾಗೂ ಲಲಿತಕಲೆಗಳ ಇಲಾಖೆಯ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ಆಯೋಜಿಸಿತು.ಇದರಲ್ಲಿ ಚೆನ್ನೈನ ಹಿರಿಯ ಮತ್ತು ಪ್ರಸಿದ್ಧ ಕಲಾವಿದರಾದ ಶ್ರೀ ನಟೇಶ್ ಮುತ್ತುಸ್ವಾಮಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು ಮತ್ತುದೀ ಸಂದರ್ಭದಲ್ಲಿ ೨೫' ರಿಂದ ೧೦' ಅಡಿ ಗಾತ್ರದ ಮ್ಯೂರಲ್ ಕಲಾಕೃತಿ ರಚಿಸಿದರು.

1.೬. ರಿಜಿನಲ್ ಆರ್ಟ್ ಫೇಸ್ಟಿವಲ್

ದಿನಾಂಕ ೧೫-೧೧-೨೦೧೭ ಮತ್ತು ೨೧-೧೧-೨೦೧೭ರ ನಡುವಿನ ಅವಧಿಯಲ್ಲಿ ಪ್ರಾದೇಶಿಕ ಕೇಂದ್ರವು ತನ್ನಗ್ಯಾಲರಿಯಲ್ಲಿ ರಿಜಿನಲ್ ಆರ್ಟ್ ಫೇಸ್ಟಿವಲ್ ಕಾರ್ಯಕ್ರಮವನ್ನು ಆಯೋಜಿಸಿತ್ತು.ಇದರಲ್ಲಿ ದಕ್ಷಿಣಭಾರತದ ಮಹಾರಾಷ್ಟ್ರ, ಗೋವಾ ಮತ್ತು ಪಾಂಡಿಚೇರಿ ರಾಜ್ಯಗಳಿಂದ ೧೬ ಕಲಾವಿದರು ಭಾಗವಹಿಸಿದರು. ಅವರಲ್ಲಿ ಶ್ರೀ ಆರ್.ಜಾಕೋಬ್ ಜೆಬರಾಜ್, ಶ್ರೀ ಎಸ್. ದೀನಕರ ಸುಂದರ್, ಶ್ರೀ ಎನ್.ನಾಗರಾಜನ್, ಶ್ರೀಮತಿ ಎಸ್.ರಮ್ಯಾ ರಾಜನ್ (ತಮಿಳುನಾಡು), ಶ್ರೀ ಕೆ.ಸಂಭುಪ್ರಸಾದ ರಡ್ಡಿ, ಶ್ರೀಮತಿ ಎಸ್.ಸರೋಜ ಸಂಚನಾ (ಆಂಧ್ರಪ್ರದೇಶ), ಶ್ರೀ ಸುನೀಲ್ ಕುಮಾರ್ ಸಂದಿಗೆರ್, (ಕರ್ನಾಟಕ) ಶ್ರೀ ಸುನೀಲ್ ಕುಮಾರ್ ಶ್ರೀಕಂದನ್, ಶ್ರೀ ಪಿ.ಪ್ರದೀಪ್ ಕುಮಾರ್, ಶ್ರೀ ಆರ್. ಅಜಿತಕುಮಾರ್ (ಕೇರಳ), ಶ್ರೀ ರವೀಂದ್ರ ನಾರಾಯಣ ಪವಾರ್, ಶ್ರೀಮತಿ ಅಂಜಲಿ ಗುಲ್ಜಾರ್

ಗವಳಿ, ಶ್ರೀ ಮಧುಕರ್ ಮುಂಡೆ, (ಮಹಾರಾಷ್ಟ್ರ), ಶ್ರೀ ಕೀರ್ತಿಕುಮಾರ್ ಜೆ.ಪ್ರಭು (ಗೋವಾ), ಶ್ರೀ ಇ.ಇಜಿಲಾರಸನ್, ಶ್ರೀ ಬಿ.ವೆಂಗಟೇಸನ್ (ಪುದುಚೇರಿ).

ಈ ಕಾರ್ಯಾಗಾರವನ್ನು ೧೫-೧೧-೨೦೧೭ ಬುಧವಾರ ಬೆಳಿಗ್ಗೆ ೧೧.೩೦ ಕ್ಕೆ ಉದ್ಘಾಟಿಸಲಾಯಿತು. ಶ್ರೀ ಕೆ.ಲಕ್ಷ್ಮಗೌಡ್ (ಹಿರಿಯಕಲಾವಿದರು) ಅವರನ್ನು ಗೌರವಾನ್ವಿತ ಅತಿಥಿಯಾಗಿ ಆಹ್ವಾನಿಸಲಾಯಿತು. ಭಾಗವಹಿಸಿದ ಕಲಾವಿದರನ್ನು ಚೆನ್ನೈನ ಲಲಿತಕಲಾ ಅಕಾಡೆಮಿಯ ಪ್ರಾದೇಶಿಕ ಕೇಂದ್ರದ ಪ್ರಾದೇಶಿಕ ಕಾರ್ಯದರ್ಶಿ ಶ್ರೀ ರಾಮಕೃಷ್ಣ ವೇದಾಲ ಪರಿಚಯಿಸಿದರು.ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಸುಮಾರು ೧೨೦ ಜನರು ಕಲಾವಿದರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು ಹಾಗೂ ಸ್ಥಳೀಯ ಕಲಾವಿದರು ಸ್ಥಳೀಯ ಕಾಲೇಜುಗಳ ವಿದ್ಯಾರ್ಥಿಗಳು ಕಾರ್ಯಕ್ರಮದ ಅವಧಿಯಲ್ಲಿ ಕೇಂದ್ರಕ್ಕೆ ಭೇಟಿ ನೀಡಿ ಆಹ್ವಾನಿತ ಕಲಾವಿದರನ್ನು ಅವರ ಕಲಾಕೃತಿಗಳಬಗ್ಗೆ ಚರ್ಚಿಸಿದರು.ನಂತರ ಕಾರ್ಯಾಗಾರದಲ್ಲಿ ಭಾಗವಹಿಸಿದ ಕಲಾವಿದರ ಕಲಾಕೃತಿಗಳನ್ನು ಸಾರ್ವಜನಿಕರಿಗಾಗಿ ಪ್ರದರ್ಶನಕ್ಕಿಡಲಾಗಿತ್ತು.

1.೭. ಎಥ್ನಿಕ್ ಮೈಂಡ್ ಸ್ಕೇಪ್‌ನ್ಯಾಷ್ನಲ್ ಪೇಂಟಿಂಗ್ ಕ್ಯಾಂಪ್

ದಿನಾಂಕ ೨೭-೧೨-೨೦೧೭ ರಿಂದ ೦೨ -೦೧-೨೦೧೮ರ ವರೆಗೆ ಪ್ರಾದೇಶಿಕ ಕೇಂದ್ರವು ದಾವಣಗರೆಯ ವಿಜ್ಯುವಲ್ ಆರ್ಟ್ ಕಾಲೇಜಿನಲ್ಲಿ ಎಥ್ನಿಕ್ ಮೈಂಡ್ ಸ್ಕೇಪ್ ನ್ಯಾಷ್ನಲ್ ಪೇಂಟಿಂಗ್ ಕ್ಯಾಂಪ್ ಅನ್ನು ಆಯೋಜಿಸಿತು.ಈ ಕಾರ್ಯಾಗಾರವನ್ನು ನವದೆಹಲಿಯ ಲಲಿತಕಲಾ ಅಕಾಡೆಮಿ ಆಡಳಿತಾಧಿಕಾರಿ ಶ್ರೀ ಸಿ.ಎಸ್. ಕೃಷ್ಣಸೆಟ್ಟಿಯವರು ಉದ್ಘಾಟಿಸಿದರು.ಇದರಲ್ಲಿ ಈಶಾನ್ಯದ ಆರು ಕಲಾವಿದರು ಮತ್ತು ಮಹಾರಾಷ್ಟ್ರ, ಪುಡುಚೇರಿ ಗೋವಾ ಹಾಗೂ ಇತರ ರಾಜ್ಯಗಳ ಹನ್ನೆರಡು ಕಲಾವಿದರು ಚಿತ್ರಕಲೆ ಕಾರ್ಯಾಗಾರದಲ್ಲಿ ಭಾಗವಹಿಸಿದರು.ಶ್ರೀ ವಿನಿಜೋತ್ಸೌ ಥಾಸೆ (ನಾಗಾಲ್ಯಾಂಡ್), ಎಂ.ಎಸ್. ಮೋನಿಷ್ ಡೇ (ಅಸ್ಸಾಂ), ಎಂ.ಎಸ್. ಪಾಯೆಲ್ ದೆಬ್ನಾಥ್ (ಅಸ್ಸಾಂ), ಎಂ.ಎಸ್. ಅಲ್ಯಾಸ್ ಲಲ್ರಿನ ಸಂಗಿ (ಮಿಜೋರಾಂ), ಶ್ರೀ ಎಲ್. ಈಶ್ವರ್ ಚಂದ್ರ (ಮಣಿಪುರ), ಶ್ರೀ ಇಂದ್ರ ಕರಿ ಸುಬ್ಬಾ (ಸಿಕ್ಕಿಂ), ಶ್ರೀ ಎಸ್.ಶಿವ ಬಾಲನ್ (ತಮಿಳುನಾಡು), ಶ್ರೀ ಪಿ.ತಿರುವಉಕ್ಕರಸು (ತಮಿಳುನಾಡು), ಶ್ರೀ ಗೌತಮ್ ವಿ.ಅಂದಾನಿ (ಕರ್ನಾಟಕ), ಶ್ರೀ ಬಾಬು ಈಶ್ವರ್ ಪ್ರಸಾದ್ (ಕರ್ನಾಟಕ-ದೆಹಲಿ), ಶ್ರೀ ಎಂ.ಎಸ್.ಪ್ರಕಾಶ್ ಬಾಬು, ಶ್ರೀ ಕೆ.ಎನ್. ಶಂಕರಪ್ಪ (ಕರ್ನಾಟಕ), ಶ್ರೀ ಸೈಯದ್ ರಾಯೀಸ್ ಅಹ್ಮದ್ (ಆಂಧ್ರಪ್ರದೇಶ), ಶ್ರೀ ಸುಜೀಶ್ ಒಂಚೆರಿ(ಕೇರಳ), ಶ್ರೀ ಡಾಗ್ಲಾಸ್ ಜ್ಞಾನ್(ಮಹಾರಾಷ್ಟ್ರ), ಶ್ರೀಮತಿ ಶಿಲ್ಪಾ ನಿಕಮ್ (ಮಹಾರಾಷ್ಟ್ರ), ಶ್ರೀ ಪ್ರದೀಪ ಬಿ. ನಾಯಕ್ (ಗೋವಾ), ಶ್ರೀ ಕೆ.ಸಿಲಾಂಬರಸನ್ (ಪುಡುಚೇರಿ) ರವರು ಭಾಗವಹಿಸಿದ್ದರು.ಈ ಸಮಾರಂಭದಲ್ಲಿ ಅನೇಕ ಸ್ಥಳೀಯ ಹಿರಿಯ ಕಲಾವಿದರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.ಕಾರ್ಯಾಗಾರದಲ್ಲಿ ಭಾಗವಹಿಸಿದ ಕಲಾವಿದರು ನಿರ್ಮಿಸಿದ ಕೃತಿಗಳು ಶಿಬಿರದ ಮುಕ್ತಾಯದ ದಿನದಂದು ಸಾರ್ವಜನಿಕರ ಪ್ರದರ್ಶನಕ್ಕಿಡಲಾಗಿತ್ತು.

1.೮. ರಿಜಿನಲ್ ಬ್ರೋಂಜ್ ಕಾಸ್ಟಿಂಗ್ ಕ್ಯಾಂಪ್

ಪ್ರಾದೇಶೀಕ ಕೇಂದ್ರ ಮತ್ತು ಸರಕಾರಿ ಕಾಲೇಜ ಆಫ್ ಫೈನ್ ಆರ್ಟ್ ಕುಂಬಕೋಣಂ ಸಹಯೋಗ ದೊಂದಿಗೆ ದಿನಾಂಕ ೨೩-೦೧-೧೯ ರಿಂದ ೦೧-೦೨-೨೦೨೯ ರ ವರೆಗೆ ನಡೆದ ಈ ಶಿಬಿರದಲ್ಲಿ ದೇಶದ ಅನೇಕ ಕಲಾವಿದರು ಭಾಗವಹಿಸಿದ್ದರು.ಶ್ರೀ ಎ. ಕರುಪ್ಪಯ್ಯ (ತಮಿಳುನಾಡು), ಶ್ರೀ ವಿ.ಕಮಲೇಶ ಕುಮಾರ್ (ತಮಿಳುನಾಡು), ಶ್ರೀ ಜೆ.ವಸಂತರಾಜ (ತಮಿಳುನಾಡು), ಶ್ರೀ ಅಡೇಪಲ್ಲಿ ತಿರುಪತಿರಾವ್ (ಆಂಧ್ರಪ್ರದೇಶ), ಶ್ರೀ ಎಂ.ಸ್ರೀನು (ಆಂಧ್ರಪ್ರದೇಶ), ಶ್ರೀಮತಿ ಇ.ಜಿ. ಚಿತ್ರಾ (ಕೇರಳ), ಶ್ರೀಮತಿ ಪಿ.ಕೆ.ಅಜಿತಾ (ಕೇರಳ) ಶ್ರೀ ಪ್ರದೀಪ ಕಾಂಬ್ಳೆ (ಮಹಾರಾಷ್ಟ್ರ), ಶ್ರೀ ಪರಮೇಶ್ವರ ಕಾಂಬ್ಳೆ (ಮಹಾರಾಷ್ಟ್ರ), ಶ್ರೀ ಇ. ಮಣಿವಣ್ಣನ್ (ಪುಡುಚೆರಿ) ಭಾಗವಹಿಸಿದ್ದರು.

1.೯. ನ್ಯಾಷ್ನಲ್ ಪೆಂಟಿಂಗ್ ಕ್ಯಾಂಪ್

ಬೆಂಗಳೂರಿನ ಶಕ್ತಿ ಹಿಲ್ ರೆಸಾರ್ಟ್ ಹಾಗೂ ನವದೆಹಲಿಯ ಲಲಿತಕಲಾ ಅಕಾಡೆಮಿಯ ಸಹಯೋಗದಿಂದ ದಿನಾಂಕ ೩೧-೦೧-೨೦೧೯ ರಿಂದ ೦೫-೦೨-೨೦೧೯ರ ನಡುವಿನ ಅವಧಿಯಲ್ಲಿ ರಾಷ್ಟ್ರೀಯ ಪೆಂಟಿಂಗ್ ಕ್ಯಾಂಪ್ ಬೆಂಗಳೂರಿನಲ್ಲಿ ಏರ್ಪಡಿಸಿತ್ತು.ಸಮಾರಂಭದ ಉದ್ಘಾಟನೆಗೆ ಮುಖ್ಯ ಅತಿಥಿಯಾಗಿ ನವದೆಹಲಿಯ ಲಲಿತ ಕಲಾ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಉತ್ತಮ ಪಚಾರ್ನೆ ಮತ್ತು ಶಿಬಿರದ ಶ್ರೇಷ್ಠ ಕಲಾವಿದ ಶ್ರೀ.ಸಿ.ಎಸ್. ಕೃಷ್ಣಶೆಟ್ಟಿ ಅವರು ಭಾಗವಹಿಸಿದ್ದರು.ಈ ಶಿಬಿರದಲ್ಲಿ ದೇಶದ ಅನೇಕ ರಾಜ್ಯದ ಕಲಾವಿದರು ಭಾಗವಹಿಸಿದ್ದರು. ಅವರೆಂದರೆ ಶ್ರೀಮತಿ. ಅನುರಾಧಾ ಠಾಕೂರ್ (ಅಹ್ಮದನಗರ), ಶ್ರೀ ಬಿ.ಎನ್. ಹರಿಪ್ರಸಾದ್ (ಬೆಂಗಳೂರು), ಶ್ರೀ ಭಗವಾನ್ ಚವ್ಹಾಣ್ (ಚೆನ್ನೈ), ಶ್ರೀಮತಿ ಬಿಂದಿ ರಾಜಗೋಪಾಲ್ (ಕೊಚ್ಚಿನ್), ಶ್ರೀ ಬೀರೇಂದ್ರ ಪಾನಿ (ಬಾಲಸೋರ್) ಶ್ರೀ ಸಿ.ಎಸ್.ಕೃಷ್ಣಸೆಟ್ಟಿ (ಬೆಂಗಳೂರು), ಡಾ. ಶಿವನಾಥ ರಾಮ್ (ವಾರಣಾಸಿ), ಶ್ರೀ ಜ್ಯೋತಿರಂಜನ್ ಪಾಣಿಗ್ರಾಹಿ (ನವದೆಹಲಿ), ಶ್ರೀ ಕಂದನ್ ಜಿ. (ಮಂಗಳೂರು), ಶ್ರೀ ಮನೋಜ ಕುಮಾರ್ ಬಚ್ಚನ್ (ಪಾಟ್ನಾ), ಶ್ರೀ ಕೆ.ಎಂ.ಶೇಷಗಿರಿ (ದಾವಣಗೆರೆ), ಶ್ರೀಮತಿ ಪೂಜಾ ಎಸ್.ಐ. (ಚೆನ್ನೈ), ಶ್ರೀ ಎಸ್.ಪ್ರಭಾಕರನ್ (ಚೆನ್ನೈ), ಶ್ರೀಮತಿ ಪ್ರಣಾಲಿ ಎಸ್.ಎನ್.ಗೌನೇಕರ್ (ಗೋವಾ), ಶ್ರೀಮತಿ ಪ್ರನಿತಾಪ್ರವಿಣ್ ಬೊರಾ (ಅಹ್ಮದನಗರ), ಶ್ರೀ ಶಿವಕುಮಾರ್ ಕೇಸರಮಡು (ಮೈಸೂರು), ಶ್ರೀಮತಿ ಸುಭದಾ ಭೋಸಲೆ (ಪುಣೆ), ಶ್ರೀ ಸುಜಿತ್ ಕುಮಾರ್ ಜಿ.ಎಸ್. ಮಂಡ್ಯ (ಬೆಂಗಳೂರು) ಶೀ ಚಪ್ಪೆ ಒತ್ತಮ್ ಎಕ್ನಾಥ ರಾವ್(ಮುಂಬೈ), ಶ್ರೀಮತಿ ವೀನಿತಾ ಎಸ್.ಚೆಂದ್ವಾಂಕರ್ (ಗೋವಾ), ಶ್ರೀ ವಿಪಿನ್ ಸಿಂಗ್ ರಜಪುತ್ (ರಾಜನಂದಗಾಂವ್) ರವರು ಭಾಗವಹಿಸಿದ್ದರು. ಶಿಬಿರದ ಕೊನೆಯದಿನ ಕಲಾಕೃತಿಗಳನ್ನು ಶಕ್ತಿ ಹಿಲ್ ರೆಸಾರ್ಟ್‌ನಲ್ಲಿ ಸಾರ್ವಜನಿಕ ವೀಕ್ಷಣೆಗಾಗಿ ಪ್ರದರ್ಶನಕ್ಕಿಡಲಾಗಿತ್ತು. ಹೀಗೆ ಕೇಂದ್ರವು ಕಲಾಕ್ಷೇತ್ರದ ಬೆಳವಣಿಗೆಗೆ ಅನೇಕ ಕಲಾ ಚಟುವಟಿಕೆಗಳು ನಿರಂತರವಾಗಿ ನಡಿಸುತ್ತಾ ಬಂದಿರುವುದನ್ನು ಗಮನಿಸಬಹುದಾಗಿದೆ.

2. ರೆಸಿಡೆನ್ಸಿ

ರೆಸಿಡೆನ್ಸಿ ಪದದಅರ್ಥ ರೆಸಿಡೆನ್ಸಿಯೆನ್ನುವ ಪದವು ಆಧುನಿಕವಾಗಿ ಬಳಕೆಗೆ ಬಂದರೂ ಇದಕ್ಕೆ ಸಂಬಂಧಿಸಿದಂತೆ ಗೊತ್ತೋ ಗೊತ್ತಿಲ್ಲದೆ ನಮ್ಮ ಇತಿಹಾಸಕಾಲದ ರಾಜರ ಆಳ್ವಿಕೆಯ ಕಾಲದಲ್ಲೇ ಇದರ ಬಳಕೆಯನ್ನು ನೋಡಬಹುದಾಗಿದೆ. ಹೇಗೆಂದರೆ ಒಬ್ಬ ರಾಜನು ಬೇರೆ ಬೇರೆ ರಾಜ್ಯಕ್ಕೆ ಪ್ರವಾಸ ಅಥವಾ ಇನ್ನ್ಯಾವುದೋ ವಿಚಾರವಾಗಿ ಭೇಟಿನೀಡಿದಾಗ ಅಲ್ಲಿನ ಕಲಾವಿದರ ಕಲಾಕೃತಿಗಳನ್ನು ನೋಡಿ ಆ ತರದ ಕಲಾಕೃತಿಗಳನ್ನು ನಮ್ಮ ರಾಜ್ಯದಲ್ಲಿಯೂ ಹಾಗೂ ನಮ್ಮ ರಾಜ್ಯದ ಕಲಾವಿದರಿಗೂ ಪರಿಚಯಿಸುವ ನಿಟ್ಟಿನಲ್ಲಿ ಬೇರೆ ರಾಜ್ಯದ ಅಥವಾ ವಿಶೇಷ ತರಬೇತಿ ನೀಡಲು ನಿವಾಸಿ ಕಲಾವಿದರಾಗಿ ನಮ್ಮ ರಾಜ್ಯಕ್ಕೆ ಕರೆಸಿ ಆಶ್ರಯ ನೀಡಿ ರಾಜರ ಹೇಳಿಕೆಯಮೇರೆಗೆ ಕಲಾಕೃತಿ ರಚಿಸುವುದು ಮತ್ತು ನಮ್ಮ ನಾಡಿನ ಕಲಾವಿದರಿಗು ಕಲಿಸುವುದು ಮತ್ತು ಒಬ್ಬರನ್ನ ನೋಡಿ ಮತ್ತೊಬ್ಬರು ಕಲಿಯುವುದಾಗಿದೆ.

ಈ ತರದ ಉದಾಹರಣೆಗಳು ನೋಡೊದಾದರೆ, "ಹುಮಾಯೂನ್ ಹದಿನೈದು ವರ್ಷ ದೇಶಭ್ರಷ್ಟನಾಗಿ ಪರ್ಷಿಯಾ ಮತ್ತು ಆಫ್ಘಾನಿಸ್ಥಾನಗಳಲ್ಲಿ ಇದ್ದಾಗ ಪ್ರಸಿದ್ದ ಪರ್ಷಿಯಾ ಕಲಾವಿದ ಬಿಹ್ಜಾದನ ಶಿಷ್ಯರ ಸಂಪರ್ಕ ಪಡೆದು.ಆತ, ಮಗ ಅಕ್ಬರ್‌ನೋಡನೆ ಭಾರತಕ್ಕೆ ಹಿಂದಿರುಗಿದಾಗ ಅವರನ್ನೂ ಕರೆತಂದ.ಹೀಗೆ ಭಾರತಕ್ಕೆ ಬಂದ ಸಮದ್ ಮತ್ತು ಉದಾರಿ, ಭಾರತದ ವಿವಿಧ ಭಾಗಗಳಿಂದ ನೂರಕ್ಕೂ ಹೆಚ್ಚು ಹಿಂದೂ ಕಲಾವಿದರನ್ನು ಕರೆಸಿ ಚಿತ್ರಶಾಲೆಗಳನ್ನು ಸ್ಥಾಪಿಸಿ ಕೆಲಸ ಮಾಡಿಸಿದ. ಹೀಗೆ ಅನೇಕ ಕಲಾಕೃತಿಗಳನ್ನು ರಚಿಸುತ್ತಾ, ಜಹಾಂಗೀರನ ಕಾಲದಲ್ಲಿ ವಾಸ್ತವಿಕ ಸೌಂದರ್ಯದಿಂದ ಕೂಡಿದ ಮೊಘಲ ಶೈಲಿ"[೧] ಸ್ಪಷ್ಟರೂಪ ತಳೆದಿತ್ತು. ಹಾಗೂ ನಮ್ಮ ಕರ್ನಾಟಕದ ಹಿನ್ನಲೆಯಲ್ಲಿ ಗಮನಿಸಿದಾಗ ವಾಸ್ತುಕಲೆಗೆ ಹೆಸರು ವಾಸಿಯಾದ ಐಹೊಳೆ, ಪಟ್ಟದಕಲ್ಲು ನೋಡಿದಾಗ ಅಲ್ಲಿ ವೈಷ್ಯ, ನಾಗರ, ದ್ರಾವಿಡ ಶೈಲಿಗಳಿಗೆ ಸಂಬಂಧಿಸಿದ ವಾಸ್ತುಶಿಲ್ಪವನ್ನು ನಾವು ನೋಡಬಹುದು, ಕಾರಣ ಆಗಿನ ಕಾಲದಲ್ಲಿ ಅನೇಕ ರಾಜರು ಕಲೆ ಮತ್ತು ಸಂಸ್ಕೃತಿಯನ್ನು ಪರಿಚಯಿಸಲು ಹೀಗೆಅನೇಕ ಕಾರಣಗಳಿಗಾಗಿ ರಾಜರು ಕಲಾವಿದರನ್ನು ಬೇರೆ ಬೇರೆ ಪ್ರದೇಶದಿಂದ ಆಹ್ವಾನಿಸಿ ಕಲಾಕೃತಿ ರಚಿಸಲು ಪ್ರೋತ್ಸಾಹಿಸುತ್ತಿದ್ದರೆಂದು ತಿಳಿಯುತ್ತದೆ. ಹಾಗೂ ಎಲ್ಲಾ ಶೈಲಿಯ ದೇವಾಲಯಗಳನ್ನು ಒಂದೇಕಡೆ ನೋಡಿದಾಗ ನಾವು ಆಗಿನ ಕಾಲದಲ್ಲಿಯೂ ಬೇರೆ ಬೇರೆ ರಾಜ್ಯದ ನಿವಾಸಿ ಕಲಾವಿದರನ್ನು ಆಹ್ವಾನಿಸಿ ಶಿಬಿರವನ್ನು ಮಾಡಿರಬಹುದೆಂದು ಉಹಿಸಬಹುದಾಗಿದೆ.

ಹಾಗೆಯೇ ಈ ಅಧುನಿಕ ಕಾಲದಲ್ಲಿ ಕಲಾವಿದರಿಗೆ ಸಮಕಾಲಿನ ಪ್ರಜ್ಞೆಯ ಬೆಳವಣಿಗೆಗೆ ಬೇರೆ ಬೇರೆ ದೇಶದ, ನಾಡಿನ ಕಲಾವಿದರುಗಳನ್ನು ತಮ್ಮ ನಾಡಿಗೆ ಆಹ್ವಾನಿಸಿ ಆ ನಾಡಿನ ಕಲೆ ಮತ್ತು ಶೈಲಿಯ ಹಾಗೂ ಆ ನಾಡಿನ ಪ್ರಾದೇಶಿಕತೆಯ ಕುರಿತು ಪರಿಚಯಿಸುವುದು ಹಾಗೂ ನಮ್ಮನಾಡಿನಕಲೆ, ಸಂಸ್ಕೃತಿಯನ್ನು ಅವರಿಗೆ ಪರಿಚಯಿಸುವುದಲ್ಲದೆ, ಎರಡು ದೇಶದ

೧. ಎಂ.ಎಚ್. ಕೃಷ್ಣಯ್ಯ : ಕಲಾ ಸಂಸ್ಕೃತಿ. ಪುಟ ಸಂ: ೭

ಕಲಾವಿದರ ಪರಸ್ಪರ ಪರಿಚಯ ಮತ್ತು ಶೈಲಿಯ ವಿಲಿನತೆ ಇತ್ಯಾದಿ ಬೆಳವಣಿಗೆಗಳನ್ನು ಈ ತರದ ಶಿಬಿರಗಳಲ್ಲಿ ನೋಡಬಹುದಾಗಿದೆ. ರೆಸಿಡೆನ್ಸಿಯಂತಹ ಶಿಬಿರಗಳು ಕ್ರಿಸ್ತಪೂರ್ವದಿಂದ ಆಧುನಿಕ ಕಾಲದವರೆಗೆ ತನ್ನ ಸ್ವರೂಪ, ಉದ್ದೇಶಗಳು ಬೇರೆ ಬೇರೆ ರೀತಿಯಲ್ಲಿ ಬೆಳೆದುಬಂದಿದ್ದು ಒಟ್ಟಾರೆ ರೆಸಿಡೆನ್ಸಿ ಕಲಾ ಶಿಬಿರವೆಂದರೆ ಒಬ್ಬ ವಿಶೇಷ ಕಲಾವಿದನನ್ನು ನಿವಾಸಿ ಕಲಾವಿದನಾಗಿ ಆಗಮಿಸಿ ಕಲೆಯಕುರಿತು ಮಾರ್ಗದರ್ಶನ ನೀಡುವುದಾಗಿದೆ ಎಂದು ಹೇಳಬಹುದು. ಈ ನಿಟ್ಟಿನಲ್ಲಿ ಕಲಾಕೇಂದ್ರವು ಅನೇಕ ಶಿಬಿರಗಳನ್ನು ಕೈಗೊಂಡಿರುವುದನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಮತ್ತೆ ರೆಸಿಡೆನ್ಸಿ ಪದವನ್ನು ಬಳಸಿಕೊಂಡು ವಿದೇಶದಲ್ಲಿ ಪುನರ್ಜನ್ಮ ಪಡೆದಿದ್ದು.ಅದು ನಮ್ಮ ಭಾರತದಲ್ಲಿ ಪ್ರಚಲಿತದಲ್ಲಿದೆ ಎನ್ನಬಹುದು.ಈ ಹಿನ್ನೆಲೆಯಲ್ಲಿ ಸರಕಾರ ಮತ್ತು ಸರಕಾರೇತರ ಸಂಸ್ಥೆಗಳಿಂದ ಅನೇಕ ರೆಸಿಡೆನ್ಸಿ ಕರ್ಯಕ್ರಮಗಳು ಚಾಲನೆಯಲ್ಲಿವೆ. ಈ ನಿಟ್ಟಿನಲ್ಲಿ ಕೇಂದ್ರ ಲಲಿತಕಲ ಅಕಾಡೆಮಿ ಕೂಡ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದೆ.ಅವುಗಳಲ್ಲಿ ಈ ಕೆಳಗಿನಂತೆ ನೋಡಬಹುದಾಗಿದೆ.

2.೧. ಆರ್ಟಿಸ್ಟ್ ಇನ್ ರೆಸಿಡೆನ್ಸಿ (ಪೇಂಟಿಂಗ್)

ದಿನಾಂಕ ೨೩-೦೮-೧೪ ರಂದು ನಡೆದ ಆರ್ಟಿಸ್ಟ್ ಇನ್ ರೆಸಿಡೆನ್ಸಿಕಾರ್ಯಕ್ರಮಕ್ಕಾಗಿ ಕೇಂದ್ರವು ಹಿರಿಯ ಕಲಾವಿದ ಶ್ರೀ ವಿ. ವಿಶ್ವನಾಥನ ರವರನ್ನು ಆಹ್ವಾನಿಸಲಾಗಿತ್ತು.ಆಹ್ವಾನಿತ ಕಲಾವಿದ ಈ ಕಾರ್ಯಕ್ರಮದಲ್ಲಿ ಚಿತ್ರಕಲೆ ಮತ್ತು ತಂತ್ರಗಾರಿಕೆಯ ಕುರಿತು ಪ್ರಾತ್ಯಕ್ಷಿಕೆಯನ್ನು ನೀಡಿದರು. ಹಾಗೂ ಕೇಂದ್ರದ ಕೋರಿಕೆಯಂತೆ ಈ ಕೆಳಗಿನ ಕಾಲೇಜುಗಳ ವಿದ್ಯಾರ್ಥಿಗಳನ್ನು ಆಹ್ವಾನಿತ ಕಲಾವಿದರ ಪ್ರದರ್ಶನಕ್ಕೆ ಹಾಜರಾಗುವಂತೆ ವೀಕ್ಷಕರಾಗಿ ಕಳುಹಿಸಲಾಗಿತ್ತು. ಸರ್ಕಾರಿ ಕಾಲೇಜು ಆಫ್ ಫೈನ್ ಆರ್ಟ್ ಚೆನ್ನೈ, ಸ್ಟೆಲ್ಲಾ ಮಾರಿಸ್ ಕಾಲೇಜು ಚೆನ್ನೈ, ಕಲಾಕ್ಷೇತ್ರ ಫೌಂಡೇಶನ್ ಚೆನ್ನೈ, ಸರ್ಕಾರಿ ಕುಂಬಕೋಣಂನ ಲಲಿತಕಲಾ ಕಾಲೇಜು.ನಂತರಕಲಾವಿದ ಶ್ರೀ ವಿ. ವಿಶ್ವನಾಥನ್ ಅವರ ಸ್ಲೈಡ್ ಪ್ರಸ್ತುತಿಯನ್ನು ೨೩-೦೮-೧೪ ರಂದು ಮಧ್ಯಾಹ್ನ ೨.೩೦ ಕ್ಕೆ ತೋರಿಸಲಾಯಿತು.ಇದರ ನಂತರ ಪ್ರಸಿದ್ಧ ಕಲಾ ಬರಹ ಗಾರತಿ ಡಾ.ಶ್ರೀಮತಿ ಗೀತಾ ಅವರು ಕಲಾವಿದರೊಂದಿಗೆ ಕಲಾವಿದ - ಬರಹಗಾರ, ಸಂಭಾಷಣೆ ಇತ್ಯಾದಿಗಳ ಕುರಿತು ಸಂವಾದಗಳು ನಡೆದವು.

2.೨. ಆರ್ಟಿಸ್ಟ್ ಇನ್ ರೆಸಿಡೆನ್ಸಿ (ಪೇಂಟಿಂಗ್) ಮತ್ತು ಸ್ಲೈಡ್ ಪ್ರೆಜೆಂಟೇಶನ್

ದಿನಾಂಕ ೦೮-೦೨-೨೦೧೬ ರಿಂದ ೧೨-೦೨-೨೦೧೬ ರ ವರೆಗೆ ಚೆನ್ನೈನ ಪ್ರಾದೇಶಿಕ ಕೇಂದ್ರ ಹಾಗೂ ಚೆನ್ನೈನ ಸರ್ಕಾರಿ ಕಾಲೇಜ ಆಫ್ ಫೈನ್ ಆರ್ಟ್ ಸಹಯೋಗದೊಂದಿಗೆ ಕಾಲೇಜಿನ ಆವರಣದಲ್ಲಿಆಯೋಜಿಸಿತು.ಈ ಕಾರ್ಯ ಕ್ರಮದಲ್ಲಿ ನಾಗ್ಪುರದ ಹಿರಿಯ ವರ್ಣ ಚಿತ್ರಕಾರ ಪ್ರೊ.ಪ್ರೋಮೋದ್ ಬಾಬು ರಾಮ್ಟೇಕೆರವರು ನಿವಾಸಿ ಕಲಾವಿದನಾಗಿ ಆಹ್ವಾನಿಸಲಾಯಿತು.ಇದರಲ್ಲಿ

ಚಿತ್ರಕಲೆ ಮತ್ತು ಜೀವನ ಅಧ್ಯಯನ ಪ್ರದರ್ಶನ ಮತ್ತು ವಿದ್ಯಾರ್ಥಿಗಳೊಂದಿಗೆ ಸಂವಾದಾತ್ಮಕ ಕಾರ್ಯಕ್ರಮವನ್ನು ಆಯೋಜಿಸಲಾಗಿತು.

2.೩. ಆರ್ಟಿಸ್ಟ್ ಇನ್ ರೆಸಿಡೆನ್ಸಿ (ಪ್ರಿಂಟ್-ಮೇಕಿಂಗ್)ಮತ್ತು ಸ್ಲೈಡ್ ಪ್ರೆಜೆಂಟೇಶನ್

ಚೆನ್ನೈನ ಪ್ರಾದೇಶಿಕ ಕೇಂದ್ರ ಹಾಗೂ ಚೆನ್ನೈನ ಕಲಾಕ್ಷೇತ್ರ ಪ್ರತಿಷ್ಠಾನದ ಸಹಯೋಗದೊಂದಿಗೆ ದಿನಾಂಕ ೧೫-೦೨-೨೦೧೬ ರಿಂದ ೨೨-೦೨-೨೦೧೬ರ ಅವಧಿಯಲ್ಲಿಆಯೋಜಿಸಲಾಗಿತ್ತು.ಈ ಕಾರ್ಯಕ್ರಮದಲ್ಲಿ ಮುಂಬೈನ ಹಿರಿಯ ಮುದ್ರಣ ಕಲಾವಿದ ಪ್ರೊ.ಕೆ.ಎಸ್. ವಿಶ್ವಭಾರತಿ ಅವರನ್ನು ನಿವಾಸಿ ಕಲಾವಿದರಾಗಿ ಆಹ್ವಾನಿಸಲಾಗಿತ್ತು.ಹಾಗೂ ಕಾರ್ಯಕ್ರಮದಲ್ಲಿ ಮುದ್ರಣ ತಯಾರಿಕೆ, ರೇಖಾಚಿತ್ರ ಪ್ರದರ್ಶನ ಮತ್ತುವಿದ್ಯಾರ್ಥಿಗಳೊಂದಿಗೆ ಸಂವಾದಾತ್ಮಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

3.ಪ್ರದರ್ಶನ

ಪ್ರದರ್ಶನವು ಕಲಾಚಟುವಟಿಕೆಗಳಲ್ಲಿ ಬರುವ ಅತ್ಯಂತ ಪ್ರಮುಖವಾದ ಒಂದು ಚಟುವಟಿಕೆಯೆನ್ನಬಹುದು.ಏಕೆಂದರೆ ಒಬ್ಬಕಲಾವಿದನು ತನ್ನ ಸೃಜನಾತ್ಮಕ ಅಭಿವ್ಯಕ್ತಿಯಿಂದ ಅನೇಕ ಕಲಾಕೃತಿಗಳನ್ನು ರಚಿಸಿ ತನ್ನ ಕಲಾಕೃತಿಗಳ ಮೂಲಕ ಸಮಾಜಕ್ಕೆ ಹಾಗೂ ಸಹೃದಯರಿಗೆಮತ್ತು ಕಲಾವಿದರಿಗೆ ಹತ್ತಿರವಾಗಲು ಉತ್ತಮವಾದ ವೇದಿಕೆಯೆನ್ನಬಹುದು.ಕಲಾ ಪ್ರದರ್ಶನವು ಅಕಾಡೆಮಿಗಳು ಅನೇಕ ರೀತಿಯಲ್ಲಿ ಏರ್ಪಡಿಸುತ್ತಿರುವುದನ್ನು ಪ್ರಸ್ತುತ ದಿನಗಳಲ್ಲಿ ನಾವು ನೋಡಬಹುದಾಗಿದೆ. ಉದಾಹರಣೆಗೆ ನಾಡಿನ ಕಲಾವಿದರ ಕಲಾಕೃತಿಗಳನ್ನು ಆಯ್ಕೆಮಾಡಿ ಪ್ರದರ್ಶಿಸಿ ಅವುಗಳಲ್ಲಿ ಉತ್ತಮವಾದ ಕಲಾಕೃತಿಗಳಿಗೆ ಬಹುಮಾನ ನೀಡುವಂತಹ ವಾರ್ಷಿಕ ಕಲಾಪ್ರದರ್ಶನ, ಹೆಸರಾಂತ ಕಲಾವಿದರ ಕಲಾಕೃತಿಗಳನ್ನು ಸಂಗ್ರಹಿಸಿ ದೇಶದ ಹೆಸರಾಂತ ಗ್ಯಾಲರಿಗಳಲ್ಲಿ (ಎನ.ಜಿ.ಎಮ್.ಎ) ಪ್ರದರ್ಶಿಸುವುದು, ಹೀಗೆ ಅನೇಕ ರೀತಿಯ ಕಲಾ ಪ್ರದರ್ಶನಗಳನ್ನು ಅಕಾಡೆಮಿಗಳು ನಡೆಸುತ್ತಿರುವುದನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಪ್ರದರ್ಶನದ ಪ್ರಕಾರಗಳು

೧.ವಾರ್ಷಿಕ ಪ್ರದರ್ಶನ

೨. ಯುವ ಮತ್ತು ಹಿರಿಯ ಕಲಾವಿದರ ಕಲಾಕೃತಿಗಳ ಪ್ರದರ್ಶನ

೩. ಬಿನಾಲೆ ಮತ್ತು ಟ್ರಿನಾಲೆ ಪ್ರದರ್ಶನ

೪. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಕಲಾ ಮೇಳ ಪ್ರದರ್ಶನ

3.೧. ಕೃಷ್ಣ ರೆಡ್ಡಿಯವರ ರೆಟ್ರೋ ಸ್ಪೆಕ್ಟಿವ್ ಎಕ್ಸಿಬಿಷನ್

ಚೆನ್ನೈನ ಪ್ರಾದೇಶಿಕ ಕೇಂದ್ರವು ದಿನಾಂಕ ೦೯-೦೯-೧೪ ಮತ್ತು ೨೦-೦೯-೧೪ರ ವರೆಗೆ ಪ್ರೊ.ಕೃಷ್ಣರೆಡ್ಡಿಯವರ ಕಲಾಕೃತಿಗಳು ಕೇಂದ್ರದ ಗ್ಯಾಲರಿಯಲ್ಲಿ ರೆಟ್ರೋ ಸ್ಪೆಕ್ಟಿವ್ ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಹಾಗೂ ೦೯-೦೯-೨೦೧೪ ರಂದು (ಮಂಗಳವಾರ) ಸಂಜೆ ೬.೦೦ ಕ್ಕೆ ಪ್ರೊ.ಆರ್.ಬಿ. ಭಾಸ್ಕರನ್ ಪ್ರಖ್ಯಾತ ವರ್ಣಚಿತ್ರಕಾರಮುದ್ರಣ ಕಲಾವಿದರು ಮತ್ತು ಲಲಿತಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷರು ಉದ್ಘಾಟಿಸಿದರು.ಈ ಪ್ರದರ್ಶನದ ಅಂಗವಾಗಿ ಪ್ರೊ.ಅನಂತ ನಿಕಮ್ ಮುಖ್ಯಸ್ಥರು ಮುದ್ರಣತಯಾರಿಕೆ ವಿಭಾಗ, ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್ ಮುಂಬೈಇವರು ಏಕಕಾಲದಲ್ಲಿ ಬಣ್ಣದ ಮುದ್ರಣ ತಯಾರಿಕೆಯ ಕುರಿತು ಪ್ರಾತ್ಯಕ್ಷಿಕೆಯನ್ನು ನೀಡಿದರು. ಹಾಗೂ ಕೇಂದ್ರದ ಗ್ರಾಫಿಕ್ ಕಾರ್ಯಾಗಾರದಲ್ಲಿ ಮುದ್ರಣ ತಯಾರಿಕೆಯ ಸಿದ್ದತೆಯ ವಿಧಾನಗಳನ್ನು ೧೨-೦೯-೨೦೧೪ ಬೆಳಿಗ್ಗೆ ೧೦.೩೦ ರಿಂದ ಮಧ್ಯಾಹ್ನ ೧.೩೦ ರವರೆಗೆ ತಿಳಿಸಿದರು. ಈ ಕಾರ್ಯದಲ್ಲಿ ಸ್ಥಳೀಯ ಲಲಿತಕಲಾ ಕಾಲೇಜುಗಳ ಸುಮಾರು ೮೦ ವಿದ್ಯಾರ್ಥಿಗಳು ಮತ್ತು ಕೇಂದ್ರದ ಗ್ರಾಫಿಕ್ ಕಾರ್ಯಾಗಾರದ ಕಾರ್ಯನಿರತ ಕಲಾವಿದರು ಉತ್ಸಾಹದಿಂದ ಭಾಗವಹಿಸಿದ್ದರು.

೩-೨. ಪ್ರೊಟ್ರಾಫ್ ರೆಟ್ರೊಸ್ಪೆಕ್ಟಿವ್ ಎಕ್ಸಿಬಿಷನ್, ಕೆ.ಜಿ. ಸುಬ್ರಮಣ್ಯನ್

ಕಲ್ಕತ್ತಾದ 'ಸೀಗಲ್ ಫೌಂಡೇಶನ್ ಫಾರ್ ದಿ ಆರ್ಟ್' ಸಹಯೋಗದೊಂದಿಗೆ ಚೆನ್ನೈನ ಪ್ರಾದೇಶಿಕ ಕೇಂದ್ರವು ಪ್ರೊ.ಕೆ.ಜಿ.ಸುಬ್ರಮಣ್ಯನ್ ರವರ ಹೊಸ ಕಲಾಕೃತಿಗಳ ಪ್ರದರ್ಶನವನ್ನು ದಿನಾಂಕ ೦೪-೧೧-೨೦೧೪ ಮತ್ತು ೧೫-೧೧-೨೦೧೪ರ ವರೆಗೆಕೇಂದ್ರದ ಗ್ಯಾಲರಿಯಲ್ಲಿ ಆಯೋಜಿಸಿತ್ತು.ಈ ಪ್ರದರ್ಶನವನ್ನು ೦೪-೧೧-೨೦೧೪ ರಂದು ಸಂಜೆ ೬ ಗಂಟೆಗೆ ತಮಿಳುನಾಡಿನ ಗವರ್ನರ್ ಡಾ.ಕೆ.ರೋಸಾಯಾ ಉದ್ಘಾಟಿಸಿದರು.

3.೩. ಫಿಲ್ಮ ಪ್ರದರ್ಶನಗಳ ಸ್ಕ್ರೀನಿಂಗ್

ಬೆಂಗಳೂರಿನ ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್ ಸಹಯೋಗದೊಂದಿಗೆ ಕೇಂದ್ರವು ೦೭-೧೧-೨೦೧೪ ರಿಂದ ೦೯-೧೧-೨೦೧೪ ರವರೆಗೆ ಮೂರು ದಿನಗಳ ಕಾಲ ವಿಜ್ಯುವಲ್ ಆರ್ಟ್ ಕುರಿತ ಚಲನ ಚಿತ್ರೋತ್ಸವವನ್ನು (ಮಿಸ್ ಡೊರೊಥಿಯಾ ಮಚಿಂಗಲ್ ಸಂಗ್ರಹದಿಂದ) ಆಯೋಜಿಸಲಾಗಿತ್ತು.

3.೪. ದಿ ಅರ್ಥ್ (ಭೂಮಿಯ ವಿಷಯಗಳು)

ಇಂಡೋ ಕೊರಿಯನ್ ಸೆರಾಮಿಕ್ ರೆಸಿಡೆನ್ಸಿ ಮತ್ತು ಪ್ರದರ್ಶನವನ್ನು, ಚೆನ್ನೈನ ಪ್ರಾದೇಶಿಕ ಕೇಂದ್ರ, ಇಂಡೋ ಕೊರಿಯನ್ ಸಾಂಸ್ಕೃತಿಕ ಮತ್ತು ಮಾಹಿತಿಕೇಂದ್ರ ಚೆನ್ನೈ,ಕಲಾಕ್ಷೇತ್ರ ಫೌಂಡೇಶನ್,

ತಿರುವಣ್ಣಮಿಯೂರ್ ಚೆನ್ನೈ ಮತ್ತು ಆರ್ಟ್‌ಕೌನ್ಸಿಲ್ ಆಫ್ ಕೊರಿಯಾ, ಸಿಯೋಲ್ ಸಹಯೋಗದೊಂದಿಗೆ ಭಾರತ ಮತ್ತು ಕೊರಿಯಾದಿಂದ ೧೨ ಸೆರಾಮಿಕ್ ಕಲಾವಿದರನ್ನು ತಲಾ ೬ ಕಲಾವಿದರನ್ನು ಭೂಮಿಯ ವಿಷಯಗಳು ಒಂದು ಕಾರ್ಯಕ್ರಮವನ್ನು ದಿನಾಂಕ ೧೯-೦೧-೧೫ ಮತ್ತು ೨೩-೦೨-೧೫ರ ವರೆಗೆ ಆಯೋಜಿಸಿತ್ತು. ಪ್ರಾದೇಶಿಕ ಕೇಂದ್ರ ಮತ್ತು ಇಂಕೊ ಕೇಂದ್ರದಿಂದ ಆಹ್ವಾನಿಸಲಾಗಿತ್ತು.**ಭಾರತೀಯ ಕಲಾವಿದರು:** ಶ್ರೀಮತಿ ಜೈದಾ ಜಾಕೋಬ್ ವಡೋದರಾ. ಶ್ರೀಮತಿ ನಿಧಿ ಚೋಪ್ರಾ ಭೋಪಾಲ್, ಶ್ರೀಮತಿ ಶ್ರೀನಿಯಾ ಚೌಧರಿ ನವದೆಹಲಿ, ಶ್ರೀ ಎಸ್. ಪೊಟ್ರಾರಸನ್ ಚೆನ್ನೈ, ಶ್ರೀ ಆಶಿಶ್ ಚೌಧರಿ ಕೋಲ್ಕತಾ, ಶ್ರೀ ಪಾಲ್ಗುಣಿ ಸಮಂತಾ, ಶಾಂತಿನಿಕೇತನ.**ಕೊರಿಯನ್ ಕಲಾವಿದರು:** ಶ್ರೀ ಕಿಮ್ ಸೆಯುಂಗ್ ಟೇಕ್, ಕಿಮ್ ಯಂಗ್ ಯುನ್, ಶ್ರೀ ಕಿಮ್ ಜೇಗ್ಯೂ, ಶ್ರೀ ಯೂ ಯುಜಿಯಾಂಗ್, ಶ್ರೀ ಜಂಗ್ ಹೈಸೂಕಾಂಡ್ ಶ್ರೀ ಸನ್ ಜಿನ್ಹೀ.

ಈ ರೆಸಿಡೆನ್ಸಿ ಅವಧಿಯಲ್ಲಿ ನಿರ್ಮಿಸಲಾದ ಕಲಾಕೃತಿಗಳ ಪ್ರದರ್ಶನವನ್ನು ಕೇಂದ್ರವು ತನ್ನ ನೆಲ ಅಂತಸ್ಥಿನ ಗ್ಯಾಲರಿಯಲ್ಲಿ ದಿನಾಂಕ ೨೪-೦೨-೨೦೧೫ ಮತ್ತು ೦೫-೦೩-೨೦೧೫ರ ವರೆಗೆ ಏರ್ಪಡಿಸಿತ್ತು.

3.೫.'ಚೆನ್ನೈ ಚೇಂಬರ್ ಬಿನಾಲೆ' ಶೀರ್ಷಿಕೆಯ ಪ್ರದರ್ಶನವು ಕೊರಿಯಾದಿಂದ ಸಮಕಾಲೀನ ವರ್ಣಚಿತ್ರಗಳ ಪ್ರದರ್ಶನವು ದಿನಾಂಕ ೨೭-೦೭-೨೦೧೫ ಮತ್ತು ೦೬-೦೮-೨೦೧೫ರ ವರೆಗೆ ಚೆನ್ನೈನ ಪ್ರಾದೇಶಿಕ ಕೇಂದ್ರದ ಗ್ಯಾಲರಿಗಳಲ್ಲಿ ನಡೆಸಿತು. ಕೊರಿಯಾದ ಸಮಕಾಲೀನ ವರ್ಣ ಚಿತ್ರಗಳ ವ್ಯಾಪ್ತಿ ಮತ್ತು ವೈವಿಧ್ಯತೆಪ್ರದರ್ಶನದಲ್ಲಿರುವ ೧೨೨ ವರ್ಣಚಿತ್ರಗಳು ಮತ್ತು ೧೦ ಕೊರಿಯನ್ ಕಲಾವಿದರ ಕೃತಿಗಳಿದ್ದವು.ಚೆನ್ನೈನಲ್ಲಿನ ಕಲಾವಿದರು ತಮ್ಮ ಕೃತಿಗಳನ್ನು ಪರಿಚಯಿಸಲು, ಇದು ಸಮಕಾಲೀನ ವರ್ಣಚಿತ್ರಗಳ ಅತಿದೊಡ್ಡ ಪ್ರದರ್ಶನಗಳಲ್ಲಿ ಒಂದಾಗಿತ್ತು.

ಈ ಪ್ರದರ್ಶನವನ್ನು ಸ್ಥಳೀಯ ಕಲಾವಿದರು, ಕಲಾಪ್ರೇಮಿಗಳು ಮತ್ತು ಸಹೃದಯರುಸದುಪಯೋಗ ಪಡೆದುಕೊಂಡರು.

3.೬. ಎಮರೆಜಿಂಗ ಕ್ಯಾನ್ವಾಸ್

ಇಂಡೋ ಕೊರಿಯನ್ ಯುವ ಕಲಾವಿದರ ಪ್ರದರ್ಶನವುಲಲಿತಕಲಾ ಅಕಾಡೆಮಿ ಪ್ರಾದೇಶಿಕ ಕೇಂದ್ರ ದಿನಾಂಕ ೦೫-೧೧-೨೦೧೫ ರಿಂದ ೧೫-೧೧-೨೦೧೫ ರವರೆಗೆ. 'ದಿ ಎಮರೆಜಿಂಗ ಕ್ಯಾನ್ವಾಸ್' ಸರಣಿಯ ಮೂರನೇ ಆವೃತ್ತಿಯು ೨೨ ಯುವ ಕಲಾವಿದರ ಕೃತಿಗಳನ್ನು ಪ್ರದರ್ಶಿಸಲಾಯಿತು.ಇದರಲ್ಲಿ ೧೧ ಕಲಾವಿದರು ಕೊರಿಯಾ ಮತ್ತು ೧೧ ಭಾರತದ ಕಲಾಪಿದರ ಕೃತಿಗಳು ಹಲವಾರು ತಂತ್ರಗಳು ಮತ್ತು ಪರಿಕಲ್ಪನಾ ಕಾಳಜಿಗಳನ್ನು ಪ್ರದರ್ಶಿಸುವಂತಿದ್ದವು.ಈ ಪ್ರದರ್ಶನವನ್ನು ಸ್ಥಳೀಯ ಕಲಾವಿದರು, ಕಲಾಪ್ರೇಮಿಗಳು ಸದುಪಯೋಗ ಪಡೆದುಕೊಂಡರು.

3.೭. ಸ್ಕೆಚಸ್-ಸ್ಕ್ರೈಬಲ್ಸ್: ಕೆ.ಜಿ. ಸುಬ್ರಮಣ್ಯನ್

ಲಲಿತಕಲಾ ಅಕಾಡೆಮಿ ಪ್ರಾದೇಶಿಕ ಕೇಂದ್ರಚೆನ್ನೈ ಮತ್ತು ದಿ ಸೀಗಲ್ ಫೌಂಡೇಶನ್ ಫಾರ್ ದಿ ಆರ್ಟ್, ಕೊಲ್ಕತ್ತಾ ಜಂಟಿಯಾಗಿ, ಪ್ರೊ.ಕೆ.ಜಿ.ಸುಬ್ರಮಣ್ಯನ್‌ರವರ ರೇಖಾಚಿತ್ರಗಳು, ಸ್ಕ್ರೈಬಲ್ಸ್, ರೇಖಾ ಚಿತ್ರಗಳ ಪ್ರದರ್ಶನವನ್ನು ೦೬-೦೧-೨೦೧೬ ರಿಂದ ೧೬-೦೧-೨೦೧೬ರ ವರೆಗೆ ಕೇಂದ್ರದ ಗ್ಯಾಲರಿಯಲ್ಲಿ.ಆಯೋಜಿಸಲಾಯಿತು.

3.೮. ಕೇಂದ್ರದ ಸಂಗ್ರಹದಿಂದ ಆಯ್ದ ಕಲಾಕೃತಿಗಳ ಪ್ರದರ್ಶನ

ಕೇಂದ್ರವು ತನ್ನ ಶಾಶ್ವತ ಸಂಗ್ರಹದಲ್ಲಿರುವ ೨೦೧೪-೧೫ ಮತ್ತು ೨೦೧೫-೧೬, ಎರಡು ವರ್ಷಗಳ ಆಯ್ದ ಕಲಾಕೃತಿಗಳ ಪ್ರದರ್ಶನವನ್ನು ಅದರ ಗ್ಯಾಲರಿಯಲ್ಲಿ ದಿನಾಂಕ ೨೩-೦೩-೨೦೧೬ ರಿಂದ ೩೦-೦೩-೨೦೧೬ರ ಅವಧಿಯವರೆಗೆ ಆಯೋಜಿಸಿತು.

3.೯.೬೨ನೇ ಫೌಂಡೇಷನ್ ಡೇ ಸೆಲೆಬ್ರೇಷನ್

ಪ್ರಾದೇಶಿಕ ಕೇಂದ್ರವು ಆಗಸ್ಟ್ ೫, ೨೦೧೭ ರಂದು ೬೨ ನೇ ಫೌಂಡೇಷನ್ ಡೇ ಸೆಲೆಬ್ರೇಷನ್ ಅನ್ನು ಆಯೋಜಿಸಿತು, ಇದರಲ್ಲಿ ಕೇಂದ್ರದ ೨೦೧೭-೧೮ ರ ಸಂಶೋಧನಾ ವಿದ್ವಾಂಸರುಗಳಾದ, ದುರ್ಗಾ ಪ್ರಸಾದ ಭಗಂಟಿ, ಕಿರಣ ರಾಜಶೇಖರ್, ಎನ್.ಪ್ರಕಾಶ್, ಎಂ.ವಿಸ್‌ರೂಪ್, ಶೇಖಪ್ಪ ಭೀಮಪ್ಪ, ಕೆ.ಸುಮೇಶನ್, ಪವನ್ ಕವಿತ್ಕರ್ ಮತ್ತು ಕೇಂದ್ರದ ಸಿಬ್ಬಂದಿಗಳು ಪ್ರತಿಷ್ಠಾನ ದಿನಾಚರಣೆಯಲ್ಲಿ ಭಾಗವಹಿಸಿದ್ದರು.

3.೧೦.'ಪರಿಕ್ರಮ'ಕಲಾ ಪ್ರದರ್ಶನ

೨೦೧೮-೧೯ ರ ಅವಧಿಯಲ್ಲಿ 'ಪರಿಕ್ರಮ' ಶಿರ್ಷಿಕೆಯ ಕೇಂದ್ರದ ಯುವ ಕಲಾವಿದರ ಕಲಾಕೃತಿಗಳ ಪ್ರದರ್ಶನ ತನ್ನ ಗ್ಯಾಲರಿಯಲ್ಲಿ ಏರ್ಪಡಿಸಿತು.

ಹೀಗೆ ಪ್ರಾದೇಶಿಕ ಕಲಾ ಕೇಂದ್ರವು ಚಿತ್ರ, ಶಿಲ್ಪ, ಮುದ್ರಣ, ಛಾಯಚಿತ್ರಗಳಂತಹ ಅನೇಕ ಕಲಾಕೃತಿಗಳ ಕಲಾಪ್ರದರ್ಶನಗಳು ಕೇಂದ್ರದ ಗ್ಯಾಲರಿಯಲ್ಲಿ ಅನೇಕ ಕಲಾವಿದರಿಂದ ಏರ್ಪಡಿಸಲಾಗಿತ್ತು.

4. ಟ್ರಿನಾಲೆ ಕಲಾ ಪ್ರದರ್ಶನ

ಸಮಕಾಲಿನ ವಿಶ್ವಕಲೆಯ ಸಂಸ್ಕೃತಿಯಿಂದ ಕೇಂದ್ರ ಲಲಿತಕಲಾ ಅಕಾಡೆಮಿಯು ದೇಶದ ಕಲಾವಿದರಿಂದ ಕಲಾಕೃತಿಗಳನ್ನು ಸಂಗ್ರಹಿಸಿ ರಾಷ್ಟ್ರ ಮತ್ತು ಅಂತರಾಷ್ಟ್ರಮಟ್ಟದಲ್ಲಿ ಪ್ರದರ್ಶಿಸುವ ಹೊಣೆಯನ್ನು ಅಕಾಡೆಮಿ ನಿರ್ವಹಿಸುತ್ತದೆ.ಕೇಂದ್ರ ಲಲಿತಕಲಾ ಅಕಾಡೆಮಿಯು ಇದನ್ನು 'ಟ್ರಿನಾಲೆ

ಇನ್ ಇಂಡಿಯಾ' ಎಂಬ ಹೆಸರಿನಿಂದ ೧೯೬೮ ರಲ್ಲಿ ಕರೆಯಲಾಯಿತು.ಇದರಲ್ಲಿ ಪ್ರದರ್ಶನಗೊಂಡ ಶ್ರೇಷ್ಠವಾದ ಕಲಾಕೃತಿಗಳಿಗೆ ನೀಡಲಾಗುತ್ತದೆ.ಇದು ಅಕಾಡೆಮಿ ನಡೆಸುವ ಕಲಾಚಟುವಟಿಕೆಗಳಲ್ಲಿ ಅತ್ಯಂತ ಮಹತ್ವವಾದ ಕಾರ್ಯಕ್ರಮವಾಗಿದೆ.ಇದು ಪ್ರತಿ ಮೂರು ವರ್ಷಗಳಿಗೊಮ್ಮೆ ನಡೆಯುತ್ತದೆ.

5. ಅಂತರರಾಷ್ಟ್ರೀಯ ಕಲಾ ಮೇಳ

ಟ್ರಿನಾಲೆಯ ಕಲಾ ಸಂದರ್ಭದಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿಯು ಕಲಾ ಮೇಳವನ್ನು ಸಹ ನಡೆಸುತಿತ್ತು. ಈ ಕಲಾ ಮೇಳದಲ್ಲಿ ಎಲ್ಲಾಕಲಾವಿದರು ಯಾರ ಅಭ್ಯಾಂತರವಿಲ್ಲದೆ ಭಾಗವಹಿಸಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಬಹುದಿತ್ತು.ನಂತರದ ದಿನಗಳಲ್ಲಿ ಇದು ಅಂತರ್‌ರಾಷ್ಟ್ರೀಯ ಕಲಾಮೇಳವಾಗಿ ನಡೆಸಿತು.ಇದರಲ್ಲಿ ದೇಶ-ವಿದೇಶದ ಕಲಾವಿದರು ಭಾಗವಹಿಸಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಲು ಅವಕಾಶ ಮಾಡಿಕೊಟ್ಟಿತು.

6. ವಿಚಾರ ಸಂಕಿರಣ

ಅಕಾಡೆಮಿಗಳು ನಾಡಿನ ಮತ್ತು ದೇಶ ವಿದೇಶದ ದೃಶ್ಯಕಲಾ ಕ್ಷೇತ್ರಕ್ಕೆ ಸಂಬಂಧಪಟ್ಟ ಅನೇಕ ವೈವಿಧ್ಯಮಯವಾದ ವಿಷಯಗಳ ಕುರಿತು, ಕಲಾ ಇತಿಹಾಸಕಾರರು ಹಾಗೂ ಹಿರಿಯ ಕಲಾವಿದರನ್ನು ಆಹ್ವಾನಿಸಿ ವಿಚಾರ ಸಂಕೀರ್ಣವು ನಡೆಸುತ್ತದೆ.ಹಾಗೂ ಅದರ ಜೊತೆ ಹಿರಿಯ ಕಲಾವಿದರು, ಕಲಾವಿಮರ್ಶಕರಿಂದ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸುತ್ತದೆ.

6.೧.ಎಥ್ನಿಕ್ ಮೈಂಡ್ ಸ್ಕೇಪ್

ದಿನಾಂಕ ೨೩-೦೧-೧೫ ಮತ್ತು ೨೯-೦೧-೧೫ರ ವರೆಗೆ ಉತ್ತರ ಮತ್ತು ಪೂರ್ವ ಭಾಗದ ಕಲಾವಿದರೊಂದಿಗೆ ಸಂವಾದಾತ್ಮಕ ಕಾರ್ಯಾಗಾರವನ್ನು ಕೇಂದ್ರದ ಗ್ಯಾಲರಿಯಲ್ಲಿ ಆಯೋಜಿಸಲಾಗಿತ್ತು.೨೪ ಆಹ್ವಾನಿತ ಕಲಾವಿದರಲ್ಲಿ೨೩ ಕಲಾವಿದರು ಭಾಗವಹಿಸಿದ್ದರು.ಅವರಲ್ಲಿ ಈಶಾನ್ಯದ ೧೦ ಕಲಾವಿದರು ಮತ್ತು ದಕ್ಷಿಣರಾಜ್ಯಗಳ ೧೩ ಕಲಾವಿದರು ಭಾಗವಹಿಸಿದ್ದರು.**ಈಶಾನ್ಯದ ಕಲಾವಿದರು:** ಶ್ರೀ ಅಹುನ್ ಬು ಲೋರಿನ್ ನಾಗಾಲ್ಯಾಂಡ್, ಶ್ರೀ ರಂಗ್ ಸ್ಕೆಂಬೋರ್ ಪಾವ್ಲೆ ಮೇಘಾಲಯ, ಶ್ರೀಮತಿ ಲಾಲ್ಮಿಂಗ್ ಮಾವಿ ಅಮೋಯಿ, ಮಿಜೋರಾಂ, ಶ್ರೀ ರಣಬ್ ಸಹಾ ತ್ರಿಪುರ. **ದಕ್ಷಿಣ ರಾಜ್ಯಗಳ ಕಲಾವಿದರು:** ಶ್ರೀಮತಿ ಕಿರುಸಿಯಾ ರಾಣಿ. ತಮಿಳುನಾಡು, ಶ್ರೀ ಆರ್. ಜನಾರ್ಧನ್ ತಮಿಳುನಾಡು, ಶ್ರೀ ಎಸ್. ಸುಜೀತ್‌ಕುಮಾರ್ ತಮಿಳುನಾಡು, ಶ್ರೀ ಕೆ.ವಿ. ಸುಬ್ರಮಣ್ಯನ್ ಕರ್ನಾಟಕ, ಶ್ರೀ ಸಮೀರ್ ರಾವ್ ಕರ್ನಾಟಕ, ಶ್ರೀ ಇಮ್ರಾನ್ ಲಿಯಾತ್ ಅಲಿಖಾನ್ ಆಂಧ್ರಪ್ರದೇಶ, ಶ್ರೀ ವೆಂಕಟಸ್ವಾಮಿ ತೆಲಂಗಾಣ, ಶ್ರೀ ಪಿ.ಎ.ಸಜೀಶ್ ಕೇರಳ, ಶ್ರೀ ಸಜಿತ್ ಪುತ್ತುಕ್ಕಲವತ್ತಂ ಕೇರಳ, ಶ್ರೀಮತಿ

ತನುಜಾ ರಾಣೆ ಮಹಾರಾಷ್ಟ್ರ, ಶ್ರೀ ಪ್ರಫುಲ್ಲಾ ಶೇಷರಾವ್ ನಾಯ್ಸೆ ಮಹಾರಾಷ್ಟ್ರ, ಶ್ರೀ ವಸಂತಕುಮಾರನ್‌ನ ಪಾಂಡಿಚೆರಿ, ಶ್ರೀ ಕೇದರ್ ಧೋಂಡು ಗೋವಾ.

6.೨. ಎಥ್ನಿಕ್ ಮೈಂಡ್ ಸ್ಕೇಪ್

'ಉತ್ತರ ಪೂರ್ವ ಕಲಾವಿದರೊಂದಿಗೆ ಸಂವಾದಾತ್ಮಕ ಕಾರ್ಯಾಗಾರ'ದಿನಾಂಕ ೨೫-೦೧-೧೬ ಮತ್ತು ೩೧-೦೧-೧೬ರ ವರೆಗೆ ಕೇಂದ್ರದ ಗ್ಯಾಲರಿಯಲ್ಲಿ ಈಶಾನ್ಯ ಕಲಾವಿದರೊಂದಿಗೆ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.ಇದರಲ್ಲಿ ೧೨ ಕಲಾವಿದರು ಉತ್ತರದವರು, ಪೂರ್ವ ಮತ್ತು ದಕ್ಷಿಣ ರಾಜ್ಯಗಳ ೧೨ ಕಲಾವಿದರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.**ಈಶಾನ್ಯದ ಕಲಾವಿದರು:**ಶ್ರೀ ಅನಿರ್ಬನ್ ಧಾರ್ (ಅಸ್ಸಾಂ), ಶ್ರೀ ನಯನ್ ಎಂ. ಕಲಿತಾ (ಅಸ್ಸಾಂ), ಶ್ರೀ ಪಿನಕ್ ಪಾನಿನಾಥ್ (ಅಸ್ಸಾಂ), ಶ್ರೀ ಗೊಲ್ಮೆ ಗಂಡುನ್ ಪುಮ್ (ಇಂಫಾಲ್), ಶ್ರೀ ಗೌತಮ್ ಆಚಾರ್ಜಿ (ಅಗರ್ತಲಾ), ಶ್ರೀಮತಿ ದೀಪಾ ರೈ (ಪೂರ್ವಸಿಕ್ಕಿಂ), ಶ್ರೀ ಲಾಲು ಹಂಕಿಮಾ (ಮಿಜೋರಾಂ), ಶ್ರೀ ಸಂತನು ಧಾರ್ (ತ್ರಿಪುರ), ಶ್ರೀ ವಹೇಂಗ್ ಬಾಮ್ ಖಗೆಂಬಾ ಸಿಂಗ್ (ಮಣಿಪುರ), ಶ್ರೀ ಉಜ್ಜಯನ್ ನಂದಿ (ತ್ರಿಪುರ), ಶ್ರೀ ತುಯಿಯಾರ್ಮಿ ಹಂಗ್ಯೋ (ಮಣಿಪುರ), ಶ್ರೀ ಕೊಂಥೌಜಮ್ ಮೈಕೆಲ್ ಮೀಟ್ಯೆ (ಇಂಫಾಲ್)

ದಕ್ಷಿಣ ರಾಜ್ಯಗಳ ಕಲಾವಿದರು: ಶ್ರೀ ಮನೋಹರ್ ನಟರಾಜನ್ (ತಮಿಳುನಾಡು), ಶ್ರೀ ಪಿ.ಸುರೇಶ್ ಕುಮಾರ್ (ತಮಿಳುನಾಡು), ಶ್ರೀ ಎನ್.ಶ್ರೀನಿವಾಸ ರೆಡ್ಡಿ (ಕರ್ನಾಟಕ),ಶ್ರೀ ಜಿ.ಡಿ.ಭರತೇಶ್, (ಕರ್ನಾಟಕ), ಶ್ರೀ ಕೆ.ಎ. ಅರವಿಂದ್ (ಆಂಧ್ರಪ್ರದೇಶ), ಶ್ರೀ ಎನ್.ವಿ.ಆರ್. ಸುನಿಲ್ ವರ್ಮಾ (ಆಂಧ್ರಪ್ರದೇಶ), ಶ್ರೀ ಶಿನೋಜ್ ಚೋರನ್ (ಕೇರಳ), ಶ್ರೀ ಎನ್.ಆರ್.ಜಿತಿನ್ ಲ್ಲಾಲ್ (ಕೇರಳ), ಶ್ರೀಮತಿ ಶಿಲ್ಪಾ ಪಂಡಿತ್ ಪಟೋಲ್ (ಮಹಾರಾಷ್ಟ್ರ), ಶ್ರೀ ರಾಜೇಶ್ ಅಂಬಲ್ಕರ್ ಮನೋಹರ್ (ಮಹಾರಾಷ್ಟ್ರ), ಶ್ರೀ ಆರ್.ರಾಜಶೇಕರ್ (ಪಾಂಡಿಚೆರಿ), ಶ್ರೀ ವಿಜಯ್ ಎಂ. ಬಂಡಾರೆ, (ಗೋವಾ).

6.೩.ರಿಮೆಂಬರಿಂಗ್ ಆರ್ಟಿಸ್ಟ್.

ಕೇಂದ್ರವು ಹಿರಿಯ ಕಲಾವಿದರ ಸ್ಮರಣಾರ್ಥವಾಗಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಕಲಾವಿದ ದಿವಂಗತ ಶ್ರೀ ಎಸ್. ನಂದಗೋಪಾಲ್ ರವರ ಕುರಿತು ಉಪನ್ಯಾಸವನ್ನು ಶ್ರೇಷ್ಠ ಕಲಾ ವಿಮರ್ಶಕರಾದ ಡಾ.ಎಂ.ಡಿ.ಮುತ್ತುಕುಮಾರಸ್ವಾಮಿಯವರು ದಿನಾಂಕ೨೨-೦೯-೨೦೧೭ ರಂದುಸಂಜೆ ೫.೩೦ ಕ್ಕೆ ಚೆನ್ನೈನ ಪ್ರಾದೇಶಿಕ ಕೇಂದ್ರದಲ್ಲಿ ಆಯೋಜಿಸಲಾಗಿತ್ತು.ಈ ಉಪನ್ಯಾಸದಲ್ಲಿ ಅನೇಕ ಕಲಾವಿದರು ಮತ್ತು ಕಲಾವಿದ್ಯಾರ್ಥಿಗಳು ಭಾಗವಹಿಸಿದ್ದರು.

6.೪. ಬರ್ಥ್ ಸೆಂಟಿನರಿ ಆಫ್ ಧನರಾಜ ಭಗತ್.

ಶ್ರೀ ಧನರಾಜ ಭಗತ್ ರವರ ಜನ್ಮ ಶತಮಾನೋತ್ಸವದ ಉಪನ್ಯಾಸವನ್ನು ಪ್ರಖ್ಯಾತ ಕಲಾ ಇತಿಹಾಸಕಾರ ಮತ್ತು ವಿಮರ್ಶಕರಾದ ಶ್ರೀಮತಿ ಅಶ್ರಫಿ ಎಸ್. ಭಗತ್ ಅವರು ಚೆನ್ನೈನ ಕೇಂದ್ರದಲ್ಲಿ ಡಿಸೆಂಬರ್ ೧೪, ೨೦೧೭ ರಂದು ಆಯೋಜಿಸಲಾಗಿತ್ತು. ಕಲಾವಿದ್ಯಾರ್ಥಿಗಳ ಜೊತೆಗೆ ಹೆಚ್ಚಿನ ಹಿರಿಯ ಕಲಾವಿದರು ಉಪಸ್ಥಿತರಿದ್ದರು.

6.೫. ಚೆನ್ನೈ ಪ್ರಾದೇಶಿಕ ಕೇಂದ್ರದ ಕೊಲೊಬ್ರೇಟಿವ್ ಪ್ರೋಗ್ರಾಮ್‌ಗಳು

ಭಾರತ ರತ್ನ ಡಾ.ಎಂ.ಎಸ್. ಸುಬ್ಬುಲಕ್ಷ್ಮಿಯವರ ಜನ್ಮ ಶತಮಾನಗಳ ಸಮಾವೇಶ ಇಂದಿರಾ ಗಾಂಧಿ ನ್ಯಾಷ್ನಲ್ ಸೆಂಟರ್ ಫಾರ್ ದಿ ಆರ್ಟ್ ಸಹಯೋಗದೊಂದಿಗೆ ಕೇಂದ್ರದ ಗ್ಯಾಲರಿಯಲ್ಲಿ ದಿನಾಂಕ ೩೦.೧೦.೨೦೧೭ ರಿಂದ ೧೭.೧೦.೨೦೧೭ ರವರೆಗೆ ಸಂಗೀತದ ಕುರಿತು ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.ಭಾರತದ ಉಪರಾಷ್ಟ್ರಪತಿಗಳಾದ ಶ್ರೀ ಎಂ.ವೆಂಕಯ್ಯನಾಯ್ಡುರವರು ಮುಖ್ಯ ಅತಿಥಿಗಳಾಗಿ ದಿನಾಂಕ ೧೭.೧೦.೨೦೧೭ ರಂದು ಬೆಳಿಗ್ಗೆ ೧೦.೧೫ ಕ್ಕೆ ಪ್ರದರ್ಶನವನ್ನು ಉದ್ಘಾಟಿಸಿದರು. ಹಾಗೂ ಲಲಿತ ಕಲಾ ಅಕಾಡೆಮಿ ಆಡಳಿತ ಅಧಿಕಾರಿ ಶ್ರೀ ಸಿ.ಎಸ್. ಕೃಷ್ಣಶೆಟ್ಟಿ ಹಾಗೂ ಅನೇಕ ಕಲಾವಿದರು, ಸಹೃದಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

6.೬. ಸೆಲೆಬ್ರೇಷನ್ ಆಫ್ ಹಿಂದಿ ವೀಕ್

ಕೇಂದ್ರವು ದಿನಾಂಕ ೨೪-೦೯-೨೦೧೪ ರಂದು ಹಿಂದಿ ವಾರವನ್ನು ತನ್ನ ಆವರಣದಲ್ಲಿ ಆಚರಿಸಿತು.ಈ ಆಚರಣೆಯಲ್ಲಿ ಕೇಂದ್ರದ ಎಲ್ಲಾ ಸಿಬ್ಬಂದಿಯನ್ನು ಸಕ್ರಿಯವಾಗಿ ಭಾಗವಹಿಸಲು ಪ್ರೋತ್ಸಾಹಿಸಲು ಕೇಂದ್ರವು ಈ ಆಚರಣೆಯ ಸಂದರ್ಭದಲ್ಲಿ ಕೇಂದ್ರದ ಸಿಬ್ಬಂದಿಗೆ ನಗದು ಪ್ರಶಸ್ತಿಗಳೊಂದಿಗೆ ಹಿಂದಿಯಲ್ಲಿ ವಿವಿಧ ಸ್ಪರ್ಧೆಗಳನ್ನು ಇರಿಸಿತು.

೬-೭. ಆರ್ಟ್ ಒಲಂಪಿಯಾಡ್ ಮತ್ತು ಪ್ರಾದೇಶಿಕ ಕೇಂದ್ರದ ಸಹಯೋಗದೊಂದಿಗೆ, ಚೆನ್ನೈನಲ್ಲಿ ೩೦-೧೧-೨೦೧೪ ರಂದು ಕೇಂದ್ರದ ಆವರಣದಲ್ಲಿ ಶಾಲಾ ಮಕ್ಕಳ ವಿವಿಧ ವಯೋಮಾನದವರ ನಡುವೆ 'ಸ್ಮಾಲ್ ಹ್ಯಾಂಡ್ ಬಿಗ್ ಆರ್ಟ್' ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

6.೮.ಚೆನ್ನೈ ಕೇಂದ್ರ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ದಿನಾಂಕ ೨೫-೦೧-೨೦೧೬ ರಿಂದ ೦೧-೦೨-೨೦೧೬ ರ ವರೆಗೆ ತಮ್ಮ ವಿಜ್ಯುವಲ್ ಆರ್ಟ್ ವಿಭಾಗದಲ್ಲಿ ಬೆಂಗಳೂರು ಆರ್ಟಿಸ್ಟ್ ಕಾರ್ಯಕ್ರಮವನ್ನು ಆಯೋಜಿಸಿತು.ಈ ಕಾರ್ಯಕ್ರಮದಲ್ಲಿ ಪ್ರೊ.ಮದನ್

ಲಾಲ್ ಉಪನ್ಯಾಸ ಹಾಗೂ ಕಲಾವಿದರ ಚಲನಚಿತ್ರ ಪ್ರದರ್ಶನವನ್ನು ಮತ್ತು ಆದರ ಕಾರ್ಯ ವೈಖರಿಯನ್ನು ತಿಳಿಸಿದರು.

7. ಪ್ರಾತ್ಯಕ್ಷಿಕೆಗಳು

ಕಲಾವಿದರು ತಮ್ಮ ಕಲಾಕೃತಿಯ ಶೈಲಿ, ತಂತ್ರಗಳಂತಹ ಮೈವಳಿಕೆಗಳನ್ನು, ಆಯಾಮಗಳನ್ನು ಸಹೃದಯನಿಗೆ ತೋರಿಸುವ ನಿಟ್ಟಿನಲ್ಲಿ ಕಲಾವಿದರು ಕಲಾಕೃತಿ ರಚನೆಯ ಮೂಲಕ ತಿಳಿಸುವುದೆ ಪ್ರಾತ್ಯಕ್ಷಿಕೆಯಾಗಿದೆ.ಇತ್ತೀಚಿನ ದಿನಗಳಲ್ಲಿ ಕಲಾವಿದರು ಕಲಾಕೃತಿ ರಚಿಸಿ ಪ್ರಾತ್ಯಕ್ಷಿಕೆ ನೀಡುವುದರ ಜೋತೆಗೆ ಇನ್ನುಳಿದ ತಮ್ಮ ಕಲಾಕೃತಿಗಳನ್ನು ಪ್ರೊಜೆಕ್ಟರ್ ಮೂಲಕ ತೊರಿಸಿ ವಿವರಿಸುವುದೂ ಪ್ರಾತ್ಯಕ್ಷಿಕೆ ಎನ್ನಬಹುದಾಗಿದೆ.

8. ಕಲಾವಿದರಿಗೆ ಶಿಷ್ಯವೇತನ

ಕಲಾ ಶಿಕ್ಷಣ ಮುಗಿಸಿದ ಯುವ ಕಲಾವಿದರಿಗೆ ಕೇಂದ್ರ ಲಲಿತಕಲಾ ಅಕಾಡೆಮಿಯು ಕಲಾ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ ಹೀಗೆ ವಿವಿಧ ವಿಷಯಗಳ ಆಧಾರದ ಮೇಲೆ ದೃಶ್ಯಕಲಾ ಸಂಶೋಧನೆಗಾಗಿ ಕಲಾವಿದರನ್ನು ಕೇಂದ್ರ ಆಯ್ಕೆಮಾಡಿ ಪ್ರಾದೇಶಿಕ ಕೇಂದ್ರಗಳಲ್ಲಿ ಸ್ಥಳಾವಕಾಶ ನೀಡುತ್ತದೆ.ಆಯ್ಕೆಯಾದ ಪ್ರತಿಯೊಬ್ಬ ವಿದ್ಯಾರ್ಥಿಗೆ ಒಂದು ವರ್ಷದವರೆಗೆ ಶಿಷ್ಯವೇತನ ನೀಡುತ್ತದೆ. ಯುವ ಕಲಾವಿದರ ಬೆಳವಣಿಗೆಗೆ ಇದೊಂದು ಮಹತ್ವದ ಕಲಾ ಚಟುವಟಿಕೆಯಾಗಿದೆ.ಈ ಶಿಷ್ಯವೇತನದ ಅರ್ಜಿಯ ನಮೂನೆಯನ್ನು ಅನುಬಂಧದ ಕೊನೆಯಲ್ಲಿ ನೋಡಬಹುದಾಗಿದೆ.

*** ವಿದ್ಯಾರ್ಥಿವೇತನ ನಿಯಮಗಳು**

* ಆಯ್ಕೆಯಾದಕಲಾವಿದರು ಅಕಾಡೆಮಿಯ ಪ್ರಾದೇಶಿಕ ಕೇಂದ್ರಗಳಲ್ಲಿ ಒಂದು ವಿಭಾಗದಲ್ಲಿ ಕೆಲಸ ಮಾಡಬೇಕಾಗುತ್ತದೆ.ಅವರು ಪ್ರತಿ ತಿಂಗಳು ಪ್ರಾದೇಶಿಕ ಕೇಂದ್ರ ಅಥವಾ ಸಂಸ್ಥೆಯ ಮುಖ್ಯಸ್ಥರಿಂದ ಸೂಕ್ತವಾಗಿ ಮತ್ತು ದೃಢೀಕರಿಸಲ್ಪಟ್ಟ ಎರಡು ಕಲಾಕೃತಿಗಳ ಛಾಯಾಚಿತ್ರಗಳನ್ನು ಸಲ್ಲಿಸಬೇಕಾಗುತ್ತದೆ.ಆಯ್ಕೆಯಾದ ಕಲಾವಿದರನ್ನು ಯಾವ ಕೇಂದ್ರಕ್ಕೆ ಕಳುಹಿಸಬೇಕು ಎನ್ನುವುದನ್ನು ಲಲಿತ ಕಲಾ ಅಕಾಡೆಮಿಯ ನಿರ್ಧಾರವು ಅಂತಿಮವಾಗಿರುತ್ತದೆ.

* ಅರ್ಜಿದಾರರು ಭಾರತದಲ್ಲಿ ಕನಿಷ್ಠ ೩ ವರ್ಷಗಳಿಂದ ವಾಸಿಸುತ್ತಿರುವ ಕಲಾವಿದರು ಈ ವಿದ್ಯಾರ್ಥಿವೇತನಕ್ಕೆ ಅರ್ಹರಾಗಿರುತ್ತಾರೆ.

* ಸೂಚಿಸಿರುವ ಪ್ರಾದೇಶಿಕ ಕೇಂದ್ರದಲ್ಲಿಯೇ ಆಯ್ಕೆಯಾದ ಕಲಾವಿದರು ಅಧ್ಯಯನ ಮಾಡಬೇಕಾಗುತ್ತದೆ.ಕೇಂದ್ರ ಬದಲಾವಣೆಗೆ ಅವಕಾಶವಿರುವುದಿಲ್ಲ

* ವಿದ್ಯಾರ್ಥಿವೇತನವನ್ನು ಪೂರ್ಣಗೊಳಿಸುವ ಮೊದಲು ನಾನು ಯಾವುದೇ ಕಾರಣಕ್ಕು ಮಧ್ಯದಲ್ಲಿ ತ್ಯಜಿಸುವುದಿಲ್ಲ ಎಂದು ೫೦ ರೂಪಾಯಿ ಸ್ಟ್ಯಾಂಪ್ ಪೇಪರಿನಲ್ಲಿ ನೋಟರಿಯನ್ನು ಬರೆದುಕೊಡುವುದು ಕಡ್ಡಾಯವಾಗಿರುತ್ತದೆ.

* ವಿದ್ಯಾರ್ಥಿವೇತನವನ್ನು ಪ್ರತಿ ತಿಂಗಳು ಕಲಾವಿದರ ಬ್ಯಾಂಕ್ ಖಾತೆಗೆ ಅಥವಾ ಚೆಕ್ ಮೂಲಕ ವಿತರಿಸಲಾಗುವುದು

* ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಪ್ರದರ್ಶನಗಳಲ್ಲಿ ಈಗಾಗಲೇ ಯಾವುದೇ ಪ್ರಶಸ್ತಿಗಳನ್ನು ಪಡೆದಿರುವ ಅಥವಾ ಈ ಹಿಂದೆ ಲಲಿತಕಲಾ ಅಕಾಡೆಮಿಯ ಸಂಶೋಧನಾ ಅನುದಾನ ಅಥವಾ ವಿದ್ಯಾರ್ಥಿವೇತನವನ್ನು ಪಡೆದ ಕಲಾವಿದರು ಅರ್ಜಿ ಸಲ್ಲಿಸಲು ಅರ್ಹರಲ್ಲ.

* ಹಿಂದಿ ಅಥವಾ ಇಂಗ್ಲೀಷ್ ಹೊರತುಪಡಿಸಿ ಬೇರೆ ಭಾಷೆಯಲ್ಲಿ ಕಲಾಕೃತಿಯಬಗ್ಗೆ ವಿವರಣೆಯ ಲೇಖನಗಳನ್ನು ಕಳುಹಿಸುವ ಅರ್ಜಿದಾರರು ಹಿಂದಿ ಅಥವಾ ಇಂಗ್ಲೀಷ್‌ನಲ್ಲಿ ಅನುವಾದವನ್ನು ಕಳುಹಿಸಬೇಕು.

* ನವದೆಹಲಿಯ ಲಲಿತಕಲಾ ಅಕಾಡೆಮಿ ತನ್ನ ವಿದ್ಯಾರ್ಥಿವೇತನ ಯೋಜನೆಯಡಿ ನೋಂದಾಯಿಸಲಾದ ವಿದ್ವಾಂಸರು ರಚಿಸಿದ ಕೃತಿಗಳ ಚಿತ್ರಗಳನ್ನು ಪುನರುತ್ಪಾದಿಸುವ ಹಕ್ಕನ್ನು ಹೊಂದಿದೆ ಹಾಗೂ ಪರಮನೆಂಟ್ ಸಂಗ್ರಹವಾಗಿ ವಸ್ತುಸಂಗ್ರಹಾಲಯದಂತಹ ಅನೇಕ ಕಡೆ ಸಂಗ್ರಹಗಳಲ್ಲಿ ಪ್ರದರ್ಶನವನ್ನು ಮಾಡಲು, ಅಲ್ಲದೇ ವೈಯಕ್ತಿಕವಾಗಿ ಪ್ರಚಾರಕ್ಕಾಗಿ ಮತ್ತು ಅನೇಕ ಕಾರ್ಯಗಳಿಗೆ ಬಳಿಸಿಕೊಳ್ಳವ ಹಕ್ಕನ್ನು ಅಕಾಡೆಮಿ ಹೊಂದಿರುತ್ತದೆ.ಈ ಎಲಾ ಷರತ್ತುಗಳಿಗೆ ಕಲಾವಿದರು ತಮ್ಮ ವಿದ್ಯಾರ್ಥಿವೇತನ ಅವಧಿಯಲ್ಲಿ ಷರತ್ತುಗಳನ್ನು ಒಪ್ಪಿ ಅರ್ಜಿ ಭರ್ತಿ ಮಾಡುತ್ತಾರೆ.ಮತ್ತು ಕಡ್ಡಾಯ ಷರತ್ತುಗಳಿಗೆ ಬದ್ಧರಾಗಿರಬೇಕಾಗುತ್ತದೆ.

* ನವದೆಹಲಿಯ ಲಲಿತಕಲಾ ಅಕಾಡೆಮಿಯು ವಿದ್ಯಾರ್ಥಿವೇತನ ಯೋಜನೆಯಲ್ಲಿ ಪರಿಣಾಮಕಾರಿ ಷರತ್ತುಗಳನ್ನು ಅಥವಾ ಅಗತ್ಯವಾದ ನಿಯಮ ಯಾವುದೇಸಮಯದಲ್ಲಿ ಅನುಷ್ಠಾನಕ್ಕೆ ರೂಪಿಸಬಹುದು.

ಹೀಗೆ ಈ ಎಲ್ಲಾ ಷರತ್ತುಗಳು ಮತ್ತು ನಿಯಮಗಳಿಗೆ ಒಪ್ಪಿ ಕಲಾವಿದರು ನಡೆದು ಕೊಳ್ಳಬೇಕಾಗುತ್ತದೆ.

9. ಫೆಲೋಶಿಪ್

ಅಕಾಡೆಮಿಯು ಕಲಾಕ್ಷೇತ್ರದಲ್ಲಿ ದುಡಿದಂತಹ ಹೆಸರಾಂತ ಕಲಾವಿದರನ್ನು, ಕಲಾವಿಮರ್ಶಕ, ಇತಿಹಾಸಕಾರರನ್ನು ಗುರುತಿಸಿ ಅವರಿಗೆ ಫೆಲೋಶಿಪ್ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತದೆ. ಇದು ದೃಶ್ಯಕಲಾ ಕ್ಷೇತ್ರದಲ್ಲಿ ಹಿರಿಯ ಕಲಾವಿದರಿಗೆ ಕೇಂದ್ರ ಲಲಿತಕಲಾ ಅಕಾಡೆಮಿ ನೀಡುವ ಉನ್ನತ

ಪ್ರಶಸ್ತಿಯಾಗಿದೆ.ಈ ಫೆಲೋಷಿಪ್‌ಗಳು ಜೂನಿಯರ್ ಮತ್ತು ಸೀನಿಯರ್ ಎಂದು ಎರಡು ರೀತಿಯ ಫೆಲೋಷಿಪ್ ಪ್ರಶಸ್ತಿಗಳನ್ನು ನೀಡಲಾಗುತ್ತದೆ.

10. ಪ್ರಕಾಶನ

ಕೇಂದ್ರ ಲಲಿತಕಲಾ ಅಕಾಡೆಮಿಯು ಕಲಾವಿದರಿಗೆ, ಕಲಾ ಆಸಕ್ತರಿಗೆ, ಕಲಾ ವಿದ್ಯಾರ್ಥಿಗಳಿಗೆ ಮತ್ತು ಸಹೃದಯರಿಗೆ ದೃಶ್ಯಕಲಾ ಕ್ಷೇತ್ರದ ಪರಿಚಯ ಮೂಡಿಸುವ ದೃಷ್ಟಿಯಿಂದ ಸಮಕಾಲೀನ ಕಲೆ, ಸಾಂಪ್ರದಾಯಿಕ ಕಲೆ, ಜನಪದ ಕಲೆ, ಅನೇಕ ಹಿರಿಯಕಲಾವಿದರ ಪರಿಚಯ ಮತ್ತು ಕಲಾಶಿಬಿರದ ಕ್ಯಾಟಲಾಗುಗಳನ್ನು ಪ್ರತಿವರ್ಷ ಅಥವಾ ಸಂದರ್ಭಕ್ಕೆ ತಕ್ಕಂತೆ ಪ್ರಕಟಿಸುತ್ತದೆ. ಅಲ್ಲದೇ ಕಲಾಕ್ಷೇತ್ರಕ್ಕೆ ಸಂಬಂಧಪಟ್ಟ ಐತಿಹಾಸಿಕ ಸ್ಥಳಗಳು ಇತ್ಯಾದಿ ಪುಸ್ತಕಗಳನ್ನು ಪ್ರಕಟಿಸಿ ಗ್ರಂಥಾಲಯದಿಂದ ಜನಸಾಮನ್ಯರಿಗೆ ತಲುಪುವಂತ ಕಾರ್ಯ ಅಕಾಡೆಮಿಯಿಂದ ಕೈಗೊಳ್ಳುತ್ತದೆ.

ಹೀಗೆ ಸುಮಾರು ದಶಕಗಳಿಂದ ಚೆನ್ನೈ ಪ್ರಾದೇಶಿಕ ಕಲಾ ಕೇಂದ್ರವು ವಿವಿಧ ಕಲಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಾ ಬಂದಿದ್ದು, ಚಿತ್ರಕಲೆ ಹಾಗೂ ಶಿಲ್ಪಕಲೆ ಶಿಬಿರ, ಪ್ರದರ್ಶನ ಮತ್ತು ಸಾಹಿತ್ಯದಂತಹ ಅನೇಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ರಾಷ್ಟ್ರಾದ್ಯಂತ ಕಲಾವಿದರು ಮತ್ತು ದೃಶ್ಯಕಲಾ ಕ್ಷೇತ್ರದ ಪ್ರಸಿದ್ಧಿಯನ್ನು ವಿಸ್ತರಿಸಿಕೊಂಡಿದೆ. ಇಂತಹ ಕಾರ್ಯಕ್ರಮಗಳು ಕಲೆ ಹಾಗೂ ಸಾಂಸ್ಕೃತಿಯ ಬೆಳವಣಿಗೆಗೆ ಪೂರಕವಾಗಬಲ್ಲವು ಎನ್ನುವುದನ್ನು ಈ ಕೇಂದ್ರ ನಡೆಸಿಕೊಂಡು ನಿರಂತರವಾಗಿ ಇಂತಹವಿವಿಧ ಕಾರ್ಯ ಚಟುವಟಿಕೆಗಳಿಂದ ತಿಳಿದುಕೊಳ್ಳಬಹುದಾಗಿದೆ. ಹಾಗೂ ಕಲಾಕ್ಷೇತ್ರದ ಬೆಳವಣಿಗೆಗೆ ಅನೇಕ ಕಲಾ ಚಟುವಟಿಕೆಗಳು ನಿರಂತರವಾಗಿ ನಡಿಸುತ್ತಿದೆ.



ಚೆನ್ನೈ ಚೇಂಬರ್ ಬಿನ್ನಾಲೆ ಪ್ರದರ್ಶನ ಉದ್ಘಾಟಿಸುತ್ತಿರುವ ಕೊರಿಯಾದ ಸುಬುಲ್ ಸುನಿಮ್ ಮತ್ತು ಅನೇಕ ಕಲಾವಿದರು



ಸಮಕಾಲಿನ ಮತ್ತು ಸಾಂಪ್ರದಾಯಿಕ ಮ್ಯೂರಲ್ ಕ್ಯಾಂಪ್, ಕಲಾಕೃತಿ ರಚೆನೆಯಲ್ಲಿ ತೊಡಗಿದ ಕಲಾವಿದರು



ಕಲಮ್‌ಕಾರಿ ಪೇಂಟಿಂಗ್ ಕ್ಯಾಂಪ್ ಉದ್ಘಾಟನೆ ಹಿರಿಯ ಕಲಾವಿದರು ಮತ್ತು ಯುವ ಕಲಾವಿದರು




ಸಮಕಾಲಿನ ಮತ್ತು ಸಾಂಪ್ರದಾಯಿಕ ಕಲಾಕೃತಿ ರಚನೆಯಲ್ಲಿ ತೊಡಗಿದ ಕಲಾವಿದರು



ದಿ ಎಮೆರೆಜಿಂಗ್ ಕ್ಯಾನ್ವಾಸ್, ಇಂಡೋ ಕೊರಿಯಾ ಕಲಾವಿದರ ಕಲಾ ಪ್ರದರ್ಶನ



ಕಲಾ ಪ್ರದರ್ಶನ ಉದ್ಘಾಟಿಸುತ್ತಿರುವ ಹಿರಿಯ ಕಲಾವಿದ ಆರ್.ಎಂ. ಪಳನಿಯಪ್ಪನ್




ಕೆ.ಜಿ. ಸುಬ್ರಮಣ್ಯನ್ ರವರ ಸ್ಕೆಚಸ್, ಸ್ಕ್ರೈಬಲ್ಸ್ ಕಲಾ ಪ್ರದರ್ಶನ ವೀಕ್ಷಿಸುತ್ತಿರುವ ಕಲಾವಿದ ವಿಶ್ವನಾಥನ್ ಮತ್ತು ಪಳನಿಯಪ್ಪನ್



ಕಲಾ ಪ್ರದರ್ಶನ ಉದ್ಘಾಟಿಸುತ್ತಿರುವ ಹಿರಿಯ ಕಲಾವಿದ ಆರ್.ಎಂ. ಪಳನಿಯಪ್ಪನ್



ಎಥ್ನಿಕ್ ಮೈಂಡ್ ಸ್ಕೇಪ್ ನ್ಯಾಷ್ನಲ್ ಪೇಂಟಿಂಗ್ ಕ್ಯಾಂಪ್, ಕಲಾವಿದ ವಿಶ್ವನಾಥನ್ ಮತ್ತು ಪಳನಿಯಪ್ಪನ್ ಜೊತೆ ಯುವಕಲಾವಿದರು



ಕಲಾಕೃತಿ ರಚನೆ, ಪ್ರಾತ್ಯಕ್ಷಿಕೆ ನಿಡುತ್ತಿರುವ ಕಲಾವಿದರು



ಆರ್ಟಿಸ್ಟ್ ಇನ್ ರೆಸಿದೆನ್ಸಿ ಶಿಲ್ಪಕಲಾ ಶಿಬಿರದಲ್ಲಿ ಹಿರಿಯ ಶಿಲ್ಪಿ ಮದನ್‌ಲಾಲ್ ರವರೊಂದಿಗೆ ಶಿಬಿರದ ಕಲಾವಿದರು



ಕಲಾಕೃತಿ ರಚೆನೆಯಲ್ಲಿ ತೊಡಗಿದ ಕಲಾವಿದರು



ಆರ್ಟಿಸ್ಟ್ ಇನ್ ರೆಸಿಡೆನ್ಸಿ ಪೇಂಟಿಂಗ್ ಕ್ಯಾಂಪ್, ಕಲಾವಿದ ಪ್ರೊ. ಪ್ರಮೋದ ಬಾಬು ರಾಮ್‌ಟೆಕ್ ಭಾವಚಿತ್ರ ಪ್ರಾತ್ಯಕ್ಷಿಕೆ ನಿಡುತ್ತಿರುವುದು



ಭಾವಚಿತ್ರ ರಚಹೆನೆಯಲ್ಲಿ ತೊಡಗಿದ ಕಲಾವಿದರು



ಆರ್ಟಿಸ್ಟ್ ಇನ್ ರೆಸಿಡೆನ್ಸಿ ಮುದ್ರಣಕಲೆ ಕ್ಯಾಂಪ್, ಉದ್ಘಾಟಿಸುತ್ತಿರುವ ಮುದ್ರಣ ಕಲಾವಿದ ಕೆ.ಎಸ್. ವಿಶ್ವಾಂಬರ





ಕಲಾಕೃತಿ ರಚಹನೆಯಲ್ಲಿ ತೊಡಗಿದ ಕಲಾವಿದ ವಿಶ್ವಾಂಬರ



ಫಿಲಿಮ್ ಫೇಸ್ಟಿವಲ್ ನಲ್ಲಿ ಗೊರ್ಮೆಂಟ್ ಕಾಲೇಜ ಆಫ್ ಆರ್ಟ್ ಚೆನ್ನೈ ನ ವಿದ್ಯಾರ್ಥಿಗಳಿಗೆ ಚಲನಚಿತ್ರ ತೊರಿಸುತ್ತಿರುವುದು



ಕಲಾಕೃತಿ ರಚಹನೆಯಲ್ಲಿ ತೊಡಗಿದ ಕಲಾವಿದ ನಟೇಶ್ ಮುತ್ತುಸ್ವಾಮಿ



೨೦೧೪-೧೫ ಮತ್ತು ೨೦೧೫-೧೬ ರಲ್ಲಿನ ಕೇಂದ್ರದ ಸಂಗ್ರಹಣೆಯಲ್ಲಿನ ಕಲಾಕೃತಿಗಳ ಪ್ರದರ್ಶನ



ಫೋಟೋ ಬಿನ್ನಾಲೆ ವೀಕ್ಷಿಸುತ್ತಿರುವ ಕಲಾವಿದರು ಮತ್ತು ಸಾರ್ವಜನಿಕರು

ಅಧ್ಯಾಯ-ಐದು

ಪ್ರಾದೇಶಿಕ ಕಲಾ ಕೇಂದ್ರದ ಪ್ರಸ್ತುತ ನೋಟ

ಅಧ್ಯಾಯ- ಐದು

ಪ್ರಾದೇಶಿಕ ಕಲಾ ಕೇಂದ್ರದ ಪ್ರಸ್ತುತ ನೋಟ

